ಕೊಡಗು ಸಂಗಾತಿ

ಸ್ಟ್ 1 ರಿಂದ 15, 1999 . ಪಾಕ್ಷಿಕ ಪತ್ರಿಕೆ ಆಟಿ ತಿಂಗ 16 ರಿಂದ 30ರತನಕ

ನಂ. ೩೫, ಸವಿತಾ ನಿಲಯ, ೧ನೇ ಕ್ರಾಸ್, ೪ನೇ ಬ್ಲಾಕ್, ಜಯಲಕ್ಷ್ಮಿಪುರಂ, ಮೈಸೂರು - ೫೭೦ ೦೧೨

ಪಾದಕಿ : ಪಟ್ಟಡ ಶೀಲಾಮಣಿ

ಕನ್ನಡ ಮತ್ತು ಅರೆಭಾಷೆಯ ಏಕೈಕ ಪಾಕ್ಷಿಕ ಪತ್ರಿಕೆ

R. N. N. 240 ಸಂಪುಟ : 3 ಸಂಚಿಕೆ : 1~~4~~5 ಪುಟಗಳು : 24 ಬೆಲೆ ರೂ. : 5-00




ಪೆಮ್ಮಂಡ ಕಾವೇರಪ್ಪ



ಹೆಚ್. ವಿ. ವೆಂಕಟ



ವಿ. ಎಲ್. ಗಣೇಶ್



ಸಿಂಗೂರು ಮೇದಪ್ಪ

ಕಾರ್ಗಿಲ್ ಕಾರ್ಯಾಚರಣೆಯಲ್ಲಿ ವೀರಸ್ವರ್ಗ ಪಡೆದ ಕೊಡಗಿನ ಕಲಿಗಳು, ಸಂಗಾತಿ ಓದುಗರ ಪರವಾಗಿ ನಿಮಗಿದೊ ನಮನಗಳು

ಮನುಷ್ಯನಿಗೆ ನಿತ್ಯಜೀವನದಲ್ಲಿ ಪ್ರತಿನಿತ್ಯವೂ ಸಾವಿದೆ. ಆದರೆ ದೇಶ ರಕ್ಷಣೆಯ ಹೊಣೆ ಹೊತ್ತ ಯೋಧರಿಗೆ ಜೀವನದಲ್ಲಿ ಒಮ್ಮೆ ಮಾತ್ರ ಮರಣ. ಅದುವೇ ರಣರಂಗದ ವೀರಸ್ವರ್ಗ.

ಕೊಡಗು ಮತ್ತು ದಕ್ಷಿಣ ಕನ್ನಡ ಗೌಡ ಸಮಾಜ (ರಿ.)

ಒಂದನೆ 'ಸಿ' ಮುಖ್ಯರಸ್ತೆ, ಗಂಗಾನಗರ, ಬೆಂಗಳೂರು – 560 032

ಕ್ರೀಡಾ ಮಹೋತ್ಸವ : ಸರ್ವರಿಗೂ ಸ್ವಾಗತ

ಕ್ರೀಡಾ ಪಂದ್ಯಾಟಗಳು : ದಿನಾಂಕ 8-8-1999ರಂದು ಸಮಯ ಬೆಳಿಗ್ಗೆ 8-00ಗಂಟೆಗೆ

ಸ್ಥಳ : ಬಿ. ಇ. ಎಲ್. ಅಂಬೇಡ್ಕರ್ ಕ್ರೀಡಾಂಗಣ, ಜಾಲಹಳ್ಳಿ, ಬೆಂಗಳೂರು

(ಸಂಘಟಿತರು ಗೌಡಯುವಕ ಸಂಘ, ಬೆಂಗಳೂರು)

ಕ್ರೀಡಾ ಪಂದ್ಯಾವಳಿಗಳು : ದಿನಾಂಕ **8-8-1999** ಸಮಯ ಬೆಳಿಗ್ಗೆ **8-00** ಗಂಟೆಗೆ

ವಾರ್ಷಿಕ ಕ್ರೀಡಾ ಕೂಟ : ದಿನಾಂಕ **22-8-1999** ಸಮಯ ಬೆಳಿಗ್ಗೆ **8-00** ಗಂಟೆಗೆ

ಸಾಂಸ್ಕೃತಿಕ ಸ್ಪರ್ಧೆಗಳು : ದಿನಾಂಕ 29-8-1999ರಂದು,

ಸ್ಥಳ : ಕೊಡಗು ಮತ್ತು ದಕ್ಷಿಣ ಕನ್ನಡ ಗೌಡ ಸಮಾಜ, ಒಂದನೆ 'ಸಿ' ಮುಖ್ಯ ರಸ್ತೆ, ಗಂಗಾನಗರ, ಬೆಂಗಳೂರು.

ಈ ವರ್ಷದ ವಿಶೇಷ ಆಕರ್ಷಣೆ : ಸೌಂದರ್ಯ ಸ್ಪರ್ಧೆ

ಇಲ್ಲಿ ಸೌಂದರ್ಯ ಸ್ಪರ್ಧೆ ಮತ್ತು ಸಾಂಸ್ಕೃತಿಕ ಸಂಜೆಗೆ ಆಯ್ಕೆ ನಡೆಯಲಿದೆ. ಆಸಕ್ತರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸುವುದು. ಆಯ್ಕೆಯಾದವರು **5-9-1999**ರಂದು ನಡೆಯುವ ಸಾಂಸ್ಕೃತಿಕ ಸಂಜೆಗೆ ತಪ್ಪದೆ ಹಾಜರಾಗುವುದು.

ಸೌಂದರ್ಯ ಸ್ಪರ್ಧೆಯ ಆಕರ್ಷಕ ಬಹುಮಾನದ ಮೊತ್ತ ಒಟ್ಟು 2,000/- ರೂಗಳು

ಯುವತಿಯರಿಗೆ : i) ಮಿಸ್ ಬೋಜಕ್ಕಿ ಮತ್ತು ii) ಮಿಸ್ ಭಾರತಿ

ಯುವಕರಿಗೆ : i) ಮಿಸ್ಟರ್ ಬೋಜಣ್ಣ ಮತ್ತು ii) ಗೌಡ ಕೇಸರಿ

ಸಾಂಸ್ಕೃತಿಕ ಸಂಜೆ : ದಿನಾಂಕ 5-9-1999ರಂದು

ಸ್ಥಳ : ಎ. ಡಿ. ಎ. ರಂಗ ಮಂದಿರ, ಜೆ. ಸಿ. ರಸ್ತೆ, (ರವೀಂದ್ರ ಕಲಾಕ್ಷೇತ್ರ ಎದುರು) ಬೆಂಗಳೂರು

ವಾರ್ಷಿಕ ಮಹಾಸಭೆ ಮತ್ತು ಕೈಲ್ ಮುಹೂರ್ತ ಹಬ್ಬದ ಮಮತೆಯ ಕರೆಯೋಲೆ.

ಸಮಯ : ಪೂರ್ವಾಹ್ನ 9-00ಗಂಟೆಗೆ **ದಿನಾಂಕ : 26-9-1999**

ಸ್ಥಳ : ಜಪ್ಪಾ ಭವನ, ಕ್ವೀನ್ಸ್ ರಸ್ತೆ, ವಸಂತ ನಗರ, ಬೆಂಗಳೂರು.

ಮುಖ್ಯ ಅತಿಥಿಗಳಾಗಿ ಚಲನಚಿತ್ರ ನಟರು ಮತ್ತು ಸಂಸದರು ಆದ ಸನ್ಮಾನ್ಯ ಶ್ರೀ ಅಂಬರೀಷ್‌ರವರು ಆಗಮಿಸಲಿರುವರು

ಕೊಡಗಿನ ಮತ್ತು ದಕ್ಷಿಣ ಕನ್ನಡ ಜಿಲ್ಲೆಯ ಸರ್ವ ಗೌಡ ಬಾಂಧವರು ಇದನ್ನೇ ಆಮಂತ್ರಣವೆಂದು ಭಾವಿಸಿ, ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಈ ಕಾರ್ಯಕ್ರಮವನ್ನು ಯಶಸ್ವಿಗೊಳಿಸಬೇಕಾಗಿ ವಿನಂತಿ.

ನೂಜಿ ದಿನಕರ ಗೌಡ
ಗೌರವ ಕಾರ್ಯದರ್ಶಿ
ಕೊಡಗು ಮತ್ತು ದ. ಕ. ಗೌಡ ಸಮಾಜ
ಬೆಂಗಳೂರು

ದೂರವಾಣಿ : 080 - 3433014

ಕೊಡಗು ಸಂಗಾತಿ

ಸಂಪಾದಕಿ, ಪ್ರಕಾಶಕಿ :

ಪಟ್ಟಡ ಪಿ. ಶೀಲಾಮಣಿ

ಗೌರವ ಸಂಪಾದಕ :

ಪಟ್ಟಡ ಎಂ. ಪ್ರಭಾಕರ

ಚಂದಾ ಕಳುಹಿಸುವ ಮತ್ತು
ಜಾಹೀರಾತು ಪ್ರಸಾರ ಕಛೇರಿ :

ಕೊಡಗು ಸಂಗಾತಿ
ನಂ. 35, "ಸವಿತಾ ನಿಲಯ"
1ನೇ ಕ್ರಾಸ್, 4ನೇ ಬ್ಲಾಕ್,
ಜಯಲಕ್ಷ್ಮಿಪುರಂ, ಮೈಸೂರು - 570 012.
ಫೋನ್ : 0821/516771

ಮಡಿಕೇರಿಯಲ್ಲಿ ಸಂಗಾತಿ ಕಛೇರಿ

ಬೈತಡ್ಕ ಜಾನಕಿ ಬೆಳ್ಳಪ್ಪ
ನಂ. 21-16 ಎಲ್. ಐ. ಸಿ. ಹತ್ತಿರ
ರೇಸ್ ಕೋರ್ಸ್ ರಸ್ತೆ, ಮಡಿಕೇರಿ
ದೂರವಾಣಿ : 08272/28047

ಸಂಪರ್ಕಿಸುವ ವಿಳಾಸ

ಮಣಿ ನಂಗಾರ್
ಹೊಳ್ಳ ಕಾಂಪ್ಲೆಕ್ಸ್, ಮಂಗಳೂರು ರಸ್ತೆ,
ಚಿಕ್ಕಪೇಟೆ, ಮಡಿಕೇರಿ - 571 201
ದೂರವಾಣಿ : 08272/29372

ಕುಂಭಗೌಡನ ಸೋಮಣ್ಣ
ಮಯೂರ ಕೋಲ್ಡ್ ಸ್ಟೋರೇಜ್
ಮುಖ್ಯ ರಸ್ತೆ, ಕುಶಾಲನಗರ - 571 234

ಅಮ್ಮಾಜೀರ ಪೊನ್ನಪ್ಪ
20, 1ನೇ ಮೈನ್, 4ನೇ ಕ್ರಾಸ್
ಸಾಕಮ್ಮ ಗಾರ್ಡನ್, ಬಸವನಗುಡಿ,
ಬೆಂಗಳೂರು - 04
ದೂರವಾಣಿ - 080/642822

ಕಲ್ಲುಮುಟ್ಲು ಬಸಪ್ಪ c/o ನಾರಾಯಣ
ನಂ. 233/9, 2ನೇ ಕ್ರಾಸ್, ನಂಜಪ್ಪ ಬ್ಲಾಕ್,
ಕೆಂಪೇಗೌಡ ನಗರ, ಬೆಂಗಳೂರು - 19
ದೂರವಾಣಿ - 080/6549669

ಒಳನೋಟ

ಅರೆಭಾಷಿಕ ವಿಭಾಗ

ಚಂದಾ ವಿವರ

ಬಿಡಿ ಪ್ರತಿ	-	**5 ರೂ.**
ಅರ್ಧ ವಾರ್ಷಿಕ	-	**60 ರೂ.**
ವಾರ್ಷಿಕ ಚಂದಾ	-	**120 ರೂ.**

ಸಂಪಾದಕೀಯ : ಗೌಡರ ಸಂಸ್ಕೃತಿ ಚರಿತ್ರೆ ವಿಷಯದಲ್ಲಿ ಅಧ್ಯಯನದ ಅವಶ್ಯಕತೆ

ಈಗ ಹತ್ತಾರು ವರ್ಷಗಳಿಂದ ಅಲ್ಲೊಂದು ಇಲ್ಲೊಂದು ಲೇಖನಗಳ ಮುಖಾಂತರ ಸಂಸ್ಕೃತಿ ಮತ್ತು ಗೌಡರ ಚರಿತ್ರೆಯ ಬಗ್ಗೆ ಲೇಖನಗಳು ಪ್ರಕಟವಾದರೂ ಅವುಗಳಿಗೆ ಪೂರ್ಣವಾದ ಆಳವಾದ ಅಧ್ಯಯನದಿಂದ ಬರೆದುದೆಂದು ಹೇಳಲು ಸಾಧ್ಯವಿಲ್ಲ. ಕಾರಣ ವೇನೆಂದರೆ ಶತಮಾನಗಳವರೆಗೆ ಕತ್ತಲೆಯಲ್ಲಿದ್ದ ವಿಷಯಗಳನ್ನು ಬೆಳಕಿಗೆ ತರುವುದು ಅಷ್ಟೊಂದು ಸುಲಭವಲ್ಲ. ಈ ವಿಷಯದಲ್ಲಿ ವಿದ್ಯಾವಂತ ಯುವಕರು ಹಾಗೂ ಯುವತಿಯರು ಆಳವಾದ ಸಂಶೋಧನೆ ಮಾಡಿ ಅವುಗಳ ನೈಜತ್ವವನ್ನು ಚಾರಿತ್ರಿಕ ದಾಖಲೆಗಳೊಡನೆ ತಾಳೆ ಹಾಕಿ ಒರೆಗಲ್ಲಿನಿಂದ ಪರೀಕ್ಷಿಸಿದರೆ ಮಾತ್ರ ಅದರ ನಿಜವನ್ನು ಕಂಡುಕೊಳ್ಳಬಹುದು.

ಉದಾಹರಣೆಗೆ ಅರೆಭಾಷೆ ಬರೇ ಗೌಡರು ಮಾತ್ರ ಮಾತಾಡುವುದೇ ಅಥವಾ ಬೇರೆ ಜನಾಂಗದವರು ಮಾತಾಡುತ್ತಾರೋ ಹಾಗೆ ಮಾತಾಡಿದರೆ ಆ ಜಾತಿ ಯಾವುದು? ಈ ಜಾತಿಗಳಿಗೂ ಗೌಡರಿಗೂ ಏನಾದರೂ ಸಂಬಂಧವಿದೆಯೇ ಅರೆಭಾಷೆ ಹಳೆಗನ್ನಡದಿಂದ ಗ್ರಾಮ್ಯವಾಗಿ ಬಂದದ್ದೇ? ಅರೆಭಾಷೆ ಮಾತಡುವವರ ಸಂಸ್ಕೃತಿಯಲ್ಲಿ ಬದಲಾವಣೆ ಆದೆಯೇ?

ಗೌಡರು ಎಲ್ಲಿಂದ ಭಾರತಕ್ಕೆ ಬಂದರು. ಎಷ್ಟು ವರ್ಷಗಳ ಹಿಂದೆ ಭಾರತಕ್ಕೆ ಬಂದರು? ಇವರು ಎಲ್ಲಿ ಎಲ್ಲಿ ನೆಲೆಸಿದ್ದರು? ಇವರು ಒಂದು ಕಡೆಯಿಂದ ಇನ್ನೊಂದು ಕಡೆಗೆ ವಲಸೆ ಹೋಗಲು ಕಾರಣವೇನು? ಗೌಡರು ದ್ರಾವಿಡ ಪಂಗಡಕ್ಕೆ ಸೇರಿದವರೆ? ಅಥ ಬೇರೆ ಪಂಗಡಕ್ಕೆ ಸೇರಿದವರೆ? ಹತ್ತೂ ಕುಟುಂಬದವರು ಹದಿನೆ ಗೋತ್ರದವರಾಗಲು ಕಾರಣವೇನು? ಇವರು ಶೈವರೋ ವೈಷ್ಣವರೋ? ಇವರು ಈಗ ಶೈವ ವೈಷ್ಣವ ದೇವರುಗಳ ಆರಾಧಿಸಲು ಕಾರಣವೇನು? ಈ ಗೌಡರು ದಕ್ಷಿಣ ಕನ್ನಡ ಜಿಲ್ಲೆ ಮ ಕೊಡಗಿನಲ್ಲಿ ನೆಲೆಸುವುದಕ್ಕೆ ಮೊದಲು ಎಲ್ಲಿ ನೆಲೆಸಿದ್ದರು? ಇ ಶ್ರೀ ವೆಂಕಟರಮಣ ದೇವರನ್ನು ತನ್ನ ಮನೆ ದೇವರನ್ನಾಗಿ ಆರಾಧಿಸುವು ಎಂದಿನಿಂದ ಪ್ರಾರಂಭಿಸಿದರು? ಶೃಂಗೇರಿ ಜಗದ್ಗುರುಗಳಿಗೆ ಗ ಕಾಣಿಕೆ ಕೊಡಲು ಹಾಗೂ ಶೃಂಗೇರಿ ಜಗದ್ಗುರುಗಳು ಇ ಜಗದ್ಗುರುಗಳೆಂದು ಸ್ವೀಕರಿಸಿದ್ದು ಎಂದಿನಿಂದ. ಈಗ ಕೆಲವ ಶ್ರೀ ಆದಿಚುಂಚನಗಿರಿ ಮಠಾಧೀಶರನ್ನು ತಮ್ಮ ಗುರುಗಳೆ ಗುರುಭಕ್ತಿ ತೋರಿಸುವುದಕ್ಕೆ ಕಾರಣವೇನು? ಒಕ್ಕಲಿಗರಲ್ಲಿ ರ ಉಪಜಾತಿಗಳಾದ ೧. ಗಂಗಡಿಕಾರ್ ೨. ದಾಸ ಒಕ್ಕಲಿಗ ೩. ಮರ ಒಕ್ಕಲಿಗ ೪. ಕುಂಚಟಿಗ ಒಕ್ಕಲಿಗ ಮುಂತಾದ ಉಪಜಾತಿ ಹೆಸರಿನ ಈ "ಗೌಡರ" ಉಪಜಾತಿ ಹೆಸರೇನು? ಮುಂತಾದ ವಿಷಯಗಳ ಆಳವಾದ ಸಂಶೋಧನೆ ಮಾಡಿ ಅವುಗಳನ್ನು ಜನರಿಗೆ ತಿಳಿಸ ಕೆಲಸವನ್ನು ವಿದ್ಯಾವಂತರು ಮಾಡುವರೇ? ಎಂಬುದಾಗಿ ಕೊಡ ಸಂಗಾತಿಯು ಈ ಮೂಲಕ ಕೇಳಿಕೊಳ್ಳುತ್ತದೆ.

ನಂಬಿಕೆ

ತುಂಬಾ ಕಾಲಂದ ಕಾಯಿಲೆ ಬಂದ್‌ಕಂಡ್ ನರಳಿಕಂಡಿದ್ದ ಒಬ್ಬಂಗೆ ಅವನ ವೈದ್ಯ "ನೀನ್ ಇನ್ನ್ ಒಂದ್ ಗಂಟೆ ಮಾತ್ರ ಬದುಕುದುತ' ಹೇಳ್ತ್. ಆ ಮನ್ಸ ಹಾಸಿಗೆಂದ ಎದ್ದ್ ಕಿಡಕಿ ಹತ್ರ ಹೋಗಿ, ಕೈ ಮುಗ್ದ್, ಆಕಾಶದ ಕಡೆ ನೋಡಿಕಂಡ್ "ದೇವ್ರೇ ನನ್ನ ಕಾಪಾಡ್" ತ್ಹೇಳಿ ಬೇಡಿಕಂಡತ್. ಆಗ ಮೋಡಗಳ ಮರೆಂದ ಮೃದುವಾದ ಅಶರೀರವಾಣಿ ಕೇಳ್ಸಿತ್. "ಚಿಂತೆ ಮಾಡಬ್ಯಾಡ, ನಾನ್ ನಿನ್ನ ಕಾಪಾಡ್‌ನೆ" ಅದ್ನ ಕೇಳಿ ಆ ಮನ್ಸಂಗೆ ಸಮಾಧಾನ ಆಗಿ, ಹೊಸ ವಿಶ್ವಾಸ ಮೂಡಿ, ಅಂವ ಪುನಃ ಹಾಸಿಗೆ ಹತ್ರ ಹೋಗಿ ಮಲ್ಗಿಕಂಡತ್.

ಅಷ್ಟೊತ್ತಿಗೆ ವೈದ್ಯ ಓಡಿ ಬಂದ್ "ನಿಮಿಗೆ ಒಂದ್ ಸಣ್ಣ ಆಪರೇಷನ್ ಮಾಡ್ರೆ ನೀವು ಬದುಕುವ ಸಾಧ್ಯತೆ ಉಟ್ಟುತೇಳಿ ಹೇಳ್ತ್. "ಬೇಕಾಗಿಲ್ಲೆ, ನನ್ನ ದೇವ್ರೇ ಕಾಪಾಡ್ವೆ"ತ ಮನ್ಸ ಹೇಳ್ತ್. ಆಗ ಒಬ್ಬ ಪಾದ್ರಿ ಮತ್ತೆ ಒಬ್ಬ ಮಂತ್ರವಾದಿ ಓಡಿ ಬಂದ್ "ನಾವ್ ನಿಮ್ಮನ ಗುಣ ಪಡಿಸುವೆ"ತ ಹೇಳ್ದೊ. "ನಿಮ್ಮ ಸಹಾಯ ನಂಗೆ ಬೇಕಾಗಿಲ್ಲೆ, ದೇವ್ರೇ ನನ್ನ ಕಾಪಾಡ್ವೆ." ಮನ್ಸ ನಿಷ್ಠುರವಾಗಿ ಹೇಳಿಬುಟ್ಟತ್.

ಸರಿ ಒಂದ್ ಗಂಟೆ ಕಳ್ದ್ ಆ ಮನ್ಸ ಸತ್ತೋತ್. ಅಂವ ಸ್ವರ್ಗಕ್ಕೆ ಹೋಗಿ ದೇವ್ರು ಹತ್ರ ನಡ್ಕಂಡ್ ಹೋಗಿ ಕೇಳ್ತ್ "ಎಂತ ಆತ್? ನೀನ್ ನನ್ನ ಬದ್‌ಕಿಸಿನೆತ ಹೇಳ್ದ!?, ನಾನ್ ಮತ್ತೆ ಯಾಕೆ ಸತ್ತದ್?"

"ಅಯ್ಯೋ ಮೂರ್ಖ, ನಾನ್ ನಿನ್ನ ಬದ್‌ಕಿಸಿಕೆ ಪ್ರಯತ್ನ ಪ ಒಬ್ಬ ವೈದ್ಯನ, ಪಾದ್ರಿನ ಮತ್ತೆ ಮಂತ್ರವಾದಿನ ಕಳ್ಸಿಕೊಟ್ಟೆ."

ದೇವ್ರು ನಂಬಿದವ್ಕೆ ಸ್ವತಃ ಬಂದ್ ಸಹಾಯ ಮಾಡ್ದುಲೆ, ಬೆ ಯವರ ಮುಖೇನ ಮಾಡ್ಸಿದೆ. ದೇವ್ರು ಮೇಲೆ ನಂಬಿಕೆ ಮಡ್ಕಂಡವ ಯಾಗೋಳು ಮೋಸ ಆದುಲೆ. ಆದ್ರೆ 'ನಂಬಿಕೆ' ಯಾಗೋಳೂ ನವ ಸಾಮಾನ್ಯ ಜ್ಞಾನನ ಮೀರ್‌ಕ್ಕಾಗದ್‌ತೇಳ್ದು ಸತ್ಯ.

ಎಡಿಕೇರಿ ಸುದರ್ಶನ, ಬೆಂಗಳೂ

ತಿದ್ದುಪಡಿ

ವ್ಯಕ್ತಿ ಪರಿಚಯ : ರಾಷ್ಟ್ರದ ಭೂಸೇನೆಗೆ ಲೆಫ್ಟಿನೆಂಟ್ ಆಗಿ ಸೇ ಶ್ರೀ. ವೈ. ಕೆ. ಚಂದನ್‌ರವರ ಲೇಖನದಲ್ಲಿ ಸಂಗಾತಿಯ ಪುಟ ಕೊನೆಯಲ್ಲಿ ಮೊಣ್ಣಂಗೇರಿ ಗ್ರಾಮದ ಶ್ರೀಯುತ ಯಾಲದಾ ಕೇಶವನಂದ ವಿಶಾಲಾಕ್ಷಿ ಎಂಬುದರ ಬದಲು ಯಾಲದಾ ಕೇಶವನಂದ ಗಂಗಾ ಎಂತಲು ಮತ್ತು ಹೊರ ಪುಟದಲ್ಲಿ ಕೇಶವನ ವಿಶಾಲಾಕ್ಷಿ ಎಂಬುದರ ಬದಲು ಕೇಶವನಂದ ಗಂಗಾ ಎಂದು ನವ ಓದುಗರು ಓದಿಕೊಳ್ಳುವುದು. ಅಚಾನಕ್ ಆಗಿ ಲೇಖನದಲ್ಲಿ ಗಂ ಬದಲು ವಿಶಾಲಾಕ್ಷಿ ಎಂದು ಮುದ್ರಣಗೊಂಡಿರುವುದಕ್ಕೆ ವಿಷಾದಿಸುತ್ತೇ

ಸಂಪಾ

ಕ್ತಿ ಪರಿಚಯ : ನಮ್ಮ ಲೇಖಕರು



ಕಠಿಣ ಮನಸ್ಸನ್ನು ಹಸನುಗೊಳಿಸಬಲ್ಲ ಪ್ರಸಿದ್ಧ ಲೇಖಕ
ಬಾರಿಯಂಡ ರಾಮಪ್ಪ ಜೋಯಪ್ಪ

ಶ್ರೀಬಾರಿಯಂಡ ಜೋಯಪ್ಪನವರು ಅರೆಭಾಷಿಕರ ಪಾಲಿಗೆ ಹುಟ್ಟು ಸಾಹಿತಿಯಾಗಿ ನಿಂತವರಲ್ಲಿ ಮೊದಲಿಗರು. ಕೊಡಗು ಸಂಗಾತಿ ಪತ್ರಿಕೆಯು ಪ್ರಾರಂಭಿಸಿದಂದಿನಿಂದಲೂ ಸತತವಾಗಿ ಶ್ರೀಯುತರು ಕನ್ನಡ ಹಾಗೂ ಅರೆಭಾಷೆಯಲ್ಲಿ ಬರೆಯುತ್ತಿದ್ದಾರೆ. ಜಿಲ್ಲಾಮಟ್ಟದ ಸಾಹಿತ್ಯ ಲೋಕದಲ್ಲಿ ಸಾಕಷ್ಟು ಪ್ರಜ್ವಲಿಸಿದ್ದಾರೆ. ಸಾಕಷ್ಟು ಕಥೆ, ಕವನ, ಲೇಖನ ಇತ್ಯಾದಿ ಬರೆದು ಜಿಲ್ಲೆಯಾದ್ಯಂತ ಪರಿಚಿತರಾಗಿದ್ದು ಸದ್ಯ ಮದೆ ಮಹದೇಶ್ವರ ಪದವಿ ಪೂರ್ವ ಕಾಲೇಜಿನಲ್ಲಿ ಉಪನ್ಯಾಸಕರಾಗಿ ಸೇವೆ ಸಲ್ಲಿಸುತ್ತಿರುವ ಇವರಿಗೆ ನಮ್ಮ ಕುಲದೇವರು ಶ್ರೀ ವೆಂಕಟರಮಣನ ಆಶೀರ್ವಾದವು ಶೃಂಗೇರಿ ಶಾರದಾಂಬೆಯ ಕೃಪಾಕಟಾಕ್ಷೆಯು ಸದಾ ಇವರಿಗಿರಲೆಂದು ಅರೆಭಾಷಿಕರ ಪರವಾಗಿ ಸಂಗಾತಿ ಶುಭವನ್ನು ಹಾರೈಸುತ್ತದೆ.

ಸಂಪಾದಕಿ

ಲೇಖನವೊಂದನ್ನು ಓದುಗನೊಬ್ಬ ಓದುತ್ತಿರುತ್ತಾನೆ. ಆತನ ಟಿಕ್ಕಿದ ಮುಖ ನಿಧಾನವಾಗಿ ಬಿಚ್ಚಿ ಅರಳತೊಡಗುತ್ತದೆ. ಟಿಯಂಚಿನಲ್ಲಿ ಮುಗುಳ್ನಗೆ ಹೊರ ಹರಿಯಲು ಹವಣಿಸುತ್ತಿರುತ್ತದೆ. ನೆಗೊಮ್ಮೆ ತುಟಿಕಟ್ಟೆ ಒಡೆದು ನಗೆಯ ಹೊನಲು ಹೊರ ಮುಕುತ್ತದೆ. ಆತ ಗಕ್ಕನೆ ನಗುತ್ತಾನೆ ಪಕ್ಕದಲ್ಲಿದ್ದವರಿಗೂ ಆ ಖನದ ಒಳಮೈಯನ್ನು ವಿವರಿಸುತ್ತಾನೆ. ಅಲ್ಲಿದ್ದವರೆಲ್ಲಾ ನಕ್ಕು ತೋಷ ಆಚರಿಸುತ್ತಾರೆ. ಮತ್ತೆ ತಮ್ಮಲ್ಲೇ ಅವರೊಂದು ಪ್ರಶ್ನೆ ಕಿಕೊಳ್ಳುತ್ತಾರೆ. ಈ ಜೋಯಪ್ಪನವರು ಹೇಗಪ್ಪಾ ಈ ರೀತಿ ಕಥೆ ೋಡಿಸುತ್ತಾರೆ? ಇದು ನಡೆದಾಡುವ ಸಾಹಿತ್ಯಕೋಶದಂತೆಯೇ ಗೊಳಿಸುವ ಬಿ. ಆರ್. ಜೋಯಪ್ಪನವರ ಲೇಖನವನ್ನು ಓದಿದ ತಿಯೊಬ್ಬ ಓದುಗನ ಪ್ರತಿಕ್ರಿಯೆ.

ಬಾರಿಯಂಡ ಜೋಯಪ್ಪನವರ ಲೇಖನದ ವೈಶಿಷ್ಟ್ಯವೇ ಹಾಗಿದೆ. ಅದು ಎಂತಹವರ ಮನಸ್ಸನ್ನು ಹಸನುಗೊಳಿಸಬಲ್ಲದು. ಇವರ ಲೇಖನಗಳು ಕೇವಲ ಕಾಲ್ಪನಿಕ ಕಟ್ಟು ಕಥೆಗಳಲ್ಲ. ಜೀವನದಲ್ಲಿ ನಡೆಯುವ, ನಡೆಯಬಹುದಾದ ನೈಜ ಸತ್ಯ ಘಟನೆಗಳನ್ನು ತಮ್ಮ ಹಾಸ್ಯಭರಿತ ಶೈಲಿಯಲ್ಲಿ ಇದ್ದುದನ್ನು ಇದ್ದ ಹಾಗೆ ಜನರ ಮುಂದಿಡುತ್ತಾರೆ. ಸಾಮಾನ್ಯ ಜನರ ನಡವಳಿಕೆಗಳಿಗೆ ಇವರ ಲೇಖನಗಳು ಕನ್ನಡಿ ಹಿಡಿಯುತ್ತವೆ. ಜನರು ಜೀವನದಲ್ಲಿ ತಮ್ಮ ಅರಿವಿಗೆ ಬಾರದ ಹಲವು ನೈಜ ಘಟನೆಗಳನ್ನು ಇವರ ಲೇಖನಗಳಿಂದ ಅನುಭವಿಸಬಲ್ಲರು.

ಬಿ. ಆರ್. ಜೋಯಪ್ಪನವರ ಬದುಕೆ ಒಂದು ಬವಣೆಯ ಕಥೆ. ಇವರು 1957ರಲ್ಲಿ ತಿತಿಮತಿ ಸಮೀಪದ ಕಾಟಿಬೆಟ್ಟ ಎಂಬ ಸ್ಥಳದಲ್ಲಿ ಬಾರಿಯಂಡ ರಾಮಪ್ಪ ಮತ್ತು ಅಚ್ಚಮ್ಮ ದಂಪತಿಗಳ ಮಗನಾಗಿ ಜನಸಿದರು. ಸಾಮಾನ್ಯ ಕುಟುಂಬದಲ್ಲಿ ಜನಿಸಿದ ಇವರ ಹಾದಿ ಮುಳ್ಳಿನ ಹಾಸಿಗೆಯಾಗಿತ್ತು. ಕಾರಣ ಆಗ ಇವರ ಹುಟ್ಟೂರನ್ನು ನಾಗರಹೊಳೆ ಅಭಯಾರಣ್ಯಕ್ಕೆ ಸೇರಿಸಲಾಯಿತು. ಆದುದರಿಂದ ಇವರ ಕುಟುಂಬವು ಗುಳೆಯೆಬ್ಬಿಸಲ್ಪಟ್ಟಿತು. ಇದರಿಂದ ಇವರು ಅನುಭವಿಸಿದ ಸಂಕಷ್ಟ ಅಷ್ಟಿಷ್ಟಲ್ಲ. ಆದರೆ ಇವರು ಸಂಕಷ್ಟಕ್ಕೆ ತಲೆಬಾಗಲಿಲ್ಲ. ಸಮಸ್ಯೆಗೆ ಎದೆಗುಂದಲಿಲ್ಲ. ಸಮಸ್ಯೆಗಳನ್ನೇ ಸವಾಲಾಗಿ ಎದುರಿಸುವ ಸಾಧನವನ್ನಾಗಿ ಮಾಡಿಕೊಂಡು ಬಹುಶಃ ಇಂದಿನ ಇವರ ಕೆಲವು ಲೇಖನಗಳು ಅವರ ಜೀವನಾನುಭವಗಳಿಂದ ಪ್ರೇರಿತಗೊಂಡಿವೆಯೆನ್ನಬಹುದು. ಅವರೇ ಹೇಳುವಂತೆ ಅವರ ತಾಯಿಯ ಪ್ರೋತ್ಸಾಹ ಮತ್ತು ಎಚ್ಚರಿಕೆಯ ಮಾತುಗಳು ಅವರನ್ನು ಅಡೆತಡೆಯಿಲ್ಲದೆ ಮುನ್ನಡೆಸಿದವಂತೆ, ಇದರ ಜೊತೆಗೆ ವಿದ್ಯಾಭ್ಯಾಸವೇ ಮೊಟಕುಗೊಳ್ಳುವಂತಹ ಸಂದರ್ಭದಲ್ಲಿ ಇವರಿಗೆ ಮೈಸೂರಿನಲ್ಲಿದ್ದ ಇವರ ಹಿರಿಯ ಸಹೋದರಿಯಿಂದ ದೊರೆತ ಸಹಾಯವನ್ನು ಇವರು ಸದಾ ನೆನೆಯುತ್ತಾರೆ.

ಇವರು ಸಳಗೋಡು ಸರಕಾರಿ ಪ್ರಾಥಮಿಕ ಶಾಲೆಯಲ್ಲಿ ಒಂದನೇ ತರಗತಿಯಿಂದ ನಾಲ್ಕನೇ ತರಗತಿಯವರೆಗೆ, ಪೊನ್ನಪ್ಪಸಂತೆ ಪ್ರಾಥಮಿಕ ಶಾಲೆಯಲ್ಲಿ ಐದರಿಂದ, ಏಳನೇ ತರಗತಿಯವರೆಗೆ ವಿದ್ಯಾಭ್ಯಾಸ ಮಾಡಿದರು. ಪೊನ್ನಪ್ಪಸಂತೆ ಪ್ರೌಢಶಾಲೆಯಲ್ಲಿ ಇವರು ಪ್ರೌಢವಿದ್ಯಾಭ್ಯಾಸವನ್ನು ಪಡೆಯುವಾಗ ಅಲ್ಲಿನ ಮುಖ್ಯೋಪಾಧ್ಯಾಯರಾಗಿದ್ದ ಹೆಚ್. ಕೆ. ತಮ್ಮೇಗೌಡರು ಇವರ ಮೇಲೆ ಗಾಢ ಪ್ರಭಾವ ಬೀರಿದ್ದರಂತೆ. ಆ ಮುಖ್ಯೋಪಾಧ್ಯಾಯರು ಕಷ್ಟಪಟ್ಟು ದುಡಿದು ಆ ಸ್ಥಾನವನ್ನು ಅಲಂಕರಿಸಿದ್ದು ಆ ಅನುಭವಗಳನ್ನು ವಿದ್ಯಾರ್ಥಿಗಳೊಡನೆ ಹಂಚಿಕೊಳ್ಳುತ್ತಿದ್ದರಂತೆ. ಆಗಲೇ ತನ್ನಲ್ಲಿ ನಾನೂ ಏನಾದರೂ ಸಾಧಿಸಿಯೇ ತೀರಬೇಕೆಂಬ ಆಕಾಂಕ್ಷೆ ಕುಡಿಯೊಡೆದು ಹೃದಯದಲ್ಲಿ ಅಂಕುರಿಸಿತು ಎಂದು ತನ್ನ ಗತಕಾಲದ ಘಟನೆಗಳನ್ನು ನೆನೆದುಕೊಳ್ಳುವ ಇವರು, ಇಂದಿನ ವಿದ್ಯಾರ್ಥಿಗಳು ಯಾರಾದರೂ ಮಾದರಿ ವ್ಯಕ್ತಿಯನ್ನು ಆದರ್ಶವಾಗಿಟ್ಟುಕೊಂಡು ಮುನ್ನಡೆಯಲೇಬೇಕು ಎಂದು ಕರೆ ನೀಡುತ್ತಾರೆ. ಮುಂದೆ ಬಾಳೆಲೆಯ ವಿಜಯಲಕ್ಷ್ಮಿ ವಿದ್ಯಾಲಯದಲ್ಲಿ ಪದವಿಪೂರ್ವ ವಿದ್ಯಾಭ್ಯಾಸವನ್ನು ಪಡೆದ ಬಳಿಕ ತಮ್ಮ ಸಹೋದರಿಯ ಸಹಾಯದಿಂದ ಮೈಸೂರಿನಲ್ಲಿ ಅಂಚೆ ಮತ್ತು ತೆರಪಿನ ಶಿಕ್ಷಣ ಸಂಸ್ಥೆಯಿಂದ ಕನ್ನಡದಲ್ಲಿ ಡಿಪ್ಲೊಮಾ ಪದವಿ,

ಮಹಾರಾಜಾ ಸಂಜೆ ಕಾಲೇಜಿನಲ್ಲಿ ಬಿ. ಎ. ಪದವಿ, ಸೋಮಾನಿ ಕಾಲೇಜಿನಲ್ಲಿ ಬಿ. ಇಡಿ. ಪದವಿಯನ್ನು ಪಡೆದರು. ನಂತರದಲ್ಲಿ ಮಾನಸಗಂಗೋತ್ರಿಯ ಅಂಚೆ ಮತ್ತು ತೆರಪಿನ ಶಿಕ್ಷಣ ಸಂಸ್ಥೆಯಿಂದ ಎಂ. ಎ. ಪದವಿಯನ್ನೂ ಪಡೆದುಕೊಂಡರು. ಈ ಸಂದರ್ಭದಲ್ಲಿ ಕಠಿಣದ ದುಡಿಮೆಯಲ್ಲಿಯೂ ತಮ್ಮನ್ನು ತೊಡಗಿಸಿಕೊಂಡಿದ್ದರು. ಕೊಡಗಿನವರೆಂದರೆ ಶ್ರೀಮಂತರೆಂದೇ ತಿಳಿದುಕೊಂಡಿದ್ದ ಮೈಸೂರಿನ ಜನ, ಇವರ ಕಷ್ಟಗಳನ್ನು ನೋಡಿ ಮರುಕಪಟ್ಟವರಿದ್ದಾರೆ. ಸಹಾಯ ಮಾಡಿದವರಿದ್ದಾರೆ. ಇದು ಇವರ ವಿದ್ಯಾಭ್ಯಾಸಕ್ಕೆ ದಾರಿ ಮಾಡಿಕೊಟ್ಟಿತು. ಆಂದೋಲನ ಪತ್ರಿಕೆಯಲ್ಲಿಯ ಇವರ ದುಡಿಮೆ ಇವರಿಗೆ ಜನ ಸಂಪರ್ಕವನ್ನು ಇನ್ನಷ್ಟು ಹೆಚ್ಚಿಸಿತು.

ಗೌಡ ಜನಾಂಗಕ್ಕೆ ತಮ್ಮ ಸಲಹೆಯೇನು? ಎಂಬ ಸಂಗಾತಿಯ ಪ್ರಶ್ನೆಗೆ ಉತ್ತರಿಸಿದ ಶ್ರೀಯುತರು "ನಮ್ಮ ಜನ ಅದರಲ್ಲಿಯೂ ಯುವಜನತೆ ಸಾಕಷ್ಟು ಓದಬೇಕು. ಆ ಹವ್ಯಾಸವನ್ನು ಬೆಳೆಸಿ ಕೊಳ್ಳಬೇಕು. ನಿರಂತರ ಚಿಂತನೆ ನಡೆಸಬೇಕು. ಬರವಣಿಗೆಗಳನ್ನೂ ವಿಮರ್ಶಿಸಬೇಕು. ನಂತರ ತಮ್ಮ ಜೀವನಾನುಭವಗಳನ್ನು ಬರೆಯಬೇಕೇ ಹೊರತು ನಕಲು ಮಾಡಬಾರದು. ನಮ್ಮ ಯುವಜನತೆ ರಸ್ತೆ ಬದಿಯಲ್ಲೋ, ಯಾವುದಾದರು ಅಂಗಡಿಗಳ ಮುಂದೆಯೋ ದಿನವಿಡೀ ಬೀಡಿ ಸೇದುತ್ತಾ, ಹರಟೆ ಹೊಡೆಯುತ್ತಾ ಕಾಲಕಳೆಯುವುದು ತುಂಬಾ ಖೇದದ ವಿಷಯ, ಅದನ್ನು ಬಿಟ್ಟು ಸ್ವಂತ ದುಡಿಮೆಯಲ್ಲಿ ತೊಡಗಬೇಕು. ಅಹಂಕಾರ ಬಿಟ್ಟು ಸ್ವತಂತ್ರ ದುಡಿಮೆಯಲ್ಲಿ ತೊಡಗಿದಾಗ ಸಿಗುವ ಸುಖ ಯಾವುದೇ ಉನ್ನತ ಹುದ್ದೆಗಿಂತ ಹೆಚ್ಚಿನದು" ಎಂದು ಅಭಿಪ್ರಾಯ ಪಡುತ್ತಾರೆ.

ಲೇಖಕರ ಸಾಲಿನಲ್ಲಿ ಬಿ. ಆರ್. ಜೋಯಪ್ಪನವರಿಗೆ ಶ್ರೇಷ್ಠ ಸ್ಥಾನವಿದೆ. ಇವರು ಕೊಡಗಿನ ಚಿರಪರಿಚಿತ ಲೇಖಕರು. ಇವರ ಪರಿಚಯ ಕೇವಲ ಗೌಡ ಜನಾಂಗಕ್ಕೆ ಸೀಮಿತವಾಗಿಲ್ಲ. ಇವರ ಲೇಖನಗಳು ಕೇವಲ ಕೊಡಗು ಸಂಗಾತಿಗೆ ಸೀಮಿತಗೊಂಡಿಲ್ಲ. ಬಹಳ ಹಿಂದೆ 'ಗೌಡ ಸಮಾಜ' ಪುಸ್ತಕ ಪ್ರಕಟನೆಗೊಳ್ಳುವಾಗಲೇ ಇವರ 'ಗೌಡ ಕನ್ನಡ ಭಾಷೆಯ' ಲೇಖನಗಳು ಜನ ಮನಸ್ಸನ್ನು ಸೂರೆಗೊಂಡಿದ್ದವು ನಂತರ ಹಲವಾರು ಪತ್ರಿಕೆಗಳಲ್ಲೂ ಇವರ ಲೇಖನಗಳು ಮೂಡಿಬಂದು ಜನಮನ್ನಣೆ ಗಳಿಸಿದ್ದವು. 'ಕೊಡಗು ಸಂಗಾತಿ' ಪತ್ರಿಕೆ ಆರಂಭವಾದ ನಂತರ ಪ್ರತಿ ಹದಿನೈದು ದಿನಕ್ಕೊಮ್ಮೆ ಗೌಡ ಸಮುದಾಯಕ್ಕೆ ಇವರು ತಮ್ಮ ಲೇಖನದ ಸವಿಯನ್ನು ಉಣಬಡಿಸುತ್ತಿದ್ದಾರೆ. 1998ರಲ್ಲಿ ಬಿಡುಗಡೆಯಾದ "ಯಾರ ಬೇಟೆ ಮತ್ತು ಇತರ ಪ್ರಸಂಗಗಳು" ಎನ್ನುವ ಮಲೆನಾಡಿನ ಜನ ಜೀವನ ಮತ್ತು ಬೇಟೆಯ ಕುರಿತ ಕಥೆಗಳು ರೋಚಕ ಅನುಭವ ನೀಡುತ್ತವೆ.

ಪ್ರಸ್ತುತ ಮದೆನಾಡಿನ ನಿವಾಸಿಯಾಗಿರುವ ಇವರು, ಕರ್ನಾಟಕಕ್ಕೇ ತನ್ನ ವಿಶಿಷ್ಟ ಕಂಪನ್ನು ಸೂಸುತ್ತಿರುವ, ಪ್ರಕೃತಿಯ ಮಡಿಲಲ್ಲಿ ನಿತ್ಯಹಸುರಿನ ದೇವಾಲಯದಂತಿರುವ 'ಮದೆ ಮಹೇಶ್ವರ ವಿದ್ಯಾಲಯ' ಸ್ಥಾಪನೆಯಾದಾಗಿನಿಂದಲೇ ಅದರಲ್ಲಿ ಅಧ್ಯಾಪಕರಾಗಿ, ಉಪನ್ಯಾಸಕರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಇವರ ಉಪನ್ಯಾಸದ ವೈಖರಿ ವಿದ್ಯಾರ್ಥಿಗಳ ಹೃದಯದಲ್ಲಿ ಶಾಶ್ವತವಾಗಿ ಬೇರೂರುವಂತಹುದು. ಮದೆ ಮಹೇಶ್ವರ ವಿದ್ಯಾಲಯವು ಆಕರ್ಷಣೀಯವಾಗಿ ತಲೆಯೆತ್ತಿ, ಅದರ ಖ್ಯಾತಿ ವಿಶಾಲ ವ್ಯಾಪ್ತಿಯಲ್ಲಿ ಹರಡುವಂತಾಗಲು ಅ[…] ಪ್ರಾಂಶುಪಾಲ ರಾಜ್ಯ ಶಿಕ್ಷಕ ಪ್ರಶಸ್ತಿ ವಿಜೇತ ತೊತ್ತೆನ ಮಂದಣ್ಣ[…] ಶ್ರಮದೊಡನೆ, ಇವರ ಶ್ರಮವೂ ಅದ್ವಿತೀಯವಾದು[…] ಆದುದರಿಂದಲೇ ಸರಕಾರ ಇವರಿಗೆ 1996ರಲ್ಲಿ ಜಿಲ್ಲಾ ಶಿಕ್ಷಕ ಪ್ರ[…] ನೀಡಿ ಗೌರವಿಸಿತು.

1985ರಲ್ಲಿ ಕುದುಕುಳಿ ಸುಬ್ಬಯ್ಯನವರ ಮ[…] ಭಾರತಿಯವರನ್ನು ಇವರು ವಿವಾಹವಾದರು. ಇವರ ಹಿರಿಯ […] ಕುಮಾರಿ ದಿವ್ಯಾ ಒಂಭತ್ತನೇ ತರಗತಿಯಲ್ಲಿ, ಪುತ್ರ ದೀಪಕ್ ನಾ[…] ತರಗತಿಯಲ್ಲಿ ವ್ಯಾಸಂಗ ಮಾಡುತ್ತಿದ್ದಾರೆ. ಇವರ ಈ ಚೊಕ್ಕ ಸಂ[…] ಇವರ ಲೇಖನಗಳು ಪ್ರಕಟಗೊಂಡ ನಂತರವೇ ಅದನ್ನು […] ವಿಮರ್ಶಿಸಿ ಸ್ಫೂರ್ತಿಯನ್ನೂ ಒದಗಿಸುತ್ತದೆ. ಇವರ […] ಚಿಕ್ಕಂದಿನಿಂದಲೇ ಬರೆಯುವ ಆಸಕ್ತಿಯನ್ನು ಮೈಗೂಡಿಸಿಕೊಂಡಿ[…] ಆಕೆಯ ಕೆಲವು ಬರವಣಿಗೆಗಳು 'ಸಂಗಾತಿ'ಯಲ್ಲಿ ಪ್ರಕಟಗೊಂಡಿರುವು[…] ಸ್ಮರಿಸಬಹುದು.

ಸಮಾಜ ಸೇವೆಯಲ್ಲಿಯೂ ಸಹ ಬಿ. ಆರ್. ಜೋಯಪ್ಪನ[…] ಪಾತ್ರ ಗಣನೀಯವಾದುದು. ಸಮಾಜ ಸೇವಕರಾಗಿ, ಉತ್ತ[…] ಸಾಹಿತಿಯಾಗಿ, ಆದರ್ಶ ಶಿಕ್ಷಕರಾಗಿ, ಉನ್ನತ ಸಾಧಕರಾಗಿದ್ದ[…] ಇನ್ನೂ ಸಾಧಿಸಬೇಕಾದುದು ಬಹಳಷ್ಟಿದೆ ಎನ್ನುವ ಇವರ ಮಾತಿ[…] ಮಹತ್ವಾಕಾಂಕ್ಷೆಯಿದೆ. ಸಾಧನೆಯ ಹಾದಿಯಲ್ಲಿ ಇವ[…] ಎತ್ತರೆತ್ತರಕ್ಕೇರಲಿ. ಉಳಿದವರಿಗೂ ಆ ಹಾದಿ ಸದಾ ಆಹ್ವಾನ ನೀ[…] ಎಂಬುದೇ ಸಂಗಾತಿಯ ಆಶಯವಾಗಿದೆ.

ಪಟ್ಟಡ ಶಿವಕುಮಾ[…]

ಗೀತೆ

ನೀ ನಾನು, ನಾ ನೀನು.... ಓ ಕೊಡಗು ಸಂಗಾತಿ.......
ನಿನ್ನ ನನ್ನಯ ಜೋಡಿ
ಮರೆಯಲಾರೆ, ಮರೆಯುದಾದರು ಹೇಗೆ

ಬೇಸಿಗೆ ದಿವಸಕೆ, ನೆರಳಾದೆ, ಬೆಳಕಾದೆ
ಹುಣ್ಣಿಮೆಯ ದಿವಸಕೆ ಬೆಳದಿಂಗಳು ನೀನಾದೆ
ಹಸಿರು ತುಂಬಿದ ಹೊಸಿಲ ಹೊಂಬಿಸಿಲು ನೀನಾದೆ
ಓ ಕೊಡಗು ಸಂಗಾತಿ ನಿನ್ನ ಮರೆಯಲಾರೆ
ಮರೆಯುದಾದರು ಹೇಗೆ ನಾ ನಿನ್ನ ಮರೆಯಲಾರೆ
ಮರೆಯುದಾದರು ಹೇಗೆ

ಸೀಮೆ ಸೀಮೆಯ ದಾಟಿ, ಹೊಸ ಸೀಮೆ ನೋಡಿದಾಗೆ
ದೇಶ ದೇಶವ ದಾಟಿ ಹೊಸ ದೇಶ ನೋಡಿದಾಗೆ
ಜಾತಿ ಜಾತಿಯ ದಾಟಿ ನಾ ನಿನ್ನ ಸೇರಿದಾಗೆ
ಓ ಕೊಡಗು ಸಂಗಾತಿ, ನಾ ನಿನ್ನ ಮರೆಯಲಾರೆ.
ಮರೆಯುದಾದರೂ ಹೇಗೆ.

ಕಣ್ಣ ಹೊಳಪಿನ ನೋಟ, ಗೆಜ್ಜೆ ತಾಳದ ಕೂಟ
ತಳಕು ಬಳಕಿನ ಮಾಟ ನನ್ನ ಸೆಳೆಯುವ ನೋಟ
ಸೆಳೆದಂತ ಮನಸ್ಸನ್ನು ಮರೆಯಲಾರೆ ಓ ಕೊಡಗು ಸಂಗಾತಿ
ನಾ ನಿನ್ನ ಮರೆಯಲಾರೆ ಮರೆಯುದಾದರು ಹೇಗೆ

ರಚನೆ : ಪಟ್ಟಡ ಶ್ರೀಧರ ಮಾಚಯ್ಯ, ಮೈಸೂ[…]

ಂದ್ ನಾ ಕಂಡಂಗೆ "ನಮ್ಮ ಒಂದ್ ಮೊದುವೆ ಜಂಬರ" 'ಸಂಸ್ಕೃತಿಗೆ ಅಪಚಾರ ಆದು ಬ್ಯಾಡ'

ಅಂದ್ ನಾನ್ ಸಣ್ಣಂವ. ಮೊದುವೆತ್ತೇಳ್‌ರೆ ಏನ್? ಯಾಕೆ? ಂದೂ ಗೊತ್ತಿತ್ತ್‌ಲೆ. ಆದ್ರೆ ಮನೇಲಿ ಮೊದುವೆ ವಿಸ್ಯ ಮಾತಾಡ್ಕನ ನೋ ಒಂತರ ಕುಸಿಯಾತಿತ್. ಅಪ್ಪನು ಅವ್ವನು ಮೊದುವೆ ವಿಸ್ಯನ ಾತಾಡ್ಕನ ಕೆಮಿಕೊಟ್ಟ್‌ಕೇಳಿಕಂಡ್ ಮನ್ಸೊಳಗೆ ಗ್ಯಾನ ಮಾಡ್ಕಿಂಡ್ ರ್ತಿದ್ದೆ. ಈಗ ನಾನ್ ನಿಮ್ಮ ಮುಂದೆ, ಅಂದ್ ಮೊದುವೆ ಕಾರುಬಾರ್ ಂಗೆ ನೆಡಯುತಿತ್ತ್‌ತ್ತೇಳ್ವ ಅನುಭವ ಮತ್ತೆ ಅನಿಸಿಕೆಗಳ್ನ ನಿಮ್ಮೊಟ್ಟಿಗೆ ಂಚಿಕಣ್‌ಕೆ ಇಷ್ಟಪಟ್ನೆ. ಮೊದುವೆಗೆ ತಯಾರಾದ ಹೈದ/ಗೂಡೆಗಳ ನನೆ ತಿಳ್ಕಂಡ್ ಮೊದುವೆಗೆ ಏರ್ಪಾಡಾದೆ. ಹಿಂದೆ ಈ ಕೆಲ್ಸ 'ತಂದ್‌ಗಾರರ್"ತ್ತೇಳ್ವರಿಂದ ನಡೆಯುತಿತ್. ಒಂದಿನ ತಂದ್‌ಗಾರ ೂಡೆನ ಮನೆಗೆ ಬಂದ್ ಇಂತ ಕಡೆ ಹೈದನ ಮಾಡ್ವೊಳೆ, ಹೆಂಗೆ ಮ್ಮ ಅಭಿಪ್ರಾಯ ಮತ್ತೆ ಬ್ಯಾರೆ ವಿಚಾರಗಳ್ನ ಗೂಡೆನ ಅಪ್ಪ ಅವ್ವನಲ್ಲಿ ಮಾತಾಡಿಹೋದವೆ. ಅಂದ್ ತಂದ್‌ಗಾರಂಗೆ ಬಾರೀ ಮರ್ಯಾದಿ ಮತ್ತೆ ಅಂವ ಮಾಡ್ದ ಹೈದ/ಗೂಡೆ ನಿಶ್ಚಿತ, ತಪ್ಪಿಹೋದ್ ಇಲ್ಲೆತ್ತೇಳಕ್. ಎರಡ್ ಕಡೆ ಒಪ್ಪಿದ ಮ್ಯಾಲೆ, ಒಂದಿನ ಗೊತ್ತ್‌ಮಾಡಿ ಗೂಡೆನು/ಹೈದನು ಪರಸ್ಪರ ನೋಡುವ ಏರ್ಪಾಡಾಗಿ ಗೂಡೆನ ಮನೆಗೆ ಬಂದ್ ಶಾಸ್ತ್ರ ಪ್ರಕಾರ ಗೂಡೆನೋಡಿ, ಮುಂದೆ ವೀಳ್ಯಶಾಸ್ತ್ರಕ್ಕೆ ತೀರ್ಮಾನಾದೆ. ಇದ್‌ಕೆ ಮುಂದೆ ಗೂಡೆನ ಕಡೆಯವು ಹೈದನ ಮನೆ ನೋಡಿ, ಅವನ ಸ್ಥಿತಿಗತಿಗಳ್ನ ತಿಳ್ಕಂಡವೆ. ವೀಳ್ಯಶಾಸ್ತ್ರಕ್ಕೆ ಗೊತ್ತಾದ ದಿನದಂದ್ ಪದ್ಧತಿ ಪ್ರಕಾರ ನಮ್ಮ ಉಡಿಗೆನ ಹಾಕಂಡ್, 5,7,9,11 ಹಿಂಗೆ ನೆಂಟ್ರ್ ಬೆಳಿಗ್ಗೆ 11-00 ಗಂಟೆಗೆ ಬಂದವೆ. ಇವ್ರ ಜತೆ ಹೈದ, ಹೈದನ ಅಪ್ಪ, ಅವ್ವ ಬರುವ ಕ್ರಮ ಇಲ್ಲೆ. ಇವು ಬಾಕೆ ಮುಂದೆ ನೆಲ್ಲಕ್ಕಿಲಿ ದೀಪ ಇಟ್ಟ್, ಕಾರಣಕ್ಕೆ ಇಟ್ಟ್, ಮತ್ತೆ ಐಮರಲಿ ಚಾಪೆ ಹಾಸುವೆ. ಈ ಚಾಪೆಲಿ ಊರ್ ನೆಂಟ್ರ್ ಕುದ್ದಿದ್ದವೆ. ಬಂದ ನೆಂಟ್ರ್ ಪೈಕಿ ಒಬ್ಬ ಮುಖ್ಯಸ್ತ ಇದ್ದ್ ನಮ್ಮ ಪದ್ಧತಿನ ಉಡಿಗೆಲಿ ನೆಂಟ್ರ್ ಮರ್ಯಾದಿಯಾಗಿ ಮನೆ ಹತ್ತ್‌ವೆ. ಮನೆ ಹತ್ತಿದ ಇಬ್ಬರು ನೆಂಟ್ರ್ ಚಾಪೆ ಹಾಕಿದ ಐಮರಲಿ ಕುದ್ದವೆ. ಅಲ್ಲಿಂದ ನೆಂಟ್ರ್‌ನೆಲ್ಲಾ ಮಾತಾಡ್ಸಿ ಬಂದ ವಿಸ್ಯ ತಿಳ್ಸಿ ಗೂಡೆನ ಪದ್ಧತಿ ಪ್ರಕಾರ ಮಾತಾಡ್ಸಿ ಹೋದವೆ. ಇತ್ತ ಗೂಡೆನ ಮನೆಲಿ ಊರ್ ನೆಂಟ್ರೆಲ್ಲಾ ಸೇರಿದ್ದವೆ. ಅಲ್ಲಿಂದ ಬಂದ ನೆಂಟ್ರೆಲ್ಲಾ ಒಟ್ಟಿಗೆ ಮನೆ ಹತ್ತುವೆ. ಮನೆ ಕೈಯಾಲೆಲಿ ಎರಡ್ ಚಾಪೆ ಹಾಸಿ, ಮಧ್ಯೆಲಿ ಮಣೆ ಕಂಚಿನ ಹರಿವಾಣ, ಎಲೆತಟ್ಟೆ, ಒಂದ್ ಚೊಂಬ್ ನೀರ್, ದೀಪ ಇಟ್ಟ್ ಶಾಸ್ತ್ರಕ್ಕೆ ರೆಡಿಯಾದೆ. ಮನೆಕಡೆ, ಒಬ್ಬ ಊರಂವ, ಮನೆಂವ ಮತ್ತೆ ಹಿರಿ ಅಳಿಯ ನೆಂಟ ಕುದ್ದವೆ. ಹಂಗೆ, ನೆಂಟ್ರ್ ಕಡೆವು ಮೂರು ಜನ. ಇವರ ಎದ್‌ರ್‌ಗೆ ಕುದ್ದವೆ. ಇದ್‌ಕೆ ದೇವಸಭೆತ್ತೇಳ್‌ವೆ. ಉಭಯಕಡೆ ಶಾಸ್ತ್ರಪ್ರಕಾರ ವೀಳ್ಯ ಬಡ್ಸಿಕಂಡ್. ಮುಂದಿನ ಲಗ್ನದಿನ, ಗೂಡೆಗೆ ಬಳುವಳಿಯಾಗಿ ಕೊಡುವ, ಚಿನ್ನಾಭರಣ, ಧಾರೆಸೀರೆ ಇತ್ಯಾದಿಗಳ ಬಗ್ಗೆ ಚರ್ಚೆ ಮಾಡಿ, ತೀರ್ಮಾನ ತಕ್ಕಂಡ್, ಲಗ್ನಪತ್ರಿಕೆ ಬರ್ದ್ ಉಭಯರ ರುಜು ಹಾಕಿ, ಲಗ್ನಪತ್ರಿಕೆನ ನೆಲ್ಲಕ್ಕಿಡಿಲಿ ಅದ್‌ಲ್‌ಬದ್‌ಲ್ ಮಾಡಿಕಂಡವೆ. ಈ ದಿನಂದ ಗೂಡೆ/ಹೈದ ಪರಸ್ಪರ ಮೊಖ ನೋಡ್‌ಕ್ಕಾಗದ್. ಇವಿಬ್ಬರೂ ಬ್ಯಾರೆಯವರ ಮೊದುವೆಗಳಿಗೆ ಹೋಕಾಗದ್. ಒಂದು ವೇಳೆ ಅನಿವಾರ್ಯವಾದಲ್ಲಿ ಮದುವೆ ಚಪ್ಪರದ ಮೇಲ್ಕಟ್ಟ್‌ಡಿಗಾಗಿ ದಾಟುದುಲೆ ! ಮತ್ತೆ ಇವರಿಬ್ಬರ ಭೇಟಿ ಧಾರೆ ಮೂರ್ತಲಿ ! ಅಲ್ಲಿಂದ ಮೊದುವೆ ದಿನಗಂಟ ಹೆತ್ತವು, ಮೊದುವೆಗೆ ಬೇಕಾದ ಅಕ್ಕಿ, ಬಟ್ಲೆಟ್ಟ್ ಸಾಮಾನು, ಚಪ್ಪರಹಾಕುದು ಮತ್ತೆ ಹಂದಿ ಮಾಡುವ ಕಾರ್‌ಬಾರ್‌ಗಳಿಗೆ ಮನೆವುಕೆ, ಊರವುಕೆ ಹೇಳ್‌ವೆ. ಊರವು ಈ ಎಲ್ಲಾ ಕಾರ್ಯನ ಆಗಂದ ಸುರ್‌ಮಾಡ್‌ವೆ. ಮತ್ತೆ ತಮ್ಮ ಸ್ವಂತ ನೆಂಟ್ರ್, ಸೋದರ ಮನೆವುಕೆ, ಅಡುಳಿಗೆ ವೀಳ್ಯ ಕೊಟ್ಟು ಮೊದುವೆನ ಲಾಯಕ್ಕಾಗಿ ನಡ್ಸಿಕೊಡಕುತ್ತೇಳಿ ಕೇಳಿಕಂಡವೆ. ಉಳಿದವುಕೆ ಕಾಗದ ಪ್ರಿಂಟ್ ಮಾಡಿ ಹಂಚುವೆ. ಗೂಡೆಗೆ ತೆಗ್ದ ಚಿನ್ನಾಭರಣ, ಬಟ್ಟೆಬರೆಗಳನ್ನ ನೋಡ್‌ಕೆ ನೆರೆ ಕರೆಯುವುಕೆ ಹೇಳಿಕ್‌ಳ್ಸ್‌ವೆ. ಮೊದುವೆಗೆ ಓಲಗದವುಕೆ, ಮಡಿವಾಳಂಗೆ, ಹಜಾಮಂಗೆ ಮತ್ತೆ ಅಡಿಗೆಯವಂಗೆ ವೀಳ್ಯ ಕೊಟ್ಟವೆ. ಎಂಟ್ ದಿನಕ್ಕೆ ಮುಂದೆ ಊರವು ಮನೆವು ಸೇರಿ ಹನ್ನೆರಡ್ ಕಂಬದ ಚಪ್ಪರ ಹಾಕುವೆ. ಇದರ್ಲಿ ಒಂದು ಹಾಲೆ ಮರದ ಕಂಬ, ಬಾಕಿ ಅಡಿಕೆ ಮರದ ಕಂಬಗ. ಚಪ್ಪರದ ಒಂದು ದಿನದ ಮುಂದೆ ಹಲ್ಸನ ಮರದ ಸೊಪ್ಪು ಹಾಕಿ ಒಂದ್‌ಗೆಲ್ಲ್‌ನ ಚಪ್ಪರದಿಂದ್ ಬೆಳಿಗ್ಗೆ ಊರಂವ ಹಾಕಿದೆ. ಈ ಸೊಪ್ಪುದ್ ಕೊಡಿ ಮನೆ ಮುಂದೆ ಪೂರ್ವಕ್ಕೆ ಹೆಣ್ಣ್ ಇಳಿಯದಾದರೆ, ಹತ್ತುದಾದರೆ ಸೊಪ್ಪು ಮನೆ ಕಡೆ ಇರೊಕು. ಚಪ್ಪರದ ಮಧ್ಯದ ನಾಲ್ಕ್ ಕಂಬಗಳಿಗೆ ಸೇರಿಸಿ ಧಾರೆ ಮಂಟಪನ ಬಾಳೆದಂಡ್‌ಗಳಂದ ಮಣ್ಣ್‌ತುಂಬಿಸಿ ಮಾಡ್ತುವೆ. ಇದ್ರ ಹತ್ರ ಒಂದ್ ಬರಿಲಿ ಊಟಕ್ಕೆ ಚಪ್ಪರ ಹಾಕಿದ್ದವೆ. ಊಟಕ್ಕೆ ಬೆಂಚಿ, ಅಡಿಗೆ ಪಾತ್ರ, ನೆಂಟ್ರ್‌ಗೆ ಕುರ್ಚಿಗಳನ್ನ ನೆರೆಕರೆಯವ್ರಂದ ಕೇಳಿ ಹೊತ್ತ್ ತಂದಿದ್ದವೆ. ಚಪ್ಪರದಂದ್ ಬೆಳಿಗೆ ಹಂದಿ ಹೊಡ್ದ್ ಮಾಂಸ ಮಾಡಿ ಮಧ್ಯಾಹ್ನಕ್ಕೆ ಆದೆ. ಹಂದಿ ಮಾಡವುಕೆ ಪ್ರತ್ಯೇಕಕಳ್ಳ್ ಕೊಟ್ಟವೆ. ಬೆಳಿಗ್ಗೆ ಮಡಿವಾಳ ಬಂದ್ ಮೇಲ್ಕಟ್ಟ್ ಕಟ್ಟಿದೆ. ಚಪ್ಪರದಂದ್ ಸಾಯಂಕಾಲ ಊರ್‌ನೆಂಟ್ರ್ ಸೇರ್‌ವೆ. ಮಧ್ಯಾಹ್ನ ಮೂರು ಗಂಟೆಂದ ಶಾಸ್ತ್ರ ಸುರಾದೆ. ಶಾಸ್ತ್ರ ನೆಲ್ಲಕ್ಕಿಡಿಲಿ ಮತ್ತೆ ಚಪ್ಪರದಡಿಲಿ ನಡ್‌ದೆ. ಶಾಸ್ತ್ರ ಎಲ್ಲಾಮುಗ್ಸಿ ಗೂಡೆ/ಹೈದ ಮೀಯಕ್ಕೆ ಹೋದೆ. ಮೀದ್ ಬಾಕನ ತೆಂಗ್‌ನ ಮರದಡಿಲಿ ಗಂಗೆ ಪೂಜೆ ಮಾಡಿ ಮನೆ ಹತ್ತ್‌ಕನ ಊರ್‌ಹೈದಂಗ ಹಸೆಬರ್ದ್‌ದ್ದವೆ. ಹಸೆ ಬರ್ದವುಕೆ ಮರ್ಯಾದಿಯಾಗಿ ಹೊದಿರಿ, ಬಾಳೆಹಣ್ಣ್, ಕಾಯಿ ಕೊಟ್ಟವೆ. ಗೂಡೆ ಮನೆ ಹತ್ತಿದ ಮ್ಯಾಲೆ ಮನೆದೇವ್ರ್‌ಗೆ ಹರಿಕೆ ಹಣಕಟ್ಟಿ ಮದ್ರಂಗಿ ಶಾಸ್ತ್ರಕ್ಕೆ ಕೂರ್ಸುವೆ. ಸೋದರ ಭಾವಂದ್‌ರ್ ಮದ್‌ರಂಗಿ ಹಾಕುವೆ. ಮೊದುವಳ್ತಿ ಒಟ್ಟಿಗೆ ಅಡುಳಿ ಮತ್ತೆ ತಂಗಿ ಕಂಚಿಮಿ ಹಿಡಿದವೆ. ಇದೆಲ್ಲಾದ ಮ್ಯಾಲೆ ಪಟ್ಟೆದಾರ ಕೈಲೊಂದು ಚೊಂಬ್ ನೀರ್ ಮತ್ತೆ ಊರ್‌ಪತ್ತಿ ಹಿಡ್ಕಂಡ್ (ಹೊದಿರಿ/ಹುರುಕುಲು/ಬಾಳೆಹಣ್ಣು/ಕಾಯಿ/ಕತ್ತಿ) ಊರವು ನೆಂಟ್ರ್, ಊಟಕ್ಕೇಳಿತ್ತೇಳಿ ಹೇಳಿಕ್‌ಂಡ್ ಊರವುಕೆ ಊರುಪತ್ತಿ ಕೊಟ್ಟವೆ. ಊರವು ಊರು ಪತ್ತಿತಕ್ಕಂಡ್ ಊಟಕ್ಕೆ ಕುದ್ದವುಕೆಲ್ಲಾ ಹಂಚುವೆ. ಇದ್ ಎಲ್ಲವುಕೆ ಎತ್ತಿದ ಮ್ಯಾಲೆ ಊಟ ಮಾಡುವೆ. ಊಟೋಪಚಾರ ಆದ ಮ್ಯಾಲೆ, ಎಲೆ ಅಡಿಕೆ ಹಾಕಂಡ್, ಸಿಗರೇಟ್ ಬಿಡೀ ಸೇದಿಕ್ಕಂಡ್, ಸ್ವಲ್ಪ ಹೊತ್ತು ಕೊಣ್ದ್ ಅವರವರ ಮನೆಗೆ ಹೋದವೆ. ಇತ್ತ ಗೂಡೆ/

ಹೈದ ಮದ್ರಂಗಿನ ಕೈನ ಬಟ್ಟೆಲಿ ಕಟ್ಟಿಕ್ಂಡ್ ನೆಲ್ಲಕ್ಕಿ ಕೆಳಿಗೆ ಚಾಪೆಲಿ ಮಲ್‌ಗುವೆ. ಮಾರ್‍ನೆದಿನ ಮೂರ್ತ ಬೆಳಿಗ್ಗೆ ಹತ್ತು ಗಂಟೆಗೆ ನಿಶ್ಚಿತ ಆಗಿದ್ದದೆ. ಇದ್‌ಕೆ ಮುಂದೆ ಚಪ್ಪರದ ಅಲಂಕಾರ, ಬೆಲೂನ್ ಕಟ್ಟುದು, ಮಾವಿನ ಎಲೆ ತೋರಣ ಮಾಡಿ ಸುಸ್ವಾಗತ ಬೋರ್ಡ್‌ನ ಎರಡ್ ಬಾಳೆಕಂಬಗಳ ಮಧ್ಯೆ ಕಟ್ಟುವೆ. ಧಾರೆ ಮಂಟಪಲಿ ತೂಗ್‌ದೀಪ ಇಟ್ಟಿದ್ದವೆ. ಅಕ್ಕಿ ಹಸೆಬರ್‍ದ್, ಚಾಪೆ ಮ್ಯಾಲೆ ಎರಡು ಕುರ್ಚಿಗಳ್ನ ಇಟ್ಟವೆ. ಅಕ್ಕಿ ಮೂರ್ತಕ್ಕೆ ಕೂರ್‍ಸಿಯಾದ ಮ್ಯಾಲೆ ಮೊದ್ಲು ಗೂಡೆ/ಹೈದಂಗೆ, ಅಪ್ಪ ಅವ್ವ ಬಂದ್ ಹಣಕಟ್ಟಿ ಆಶೀರ್ವಾದ ಮಾಡುವೆ. ಮತ್ತೆ ಬಾಕಿದ್ದವೆಲ್ಲಾ ಹಣ ಕಟ್ಟಿ ಆಶೀರ್ವಾದ ಮಾಡುವೆ. ಮೂರ್ತ ಮುಗ್ದ ಮೇಲೆ ಅಡುಳಿ ಮೊದುವಳಿಗೆನ ಕರ್‌ಕಂಡ್ ಮನೆಯೊಳಗೆ ಹೋದೆ. ಇದ್‌ಕೆ ಮುಂದೆ ಬೆಳಿಗ್ಗೆ ಹನ್ನೊಂದು ಗಂಟೆ ಹೊತ್ತಿಗೆ ಸೋದರ ಹತ್ಸ್‌ವ ಕಾರ್ಯಕ್ರಮ ಉಟ್ಟು. ಇವರ್‍ನ ಬಾರಿ ಮರ್ಯಾದಿಯೊಟ್ಟಿಗೆ ಹೊದಿರಿ, ಹುರುಕುಲು, ಬಾಳೆಹಣ್ಣ್, ಕಾಫಿ, ಕಳ್ಳ್, ಕಾಯಿ ಎಲ್ಲನ ವಾಟೆ ಪಚ್ಚೆಲಿ ತಕ್ಕಂಡ್ ಒಡ್ಡೋಲಗ ಸಮೇತ ಮನೆಗೆ ಹತ್ಸ್‌ವೆ. ಮೂರ್ತ ಕಳ್ದ್ ಊಟೋಪಚಾರ ಆದ ಮ್ಯಾಲೆ ಮೂರು ಗಂಟೆ ಹೊತ್ತಿಗೆ ಪೆಟ್ಟಿಗೆ ತುಂಬ್ಸುದು ಏರ್ಪಾಡದೆ. ಇದ್ನ ಊರವು ನೆಂಟ್ರ್ ಸೇರಿ ನಡ್ಸ್ ಕೊಟ್ಟವೆ. ಮೂರ್ತಂದ್ ಸಾಯಂಕಾಲ ಹೈದನ ದಿಬ್ಬಣ ಹೊರಟದೆ. ಈಗ ಒಕ್ಕಲು ಯಜಮಾನ ದಿಬ್ಬಣದ ಮುಖ್ಯಸ್ತಂಗೆ ದಿಬ್ಬಣದ ಪೂರ್ಣ ಜವಾಬ್ದಾರಿ ವಹಿಸಿದೆ. ದಿಬ್ಬಣ ಸಾಮಾನ್ಯವಾಗಿ ನಡ್‌ಕಂಡ್/ಬಸ್ಸ್‌ಲಿ ಬಾರಿ ಗೌಜಿಯಾಗಿ ಹೋದವೆ. ಇತ್ತ ಗೂಡೆನ ಕಡೆವು ದಿಬ್ಬಣ ಬರುವರ್‍ನ ಕಾದ್‌ಕಂಡ್ ಇದ್ದವೆ. ದಿಬ್ಬಣ ಬಂದ್ ಮನೆಗೆ ತಲ್‌ಪಿ ಎರಡ್ ಕಡೆ ವಾಲಗ ಸೇರ್‍ಕಂಡ್ ಬಾರಿ ಕೊಣ್ದವೆ. ಅಲ್ಲಿಂದ ದಿಬ್ಬಣ ಮಾತಾಡ್ಸುದು, ಗೂಡೆನ ಅವ್ವ ಮದುವಣಂಗೆ ಒಂದು ಗ್ಲಾಸ್ ಹಾಲ್ ಕೊಟ್ಟದೆ. ಮತ್ತೆ ಪುನಃ ಮದುವಣನೆರೆಯೊಟ್ಟಿಗೆ ಎಲ್ಲವೂ ದಿಬ್ಬಣ ಮಾತಾಡ್ಸುದು. ಅಲ್ಲಿ ನೀರ್‌ಚಾಪೆ, ಗಂಧದ ಕೊರ್‍ಡ್, ಚಾಣೆಕಲ್ಲ್‌ಗಳ್ನ ಪರಸ್ಪರ ವೀಳ್ಯ ಬಡ್ಸಿಕ್ಂಡ್ ಶಾಸ್ತ್ರ ಪ್ರಕಾರ ನಡ್ದದೆ. ಇದ್‌ಕೆ ಮುಂದೆ ಯಾವ ನೆಂಟನೂ ಮನೆ ಹತ್ತ್‌ಕ್ಕಾದ್. ಒಂದು ವೇಳೆ ಮನೆ ಹತ್ತಿದ್ ಗೊತ್ತದರೆ ಗಂಡ್‌ನ ಕಡೆಯವು ತಪ್ಪು ಹಣ ಕಟ್ಟಿಕ್ಕಾದೆ. ಇನ್ನ್ ಧಾರೆಗೆ ಎರಡ್ ಕಡೆವು ತಯಾರ್ ಮಾಡಕು. ಸಾಮಾನ್ಯವಾಗಿ ಬೆಳ್ಗೆ ಕೋಳಿಕೂಗುವಹೊತ್ತ್‌ಗೆ ಧಾರೆ ನಡ್ದದೆ ಇದ್‌ಕ್ಕಿರುವ ಏರ್ಪಾಡ್‌ಗೆ ದೇವಸಭೆಗೆ, ಚಾಪೆ, ಚೊಂಬ್‌ನೀರ್, ಮಣೆ, ಕಂಚಿನ ಹರಿವಾಣ, ಎಲೆತಟ್ಟೆಗಳ್ನ ಚಪ್ಪರದ ಧಾರೆ ಮಂಟಪಲಿ ಇಟ್ಟವೆ. ಉಭಯ ಕಡೆ ತಲಾ ಮೂರು ಜನ ನಮ್ಮ ಉಡಿಗೆಲಿ ಕುದ್ದವೆ. ಅಲ್ಲಿ ಪ್ರಮುಖವಾದ ಶಾಸ್ತ್ರ ಪದ್ಧತಿ ಪ್ರಕಾರ ವೀಳ್ಯ ಬಡ್ಸಿ ಬಣ್ಣ ಬಂಗಾರ ಇಟ್ಟ್ ಅದ್ನ ಒಕ್ಕಲೆಜುಮಾನ ಚೆಕ್‌ನ ವಸ್ತ್ರಲಿ ಕಟ್ಟಿ ಕೊಟ್ಟವೆ. ಇತ್ತ ಅಕ್ಕಂದ್‌ರ್ ಶೋಬಾನೆ ಹೇಳಿಕ್ಕಂಡ್ ದೇವ ಸಭೆ ಮಧ್ಯೆಲಿ ದಾಟಿಕಂಡ್. ಮೊಣ್ಣೆನ ದೀಪದೊಟ್ಟಿಗೆ, ಗೂಡೆಗೆ ಧಾರೆ ಸೀರೆ ಉಡ್ಸಿ ಶೃಂಗಾರ ಮಾಡ್‌ಕೆ ಹೋದವೆ. ಆಗ ಗೂಡೆನ ದೊಡ್ಡ ಬೇಡ್‌ಶೀಟ್‌ಲಿ ನಾಲ್ಕೈದ್ ಗೂಡೆಗಳೊಟ್ಟಿಗೆ ಅಡ್‌ಗಿಸಿಟ್ಟವೆ. ಈಗ ದಿಬ್ಬಣದ ಅಕ್ಕಂದರ್ ಗೂಡೆನ ಹುಡುಕಿ ಹಿಡಿಯಕು. ಆಮ್ಯಾಲೆ, ಗೂಡೆಗೆ ಉಡಿಗೆ ತೊಡ್ಸಿಯಾಗಿ ವಾಪಾಸ್ಸ್ ಹೋಕನ. ಅವರಮ್ಯಾಲೆ ಅಕ್ಕಿ ಬಿಸಾಡುವೆ. ಧಾರೆಗೆ ಮುಂದೆ ನೆಂಟ್ರ್ ಮಾತಾಡ್ಸ್‌ದು ಮತ್ತೆ ಅವುಕೆ ಕಾಫಿ ಕೊಡ್ದು ಆಗ ಬಂ ಉದ್ದೇಶ, ಯಾವ ಊರ್, ಯಾವ ನಾಡ್ ಇದ್ನೆಲ್ಲಾ ಪದ್ಧತಿ ಪ್ರಕಾ ಹೇಳ್ವ ಸಂದರ್ಭಲಿ ಬಾರಿ ತಮಾಷಿ ಇದ್ದದೆ. ಒಂದು ವೇಳೆ ತಾ ಹೇಳ್ವ್ ಒಕ್ಕಣೆಗಳಲ್ಲಿ ತಪ್ಪಾದರೆ, ತಪ್ಪು ಹಣ ಕಟ್ಟಿಕ್ಕಾದೆ. ಈ ಧಾರೆ ಗೂಡೆನ ಸೋದರವಾವ ನೆಲ್ಲಕ್ಕಿಡಿಂದ ಎತ್ತಿಕಂಡ್ ಬಂದ ಚಪ್ಪರದಡಿಲಿ ನಿಲ್ಸ್‌ವೆ. ಹೈದನ ಕಡೆಯು ಬಂದ್ ನಿತ್ತವೆ. ಎರಡ ಕಡೆ ವಾಲಗ ಬಾರಿ ಸದ್ದ್‌ಲಿ ವಾತಾವರಣ ಆ ಒಂದ್ ಪವಿ ಬಂಧನಕ್ಕೆ ಮೆರುಗ್ ಕೊಟ್ಟದೆ. ಸರಿಯಾದ ಸಮಯಕ್ಕೆ ಧಾರೆ ನಡ್ದ ಗಂಡು ಹೆಣ್ಣ್ ಪರಸ್ಪರ ಹೂಮಾಲೆ ಬದಲ್ ಮಾಡಿಕ್ಕಂಡ್, ಕಂಚಿ ಶಾಸ್ತ್ರದೊಟ್ಟಿಗೆ, ತಾಳಿಕಟ್ಟಿ, ಕಳಸಂದ ಹಾಲು ಧಾರೆನ ಅಪ್ಪ ಅ ಯಾ ಬ್ರಾಹ್ಮಣಂದ ಮಾಡಿಯಾದ ಮ್ಯಾಲೆ ಅಲ್ಲೆ ಗಂಡ್ ಹೆಣ್ ಕೈಕೈ ಹಿಡ್ಕಂಡ್ ಮೂರು ಸುತ್ತು ಬಂದ ಮೇಲೆ ಮುಂದೆ ಅವ ಮನೆ ಹತ್ತಿಸಿ ಹಾಲು ತುಪ್ಪ ಶಾಸ್ತ್ರಕ್ಕೆ ಕೂರ್‍ಸುವೆ. ಇದ್ ಆದ ಮ್ಯಾ ಅವಿಬ್ಬರು ಅಲ್ಲಿ ಸೇರ್ದ ಸರ್ವ ಹಿರಿಯರ ಕಾಲ್ ಹಿಡ್ದು ಆಶೀರ್ವಾ ಪಡ್ಕಂಡವೆ. ಸೂರ್ಯ ಉದಯಿಸ್‌ಕೆ ಮುಂದೆ ದಿಬ್ಬಣದವುಕೆ ಊ ಕೊಟ್ಟು ಹೆಣ್ಣ್ ಇಳಿಸ್‌ಕೆ ಏರ್ಪಾಡ್ ಮಾಡುವೆ. ಹೆಣ್ಣ್ ಇಳಿಸ್ ಮುಂದೆ ಪಟ್ಟೆ ವೀಳ್ಯ ತಯಾರ್ ಮಾಡುವೆ. ಈಗ ಮದುಮಕ್ಕಳ್ ಚಪರದಡಿಗೆ ಕರ್‌ಕಂಡ್‌ಬಂದ್ ನಿಲ್ಸಿ ಪಟ್ಟೆ ವೀಳ್ಯ ಕೊಡ್ಸುವೆ. ಆ ಗೂಡೆ ಮರ್ದ್‌ಕೆ ಸುರು ಮಾಡ್ದೆ. ವೀಳ್ಯ ಕೊಟ್ಟ್ ಆದ ಮ್ಯಾಲೆ, ಹೆಣ್ಣ್‌ಗಂಡ್, ವಹಿಸಿಕೊಡುವ ಕ್ರಮ, ಗೂಡೆನ ಹಾಡಿ ಹೊಗಳಿ ಬಾ ಲಾಯಕ್ಕಲಿ ಗಂಡಿನ ಕಡೆಯವುಕೆ ವಹಿಸಿ ಕೊಟ್ಟವೆ. ಒಡ್ಡೋಲಗಲಿ ಹೆಣ್ಣ್ ಇಳ್ದ್ ಸ್ವಲ್ಪ ದೂರ ಹೋಗಿ ಅಲ್ಲಿ ಕೂರ್‍ಸಿ ಕಾಫಿ ಕೊಟ್ಟವೆ. ಕಾಫಿ ಕೊಟ್ಟ್ ಆದ ಮ್ಯಾಲೆ ಮುಂದಿನ ಪದ್ಧತಿಯಾದ ತುಪ್ಪದ ಗಟ್ಟೆ, ಯಾಗತಾದ್‌ತ್ತೇಳಿ ತೀರ್ಮಾನಾದೆ. ಇದ್ ಸಾಮಾನ್ಯ 3, 5, 7, 9 ದಿನಗಳಲ್ಲಿ ನಡ್ದದೆ. ಅಲ್ಲಿವರೆಗೆ ತಮಿಗೆ ಕಟ್ಟಿದ ಕಾಸ್ತಾಳಿನ ಬಿಚ್ಚಿಡ್‌ಕ್ಕಾಗದ್. ಇತ್ತ ಹೆಣ್ಣ್‌ನ ಕರ್‌ಕಂಡ್ ದಿಬ್ಬಣ ಹೊರಟ್ ಗಂಡ್‌ನ ಮನೆಗೆ ಸೂಕ್ತ ಕಾಲಲಿ ಹತ್ತಕು. ದಿಬ್ಬಣದ ಮುಖ್ಯಸ್ಥ ಹೆಣ್ಣ್‌ಗಂಡ್‌ನ ಒಕ್ಕಲೆಜಮಾನಂಗೆ ವಹಿಸಿದೆ. ಮುಂದೆ ನಾಗೋಳಿ ಶಾಸ್ತ್ರ ನಡ್ದದೆ. ಗಂಡ್‌ನ ಮನೆಲಿ ಹಟ್ಟಿಂದ ಸಗಣಿ ತಂದ್ ಕುಕ್ಕೆಲಿ ತುಂಬಿಸಿ, ಅದರೊಳಗೊಂದು ಕಲ್ಲ್ ಹಾಕಿ ಚಪ್ಪರದಡಿಲಿ ಇಟ್ಟಿದ್ದವೆ. ಈಗ ಹೆಣ್ಣ್ ಗಂಡಂಗೆ ಸಗ್‌ಣಿಕುಕ್ಕೆ ಹೊರ್‍ಸಿತ್ತೇಳ್ದೆ. ಅದನ ಹೊತ್ತ್‌ಕಂಡ್ ಹೋಗಿ ದೊಡ್ಡ ಗದ್ದಲಿ (ಹುತ್ರಿಗೆ ಕದ್‌ರ್ ಕೊಯ್ಯುವ ಗದ್ದೆ) ಹಾಕ್‌ಕನ ಗಂಡ ಕೈಲೊಂದು ಹಾಲೆಮರದ ಕಂಬ ಹಿಡ್ಕಂಡಿದ್ದ್, ಸಗಣಿ ಹಾಕಿದ ಮ್ಯಾಲೆ ನೆಡಕು. ವಾಪಾಸ್ ಬ್ಯಾಕನ ಗೂಡೆಗೆ ಕೊಟ್ಟೆ ತಾಮರ್ದ ಬಿಂದಿಗೆಲಿ ಮುತ್ತೈದೆಗೆ ಬಾವಿಂದ ನೀರೇಳ್ದ್ ಇಟ್ಟಿದ್ದವೆ. ಅದರ್‍ನ ಗೂಡೆ ತಾನ್ ತಂದ ಮಣಿ ಸಿಂಪೆಲಿ ಗಂಡಂಗೆ ಹೊರ್‍ಸಿಕ್ಕೇಳಿ, ಹೊತ್ತ್‌ಕ್ಂಡ್ ಬಾಕನ ದಾರಿಯುದ್ದಕ್ಕೆ ಹೈದಂಗ ಕೂಡಿಕ್ಂಡ್ ದಾರಿ ತಡ್ದವೆ, ಗೂಡೆ ಹೆಂಗಾರ್ ತಪ್ಪ್‌ಸಿಕಂಡ್ ಬಂದ್ ಮನೆ ಹತ್ತಕು. ಅಂದ್ರೆ ಬಿಂದಿಗೆ ಮಾತ್ರ ತಲೆಮ್ಯಾಲೆ ಇರಕು. ಗೂಡೆಗೆ ಬಿಂದಿಗೆ ಹೊತ್ತ್ ಸುಸ್ತಾತ್‌ತೇಳ್ಕನ ಹೈದಂಗ ಕೊಣ್ತ್ ನಿಲ್ಸಿ ಅವಳ ಕೈಂದ ದುಡ್ಡ್ ಕೇಳ್‌ಕಂಡ್, ಮತ್ತೆ ನೆಲಕ್ಕಿಡಿಲಿ ಅವುಳಿಗೆ ಪುನ ಹಣ ಕಟ್ಟುವೆ. ಗೂಡೆ ಮನೆ ಹತ್ತಿದ ಮ್ಯಾಲೆ ಬಾಗ್‌ಲ್ ತಡ್ದವೆ. ಆಗ ಹೆಣ್ಮಕ್ಕ ಅವಳ

ಂಗೆ ಗಂಡ್ ಕೂಸ್ ಹುಟ್ಟಿರೆ ಸೋದರ ಸಮ್ಮಂದ ಬೆಳ್ಳೊಕು, ನಿನ್ನ ಂಡನ ಹೆಸ್ರ್ ಮತ್ತೆ ಪದ ಹೇಳ್‌ಕೆ ಹೇಳುವೆ. ಉತ್ತರ ಸರಿ ಹೇಳ್‌ರೆ ಟ್ಟವೆ ಇಲ್ಲದ್ರೆ ತಪ್ಪ್ ಕಟ್ಟೆಕ್ಕಾದೆ. ಅಲ್ಲಿಂದ ತನ್ನ ಮಡ್ಲಕ್ಕಿಂಧ ಾಯಸ ಮಾಡಿ ನೆಲ್ಲಕ್ಕಿಡಿಲಿಕುದ್ದ ತನ್ನ ಗಂಡಂಗೆ ಮೊದ್ಲು ಬಡ್ಸಿ ಾಕಿದ್ದವುಕೆ ಬಡ್ಸಿ ತಾನ್ ಕಡೇಗೆ ಬಡ್ಸಿಕಣಕು. ಇದೆಲ್ಲಾ ಆದ ಮ್ಯಾಲೆ ೊಡೆನ ಪೆಟ್ಟಿಗೆ ನೋಡುವ ಕಾರ್ಯಕ್ರಮ ಉಟ್ಟು. ಪೆಟ್ಟಿಗೆ ೋಡ್ಕ್‌ನ ಬಾರಿ ತವಾಸಿ ಇದ್ದದೆ. ಕಡೇಲಿ ಕೋಂಬರೆಗೆ ೂಡ್ಸುದುತ. ಇಲ್ಲಿ ಗಂಡ ಮುಂದೆ ತನ್ನ ಕೋಂಬರೆಳಿಲಿ ಇದ್ದದೆ. ಲ್ಲಿ ತಾಂಬೂಲ ಇಟ್ಟಿದ್ದವೆ. ಹೆಣ್ಣ್ ತನ್ನ ಕೆಲ್ಸ ಮುಗಿಸಿ, ಗಂಡನ ಕ್ಕತಂಗೆಕ ಅವಳ್ನ ಗಂಡನ ಕೋಣೆಗೆ ಕಳ್ಸಿ ಬಾಗಲ್ ಹಾಕುವೆ. ಹೆಣ್ಣ್ ನ್ನ ಕೈಲಿದ್ದ ಒಂದು ಗ್ಲಾಸ್ ಹಾಲ್‌ನ ಗಂಡಂಗೆ ಕುಡಿಸಿದೆ. ಅಂದ್ ಾತ್ರೇನ ಕುಪಿಲಿ ಕಳ್ದವೆ. ಹೊತ್ತಾರೆ ಬೆಳ್ಕ್ ಹರಿಯಕೆ ಮೊದ್ಲೆ ಎದ್ದ್ ೀದ್, ಮನೆ ಗುಡಿಸಿ, ದೇವರ ದೀಪ ಹೊತ್ತಿಸಿ, ಅಡಿಗೆ ಮನೆಗೆ ಹೋಗಿ ಹಿಂದಿನ ದಿನದ ಬೂದಿನ್ನೆಲ್ಲಾ ಎತ್ತಿ ಹೊಸದಾಗಿ ಕಿಚ್ಚಿ ಮಟ್ಟ್ ನ್ನನೊ ಕಾಫಿನೋ ಮಾಡ್ವೆ. ಹೆಣ್ಣ್ ರೊಟ್ಟಿ ಮಾಡಿ ಮನೆ ಮಂದಿಗೆಲ್ಲಾ ಬಡ್ಸಿದೆ. ಇಲ್ಲಿಗೆ ಒಂದು ಮೊದ್ಮುವೆ ಜಂಬರ ಮುಗ್ತ್.

ಇಲ್ಲಿ ಮುಖ್ಯವಾಗಿ ಗವುನಿಸ್‌ದು ಎನ್‌ತ್ತೇಳ್‌ರೆ, ಪ್ರತಿಯೊಂದು ಪದ್ಧತಿನ ಬಾರಿ ಶಾಸ್ತ್ರೋಕ್ತವಾಗಿ ಮಾಡುವೆ. ನಾ ಬರೆಯಕ್ಕನ ಸಣ್ಣ ಪುಟ್ಟ ಪದ್ಧತಿಗ ಬಿಟ್ಟು ಹೋಗಿರ್‌ದು. ಮತ್ತೆ ಪ್ರತೀ ಶಾಸ್ತ್ರಲಿ ಮುತ್ತೈದೆಯರ್ ಸೋಬಾನೆ ಹೇಳ್‌ವೆ. ಹಂಗೆ, ಎಲ್ಲಾ ಶಾಸ್ತ್ರಗಳಲ್ಲಿ ಯಾರೂ ಕಾಲಿಗೆ ಷೂ ಚಪ್ಪಲಿ ಹಾಕಂಡಿರುದುಲೆ. ಮೊದುವಣ ತನ್ನ ಸಂಸ್ಕೃತಿ ಉಡಿಗೆಲಿ ಇದ್ದದೆ. ಎಲ್ಲಾ ಪದ್ಧತಿಗಳ್ನ ಬಾರಿ ಮುತುವರ್ಜಿ ವಹಿಸಿ, ಅದರ ಪವಿತ್ರತೆನ ಕಾಪಾಡಿಕ್ಕಂಡ್ ಗೌರವಾದಾರಗಳೊಟ್ಟಿಗೆ ಮೊದುವೆ ಜಂಬರನ ಮಾಡುತ್ತಿದ್ದೊತ್ತೇಳ್ದನ ಓದುಗರೊಟ್ಟಿಗೆ ಹಂಚಿಕಣೆ ನಮ್ಮ ಜನಾಂಗದ ನಿಜವಾದ ಮೊದುವೆ ಪದ್ಧತಿ, ಆಚಾರ, ವಿಚಾರ, ಸಂಸ್ಕೃತಿ, "ಗೌಡಸಂಸ್ಕೃತಿ' ಮತ್ತೆ 'ಕೊಡಗು ಸಂಗಾತಿ' ಪುಸ್ತಕಗಳ್‌ಲಿ ಬರ್ತ್‌ದ್ದರೂ ನಾನ್ ಅದ್ರ ಕ್ರಮಬದ್ಧ ಆಚರಣೆಗೆ ಬಗ್ಗೆ ನಿಮ್ಮ ಮುಂದೆ ಇಟ್ಟೊಳೆ.

ಮುಂದುವರ್‍ದದೆ...

ಲೇಖನ : ಗುಡ್ಡೆಮನೆ ರಮೇಶ್,


ಉಪಾಧ್ಯಕ್ಷ, ಕೊಡಗುಗೌಡ ಸಾಂಸ್ಕೃತಿಕ ಅಕಾಡೆಮಿ,
ಮಡಿಕೇರಿ.

ಅಪ್ಪ ಮರಲಿ

ಪಣ್‌ಪುಳಿ ಕಳ್ಳನ ಹಿಡಿಯೋಕು ತೆಳಿ ಗಣೆ ಬೆಳಿಗ್ಗೆ ಐದ್ ಗಂಟೆಗೆ ತೋಟಕೆ ಹೋತು. ಹೊಕನ ನೆರೆ ಮನೆ ಶೇಕರನ ಸಣ್ಣ ಹೈದ ಪುಳಿ ಹೆರ್‌ಕತಾ ಉಟ್ಟು. ಇವಂಗೆ ಸಿಟ್ಟು ಬಂದ್ ಹೋಗಿ ಅವನ ಕೆಮಿ ಹಿಡ್ಕಂಡ್ ಹೇಳ್ತ್. ಕಳ್ಳ, ಯಾಗೊಳೊ ನಿಂದೆ ಕೆಲ್ಸ ಅಲ್ಲ ನಿನ್ನಪ್ಪ ಭಾರಿ ಮಾತಾಡ್ವೆ, ನಡೀ ನಿನ್ನಪ್ಪನ ಹತ್ರತಾ. ಹೈದ ಮರ್‌ಟ್‌ಕಂಡ್ ಹೇಳ್ತ್, ಮಾವ ಅಪ್ಪ ಅಪ್ಪ ಮನೇಲಿ ಇಲ್ಲೆ ಮರಲಿ ಉಟ್ಟುತ್ತಾ.

ಬಾರಿಕೆ ಲಿಂಗರಾಜ್, ತಾವೂರು.

ಮದ್ದುಗುಳು ಪಾಯಸ



ಇದನ್ನು ಆಟಿಗಂಜಿ, ಮದ್ದುಗುಳು ಎಂದು ಬೇರೆ ಬೇರೆ ಹೆಸರಿನಿಂದ ಕರೆಯುತ್ತಾರೆ. ಆಟಿತಿಂಗಳು ಅಂದರೆ ಆಗಸ್ಟ್ 3 ಈ ಪಾಯಸ ಮಾಡಿ ತಿನ್ನ ಬೇಕೆಂದು ನಮ್ಮ ಹಿರಿಯರಿಂದ ಬಂದ ನಂಬಿಕೆಯೊಂದಿದೆ. ಆ ದಿನ ಆಟಿ ಸೊಪ್ಪಿನ ಗಿಡದ ಗಂಟಿನಲ್ಲಿ ಆಯುರ್ವೇದದ ಅನೇಕ ತರದ ಔಷಧಿಗಳು ಸೇರಿಕೊಂಡಿರುವುದರಿಂದ ಶರೀರಕ್ಕೆ ಒಳ್ಳೆಯದೆಂದು ಹಿರಿಯರು ಹೇಳುತ್ತಾ ಬಂದಿದ್ದಾರೆ. ಯಾವುದು ಬಿಟ್ಟರೂ ಆ ದಿನ ಸೊಪ್ಪು ತಂದು ಪಾಯಸ ಮಾಡುವುದನ್ನು ಹೆಚ್ಚಿನವರು ಮರೆಯುವುದಿಲ್ಲ. ನೇರಳೆ ಗೋರಂಟಿ ಗಿಡವನ್ನು ಹೋಲುವ ಮಳೆ ಬಿದ್ದನಂತರ ಹುಲುಸಾಗಿ ಕಾಡಿನಲ್ಲಿ ತೇವ ಹೆಚ್ಚಿರುವ ಕಡೆ ಬೆಳೆಯುವ ಈ ಗಿಡದಲ್ಲಿ ಅರ್ಧ ಅಡಿಗೊಂದು ನೇರಳೆ ಗಂಟು ಗಳಿದ್ದು, ಆಟಿ ತಿಂಗಳು **18**ರಂದು ಪೂರ್ತಿ ನೇರಳೆ ತುಂಬಿರುತ್ತದೆ. ಆ ಸಮಯದಲ್ಲಿ ಕಾಡಿನಲ್ಲಿ ಅದರ ಪರಿಮಳ ಹೆಚ್ಚಿರುತ್ತದೆ.

ಈ ಸೊಪ್ಪನ್ನು ಆರಿಸಿ ತಂದು, 2-3 ಬಾರಿ ತೊಳೆದು ದೊಡ್ಡ ಪಾತ್ರೆಯಲ್ಲಿ ಸೊಪ್ಪು ಮುಚ್ಚುವ ತನಕ ನೀರು ಹಾಕಿ ಹತ್ತು ನಿಮಿಷ ಬೇಯಿಸಿದರೆ ನೇರಳೆ ಬಣ್ಣದ ನೀರು ಘಮ ಘಮ ಎಂದು ತಯಾರಾಗುತ್ತದೆ ಅಥವಾ ನೀರೊಳಗೆ ಐದಾರು ಗಂಟೆ ಅದ್ದಿ ಇಟ್ಟೂ ಸಹ ನೇರಳೆ ಬಣ್ಣದ ನೀರು ಬಿಡುತ್ತದೆ.

ಈಗ ಅಕ್ಕಿ ಪಾಯಸ ಮಾಡುವಂತೆ ಪಾತ್ರೆಯಲ್ಲಿ ನಮಗೆ ಬೇಕಾಗುವ ಅಳತೆಯಲ್ಲಿ ಸೊಪ್ಪಿನ ರಸದ ನೀರು ಮತ್ತು ಅಕ್ಕಿಯನ್ನು ಸಹ ಅದೇ ನೀರಿನಿಂದ ತೊಳೆದು, ಬೇಯಲು ಹಾಕಿ ಮಂದವಾಗುತ್ತಿದ್ದಂತೆ ಪುನಃ ಅದೇ ರಸದ ನೀರನ್ನು ಸೇರಿಸಬೇಕು. (ಬರೇ ನೀರು ಸೇರಿಸಿದರೆ ಬಣ್ಣ ರುಚಿ ಕಡಿಮೆಯಾಗುವುದು) ಬೆಂದ ನಂತರ ಬೆಲ್ಲ ತೆಂಗಿನಕಾಯಿ ತುರಿ ಸೇರಿಸಬೇಕು. ಹಾಗೆ, ಕೆಂಪಗೆ ಕಾಯಿಸಿದ ಕಬ್ಬಿಣದ ಸೌಟನ್ನು ಪಾಯಸದ ಪಾತ್ರೆಗೆ ಮುಳುಗಿಸಬೇಕು. ಇದರಿಂದ ಸೊಪ್ಪಿನಲ್ಲಿ ವಿಷ ವಸ್ತುವೇನಾದರೂ ಇದ್ದರೆ ಕಬ್ಬಿಣ ಹೀರಿಕೊಳ್ಳುತ್ತದೆಂದು ಹಿಂದಿನಿಂದ ಬಂದ ನಂಬಿಕೆಯಾಗಿದೆ. ಹಾಗೆಯೇ ಕೊತ್ತಿ, ನಾಯಿ ಮತ್ತು ದನಗಳಿಗೆ ಕೊಟ್ಟು ಮನುಷ್ಯನು ಬೆಳಗಿನ ಜಾವ ನಾಲ್ಕು ಗಂಟೆಗೆ ಊಟ ಮಾಡುವುದು ರೂಢಿ.


ಈ ಪಾಯಸದೊಡನೆ ರಸಬಾಳೆಹಣ್ಣು, ಹಸುವಿನ ತುಪ್ಪ ಹಾಗೂ ಕಾಡುಜೇನು ಸೇರಿಸಿ, ಮನೆಯವರೆಲ್ಲರೂ ಕೂಡಿ ಒಟ್ಟಿಗೆ ಕೂತು, ರಾತ್ರಿ ಅಥವಾ ಬೆಳಿಗ್ಗೆ ಊಟ ಮಾಡುವುದೇ ಆಟಿಸೊಪ್ಪಿನ ಮಹತ್ವ. ಹೀಗೆ ಆಟಿಸೊಪ್ಪು ಬಹಳ ಹಿಂದಿನಿಂದಲೂ ತನ್ನ ಮಹತ್ವವನ್ನು ಕಾಪಾಡಿಕೊಂಡು ಬಂದಿದೆ. ಊಟ ಮಾಡಿ ರಾತ್ರಿ ಮಲಗಿ ಬೆಳಿಗ್ಗೆ ಎದ್ದು ಚಿಕ್ಕ ಮಕ್ಕಳು ಬಣ್ಣದ ಉಚ್ಚೆ ನೋಡಿ ಆನಂದಿಸುವರು.

ದಿನಾಂಕ 13-7-1999 ರಂದು ಗೌಡಮಹಿಳಾ ಒಕ್ಕೂಟದ ಕಾರ್ಯಕ್ರಮ ಮಹಿಳಾಲೋಕದ ಆಕಾಶವಾಣಿಯಲ್ಲಿ ಇದು ಪ್ರಸಾರವಾಗಿದೆ.

ಶ್ರೀಮತಿ ಬೈತಡ್ಕ ಜಾನಕಿ ಬೆಳ್ಯಪ್ಪ

ಸಂಚಾಲಕಿ : ಗೌಡ ಮಹಿಳಾ ಒಕ್ಕೂಟ.

ಪತ್ರ ವಿಭಾಗ :



ಅರೆಭಾಷೆಗೌಡರು ಖಂಡಿತಾ ವಲಸಿಗರಲ್ಲ

ಕೊಡಗಿನ ಗೌಡರು ವಲಸೆ ಬಂದವರೆಂದು ಕೆಲವರಿಂದ ಇಂದು ಕರೆಯಲ್ಪಡುವುದು ಶೋಚನಿಯ ಹಾಗೂ ಖಂಡನೀಯ. ತಮ್ಮನ್ನು ತಾವೇ ಯಾರೆಂದು ಗುರುತಿಸಿಕೊಳ್ಳುವಷ್ಟು ಬುದ್ಧಿಯಿಲ್ಲದ ಜನ ಇನ್ನೊಬ್ಬರನ್ನು ವಲೆಸಿಗರು ಎಂದು ಯಾವ ಆಧಾರದಿಂದ ವ್ಯಕ್ತಪಡಿಸುವುದೆಂದು ಅವರಿಗೆ ಯಕ್ಷ ಪ್ರಶ್ನೆಯಾಗಿರಬೇಕು. ಕರೆದರೆ ಕರೆಯಲಿ, ಆದರೆ ಅದರಲ್ಲಿ ಸತ್ಯತೆ ಇರಬೇಕು. ಯಾವ ಆಧಾರಗಳನ್ನು ಮುಂದಿಟ್ಟು ವಲಸಿಗರೆನ್ನುವುದನ್ನು ಸಮರ್ಥಿಸಿಕೊಳ್ಳುತ್ತಾರೋ ಗೊತ್ತಿಲ್ಲ. ಬಾಯಿಗೆ ಬಂದ ಹಾಗೆ ಬೊಗುಳಿದರೆ ಜನ ನಂಬುತ್ತಾರೆಯೇ? ಸಾಧ್ಯವಿಲ್ಲ. ಇತ್ತೀಚಿನ ದಿನಗಳಲ್ಲಿ ಕೊಡವರೇ ವಲಸಿಗರೆಂಬುದು ಕೊಡವರೇ ಮೈಸೂರು ಮಿತ್ರ ಪತ್ರಿಕೆಯಲ್ಲಿ ಕೊಡವರೆಂದರೆ ಯಾರು? ಎಂಬ ಶಿರೋನಾಮೆಯಡಿ ಪ್ರಕಟಗೊಂಡಿದ್ದು, ಇದನ್ನು ಜನ ಓದಿದ್ದಾಗಿದೆ. ಅಲ್ಲದೆ ಹದಿನೇಳನೆ ಶತಮಾನದವರೆಗೆ ಕೊಡವರ ಐತಿಹಾಸಿಕ ಪುರಾವೆಗಳಿಲ್ಲ ಅಂದರೆ ಕೊಡವರ ಚರಿತ್ರೆ ಕೇವಲ 300 ವರ್ಷಗಳಷ್ಟು ಹಳೆಯದಷ್ಟೇ ಎಂಬುದು ಖಾತ್ರಿಯಾಗಿದೆಯಲ್ಲದೆ ಇದು ಕೊಡವರಿಗೆ ನುಂಗಲಾರದ ತುತ್ತಾಗಿ ಪರಿಣಮಿಸಿದೆ.

ನ್ನದೇ ಆದ ವಾದವನ್ನು ಒಂದೆರಡು ವಾಕ್ಯಗಳಲ್ಲಿ ಜನಾಂಗದವರಿಗೆ ತಿಳಿಸಲು ಇಷ್ಟಪಡುತ್ತೇನೆ. "ವಲಸೆ" ಎಂಬ ಪದದ ಅರ್ಥವನ್ನು ನಾವು ಮೊದಲು ತಿಳಿದುಕೊಳ್ಳುವವರಾಗಬೇಕು. 'ವಲಸೆ' ಎಂದರೆ ಚರಿತ್ರೆಯಲ್ಲಿ ಇರುವ ಪ್ರಕಾರ ಒಂದು ಕಡೆಯಿಂದ ಇನ್ನೊಂದು ಕಡೆಗೆ ಜೀವನ ನಡೆಸಲು ಅನ್ನ, ನೀರನ್ನು ಹಾಗೂ ಇನ್ನಿತರ ಸೌಕರ್ಯಗಳನ್ನು ಹುಡುಕಿಕೊಂಡು ಹೋಗುವುದು, ಇದು ಪ್ರಕೃತಿ ವಿಕೋಪಕ್ಕೆ ತುತ್ತಾಗಿ ಯಾದರು ಆಗಿರಬಹುದು, ಬರಗಾಲದಿಂದಾಗಿಯೂ ಆಗಿರಬಹುದು, ಮಾರಣಾಂತಿಕ ರೋಗ ರುಜಿನಗಳಿಂದ ಬದುಕುಳಿಯಲು ಆಗಿರಬಹುದು. ಹಾಗಿದ್ದಾಗ ನಾವು ವಲಸಿಗರಾಗಿದ್ದರೆ ಯಾವ ಕಾರಣದಿಂದ ಇಲ್ಲಿಗೆ ವಲಸೆ ಬಂದವರೆಂದು ಯಾರಿಗೂ ತಿಳಿದಿಲ್ಲ. ಇದೇ ನಾವು ವಲಸಿಗರಲ್ಲವೆಂಬುದಕ್ಕೆ ಸಾಕ್ಷಿ. ಒಂದು ವೇಳೆ ವಲಸೆ ಬಂದವರೆಂದರೆ ಕೊಡಗಿನಲ್ಲಿ ಯಾವ ಸೌಕರ್ಯಗಳು ಅಂದು ಇದ್ದವು ಎಂಬುದು ಒಂದು ಪ್ರಶ್ನೆ. ಅಂದಿನ ಕಾಲದಲ್ಲಿ ಕೊಡಗನ್ನು ಹಲವು ಕವಿಗಳು, ಚರಿತ್ರೆಕಾರರು ಬಣ್ಣಿಸಿದ್ದನ್ನು ನಾವೆಲ್ಲ ಓದಿದ್ದೇವೆ. ಹಿಂದೆ ದಂಡಾಕಾರಣ್ಯದಿಂದ ಕೂಡಿದ್ದ ಕೊಡಗು ಕ್ರೂರಕಾಡುಮೃಗಗಳ ಹಾಗೂ ವಿಷ ಜಂತುಗಳ ಕೂಪವಾಗಿತ್ತು. ವರ್ಷದ ಹನ್ನೆರಡು ತಿಂಗಳಲ್ಲಿ ಕೇವಲ ಮೂರು ತಿಂಗಳು ಸೂರ್ಯನನ್ನು ನೋಡಬಹುದಾಗಿತ್ತು. ಧಾರಕಾರವಾಗಿ ಸುರಿವ ಜಡಿಮಳೆ ವರ್ಷದಲ್ಲಿ ಒಂಭತ್ತು ತಿಂಗಳು ಸುರಿಯುತ್ತಿತ್ತುವೆಂಬುದು ಚರಿತ್ರೆಯಲ್ಲಿಯೂ ಹಾಗೂ ಕವಿಗಳ ಹಾಡುಗಳ ವರ್ಣನೆಯಲ್ಲಿ ನಮಗೆ ತಿಳಿದು ಬರುತ್ತದೆ. ಅಂತಹ ಪರಿಸ್ಥಿತಿಯಲ್ಲಿ ಅನಾಗರೀಕರಾದ ಅಂದಿನ ಜನ ಇಲ್ಲಿ ಈ ಯಾವ ಸೌಕರ್ಯಗಳನ್ನು ಕಂಡು ಬಯಲು ಸೀಮೆಯನ್ನು ಬಿಟ್ಟು ಈ ಕಾಡು ಸೀಮೆಗೆ ಬರಲು ಸಾಧ್ಯವೇ? ಇದನ್ನು ನಂಬಬಹುದೇ? ಆಗ ಇದರ ಅವಶ್ಯಕತೆ ಇತ್ತೆ? ಅಲ್ಲದೆ ಕೆಲವರ ಅಭಿಪ್ರಾಯದಲ್ಲಿ ದಕ್ಷಿ ಕನ್ನಡದವರೆಂದು ಹೇಳಿಕೊಳ್ಳುತ್ತಾರೆ. ನಿಜವಿರಬಹುದು. ಕಾರ ಅಂದು ವಿಶಾಲ ಕೊಡಗು ಇಂದಿನ ದಕ್ಷಿಣ ಕನ್ನಡದ ಸಾಕಷ ಭಾಗಗಳನ್ನು ಹೊಂದಿತ್ತು. ಕೊಡಗು ವಿಂಗಡಣೆಯಾದಾಗ ಕೊಡ್ಗ ಸಾಕಷ್ಟು ಭಾಗ ಮಂಗಳೂರಿಗೆ ಸೇರಿ ಹೋಯಿತು. ಅಲ್ಲಿಂ ಮಂಗಳೂರಿಗೆ ಸೇರಿದ ಗೌಡರು ದಕ್ಷಿಣ ಕನ್ನಡದ ಸಂಸ್ಕೃತಿಯ ಹಿಂಬಾಲಿಸಿದರೆ ಕೊಡಗಿನ ಗೌಡರು ಕೊಡಗಿನದೇ ಆದ ಸಂಸ್ಕ ಆಚಾರ, ವಿಚಾರ, ನಡೆ, ನುಡಿಗಳನ್ನು ಮೈಗೂಡಿಸಿಕೊಂಡು ಬಂದಿದ್ದಾ ಇದು ವಲಸೆಯಲ್ಲ ಇದು ನಮ್ಮ ಗೌಡರನ್ನು ಬೇರ್ಪಡಿಸಿದ ಅಂದಿ ಸರಕಾರದ ನೀತಿ. ಇದರಿಂದ ಕೆಲವು ಅನಾಗರೀಕರು ಇವತ್ತಿಗ ಮದೆನಾಡು ದಾಟಿದರೆ ಕನ್ನಡ ಜಿಲ್ಲೆಯೆಂದೆ ಕರೆಯುವುದ ಶೋಚನೀಯ. ಕೊಡಗು ಎಲ್ಲಿಯವರೆಗೆ ವ್ಯಾಪ್ತಿಸಿದೆ ಎಂಬುದ ತಿಳಿಯದ ಜನ ಸಂಪಾಜೆಯನ್ನು ದಕ್ಷಿಣ ಕನ್ನಡ ಎಂದು ಕರೆದರೆ ಕುಟ್ಟ ಶ್ರೀಮಂಗಲ ಕಡೆಯ ಜನರನ್ನು ಕೇರಳದವರೆಂದು ಕರೆದರೆ ಏನ ತಪ್ಪು? ಪ್ರತಿಯೊಂದು ದೃಷ್ಟಿಯಲ್ಲಿ ನೋಡಿದರು ನಾವು ವಲಸಿಗರಲ್ಲ ಎಂದು ತಿಳಿದು ಬರುತ್ತದೆ. ಆದರೂ ಕೆಲವರು "ಗೆಜೆಟಿಯರ್ ಆಫ ಕೂರ್ಗ್"ನ್ನು ಮುಂದಿಟ್ಟು ಮೊಂಡುವಾದ ಮಾಡುತ್ತಾರೆ "ಗೆಜೆಟಿಯರ ಆಫ್ ಕೂರ್ಗ್" ಬರೆಯಿಸಲ್ಪಟ್ಟಾಗ ಅಲ್ಲಿ ಮುಂಚೂಣಿಯಲ್ಲಿ ಇದ್ದವ ವಲಸಿಗರು. ಕೊಡವರು ವಲಸಿಗರಲ್ಲ ಎಂದು ಗುರುತಿಸಿಕೊಳ್ಳಲ ತಿರುಚಿ, ಮುರುಚಿ ಬರೆಯಿಸಿದ ಪುಸ್ತಕವೇ ಈ 'ಗೆಜೆಟಿಯರ್ ಆಫ ಕೂರ್ಗ್'. ಅದುದರಿಂದ ಇದರಲ್ಲಿ ಬರೆದಿದ್ದೆಲ್ಲ ವೇದ ವಾಕ್ಯಗಳಾಗಲಾರವ

ಇನ್ನು ಮುಂದುವರೆದರೆ ಇತಿಹಾಸ ತಜ್ಞರ ಪ್ರಕಾರ ಕೊಡವರ ಮುಸ್ಲಿಂ ಮೂಲದವರೆಂದು ತಿಳಿದು ಬರುತ್ತದೆ. ಮೈಸೂರ ಮಿತ್ರದಲ್ಲಿ ಪ್ರಕಟಗೊಂಡಂತೆ ಇವರ ರಕ್ತವು ಹಾಗೂ ಕೆಲವ ಅಭ್ಯಾಸಗಳು ಸಹ ಪ್ಯಾಲೇಸ್ಟೇನಿಯರಿಗೆ ಹೋಲುತ್ತದೆ. ಇವರೆ ವಲಸಿಗರೆಂದು ತಿಳಿದುಕೊಳ್ಳಲು ಹೆಚ್ಚಿನ ಸಾಕ್ಷ್ಯಧಾರಗಳು ಬೇಡ ಅದುದರಿಂದಲೇ ಕೆಲವರು ಕೊಡಗು ಪ್ರತ್ಯೇಕತೆ ಕೇಳುತ್ತಿರುವುದು ಎಂದು ನಂಬಬಹುದೆ? ಕೊಡವರೇ ವಲಸಿಗರೆಂದು ಮೈಸೂರು ಮಿತ್ರದಲ್ಲಿ ಪ್ರಕಟವಾದ ಅಂಕಣ ನೂರಕ್ಕೆ ನೂರು ಸತ್ಯ. ಬರ ವಲಸಿಗರಲ್ಲ ಇವರು ಅಂತರರಾಷ್ಟ್ರೀಯ ವಲಸಿಗರು ಎಂದು ತಿಳಿದರೆ ಅಥವ ಕರೆದರೆ ತಪ್ಪೇನು? ಭಾರತ ದೇಶದೊಳಗೆ ಅತಿತ್ತ ಸರಿಯುವುದು ವಲಸೆಯಲ್ಲವೆಂಬ ಅರಿವಿರಲಿ. ಅದುದರಿಂದ ನಮ್ಮ ಜನಾಂಗದ ಬಾಂಧವರು ಯಾರಾದರೂ ನಾವು ವಲಸಿಗರೆಂದು ತಿಳಿದುಕೊಂಡಿದ್ದರೆ ಇಂದಿನಿಂದಲೇ ಅದನ್ನು ನಿಮ್ಮ ಮನಸ್ಸಿನಿಂದ ಕಿತ್ತೊಗೆದು ವಲಸಿಗರು ಯಾರೆಂದು ಮನದಟ್ಟು ಮಾಡಿಕೊಳ್ಳಬೇಕು. ಈ ಹಿಂದೆ ಶ್ರೀಮಾನ್ ದೇವಿಪ್ರಸಾದರು ಸಾಕಷ್ಟು ಭಾರಿ ಇದರ ಬಗ್ಗೆ ಲೇಖನಗಳನ್ನು ಕೊಡಗು ಸಂಗಾತಿಯಲ್ಲಿ ಪ್ರಕಟಿಸಿದ್ದಾರೆ. ಈ ಲೇಖನಗಳನ್ನು ನಮ್ಮ ಜನಾಂಗದವರು ತಪ್ಪದೇ ಓದಿ ತಿಳಿದುಕೊಂಡು ತಮ್ಮತನವನ್ನು ಉಳಿಸಿಕೊಳ್ಳಬೇಕು. ಈ ದಿಸೆಯಲ್ಲಿ ದೇವಿಪ್ರಸಾದರಂತಹ ಮಹಾನ್ ಜನಾಂಗದ ನಾಯಕರಿಗೆ ಜನಾಂಗದವರು ಹಜ್ಜೆ ಹೆಜ್ಜೆಗೂ ಸಹಕರಿಸಬೇಕೆಂದು ನನ್ನ ವೈಯುಕ್ತಿಕ ಕೋರಿಕೆ.

ತಡಿಯಪ್ಪನ ಕುಮಾರ ಜಯ, ಮೈಸೂರು.

..ಡ ಸಂಸ್ಕೃತಿ : (ಹಿಂದಿನ ಸಂಚಿಕೆಯಿಂದ.......)

ಸಲಾಯಿ ಅಳೆಯುವುದು : ಕೈ ಶಾಲೆಯಲ್ಲಿ ಒಂದು ದೀಪ ಟ್ಟು ಕುಂಟಿಗೆಯವನು ಬಟ್ಟೆಯನ್ನು ನೆಲಕ್ಕೆ ಹಾಸಿ ಮೊಣಕಾಲು ಕುಳಿತುಕೊಳ್ಳಬೇಕು. ಮೂರು ಸೇರು ಅಕ್ಕಿಯನ್ನು ಕೆಳಗೆ ಬಟ್ಟೆಗೆ ಮು ಕೈಯಿಂದ ಎರಡು ಪಾಲು ಮಾಡಬೇಕು. ಪ್ರತಿ ಪಾಲಿಗೂ ಎಲೆ ಒಂದು ಅಡಿಕೆ ಇಡಬೇಕು. ಕ್ಷೌರಿಕನು ತಲೆಗೆ ಎಣ್ಣೆ ಹಚ್ಚಿ ೆ ಬಟ್ಟೆ ಕಟ್ಟುವನು. ಮಡಿವಾಳನು ಒಂದು ಬದಿಯಿಂದಲೂ, ಕನು ಇನ್ನೊಂದು ಬದಿಯಿಂದಲೂ ಕುಂಟಿಗೆಯವನ ರಟ್ಟೆ ಹಿಡಿದು ಸುವರು. ಪಾಲು ಮಾಡಿದ ಅಕ್ಕಿ ಮತ್ತು ಮೊದಲೇ ತೆಗೆದಿಟ್ಟ ಬಳಕಾಯಿ ಬಾಳೆಕಾಯಿಯನ್ನು ಮಡಿವಾಳ ಮತ್ತು ಕ್ಷೌರಿಕ ನುಕೊಳ್ಳುತ್ತಾರೆ. ಇದಕ್ಕೆ ಸಲಾಯಿ ಅಳೆಯುವುದೆಂದು ಹೆಸರು. ಸಂದರ್ಭದಲ್ಲಿ ಕೆಲವು ಕಡೆ ಕುಂಟಿಗೆ ನಿಂತವನು ಹಣ ದುಕೊಳ್ಳುವನು. ಇನ್ನು ಕೆಲವು ಕಡೆ ಅಗಲು ಹಾಕಿದ ಕಡೆ ಹಣ ತ್ತಾರೆ. ಈಗ ಸಾಮಾನ್ಯವಾಗಿ ಇದು ನಿಂತು ಹೋಗಿದೆ.

ಮೃತರ ತಿಥಿ ಸಮಾರಂಭ (ಬೊಜ್ಜ) : ಮೃತರ ಶವ ಸಂಸ್ಕಾರ ದ ಐದನೆ ದಿನದಿಂದ ಹಿಡಿದು ಹನ್ನೊಂದನೆಯ ದಿನದ ಒಳಗೆ ದ್ಧ ನಡೆಯಲೇ ಬೇಕು. ಕೆಲವರು ಅವರವರ ಅನುಕೂಲಕ್ಕಾಗಿ ನೆ ದಿನ ರಾತ್ರಿ ನೀರು ನೆರಳಿಗೆ ಇಟ್ಟು ಹನ್ನೊಂದನೆಯ ದಿನ ದ್ಧ ಮತ್ತು ದಿನ (ಬೊಜ್ಜ) ಎರಡನ್ನೂ ಮಾಡುವರು. ಶುದ್ಧವನ್ನು ಮೊದಲೇ ಮಾಡಿ ಮುಗಿಸಿದವರಾದರೆ ಹನ್ನೊಂದನೆಯ ದಿನ ಲ್ಲವೆ ಹದಿನಾರನೇಯ ದಿನ ತಿಥಿ (ಬೊಜ್ಜ) ಮಾಡುವರು. ತಿಥಿಯು ತರು ಜೀವಂತವಿದ್ದಾಗ ಬಹಳಷ್ಟು ಜನರೊಂದಿಗೆ ಸಂಪರ್ಕವಿಟ್ಟು ಂಡವರು. ಮೃತರಾದ ನಂತರ ತಮ್ಮೆಲ್ಲ ಬಂದು ಬಳಗವನ್ನು, ಟರಿಷ್ಟರನ್ನು, ಊರು ನೆರೆಕರೆಯವರನ್ನು ಕಳೆದುಕೊಂಡಂತೆ. ಅವರ ಕೆಯಲ್ಲಿ ಇಲ್ಲವೆ ಅವರಿಗಾಗಿ ಅವರ ಹೆಸರಿನಲ್ಲಿ ಮಕ್ಕಳು, ಮರಿ ಕ್ಕಳು ಸೇರಿ ಅವರನ್ನು ಸ್ಮರಿಸಿ ಸರ್ವರಿಗೂ ಅನ್ನದಾನವನ್ನು ಡುವುದು ಹಿಂದಿನಿಂದ ನಡೆದು ಬಂದ ಪದ್ಧತಿ. ಇದಕ್ಕೆ ತಿಥಿ ದಿನ, ೊಜ್ಜ ಎಂದೆಲ್ಲ ಕರೆಯುವರು.

ತಿಥಿ ಸಮಾರಂಭವು ಬಹಳಷ್ಟು ಸಡಗರದಿಂದ ನಡೆಯುವುದು. ತ್ತು ಪಡಿಸಿದ ದಿನದಂದು ಸರ್ವರನ್ನು ಆಮಂತ್ರಿಸಿ ವಿವಿಧ ರೀತಿಯ ಕ್ಷ್ಯ ಭೋಜನವನ್ನು ಸಿದ್ಧಪಡಿಸಿ, ಮೊದಲು ಮೃತರ ಕೋಣೆಯಲ್ಲಿ ೃತರ ಬಾವಚಿತ್ರವಿದ್ದಲ್ಲಿ, ಅದನ್ನು ಮೇಜಿನ ಮೇಲಿಟ್ಟು ಇಲ್ಲವೇ ವರು ಮಲಗುವ ಮಂಚದ ಮೇಲಿಟ್ಟು ಅವರ ಭಾವಚಿತ್ರಕ್ಕೆ ಹೂವಿನ ಾರ ಹಾಕಿ ಅದರ ಸುತ್ತಲೂ ಅವರ ನಿತ್ಯ ಉಪಯೋಗದ ಸ್ತುಗಳಾದ ಉಡುಪು, ಕೈಯ ವಾಚು, ಊರುಗೋಲು, ಕನ್ನಡಕ ುತ್ತು ಎಲ್ಲಾ ಆಭರಣಗಳನ್ನು ಇಟ್ಟು ಹಣತೆ ಹಚ್ಚಿಟ್ಟು ಭೋಜನಕ್ಕಾಗಿ ಾಡಿದ ಎಲ್ಲಾ ತಿಂಡಿ ತಿನಿಸುಗಳ ಎಡೆಹಾಕಿ, ಮುಖ್ಯವಾಗಿ ೀರುದೋಸೆ, ರೊಟ್ಟಿ, ಕೋಳಿಸಾರು ಮುಂತಾದ ನಿತ್ಯ ಉಪಯೋಗಿಸುವ ಹಾರವನ್ನು ಎಡೆಗೆ ಬಡಿಸಿ ನಂತರ ಇತರ ಪದಾರ್ಥಗಳನ್ನೂ ಡಿಸುವುದು. ಮಧ್ಯ ಸೇವಿಸುವವರಾದರೆ ಮದ್ಯವನ್ನು ಇಡುವರು. ಈ ಎಲ್ಲಾ ಪದಾರ್ಥಗಳನ್ನು ಬಡಿಸುವುದಕ್ಕೆ ಮುಂಚಿತವಾಗಿ ಗಣಪತಿಗೆ ಇಡುವ ಕ್ರಮವನ್ನು ಪಾಲಿಸಬೇಕು.

ತದನಂತರ ಸರ್ವರೂ ಸೇರಿ ಮೃತರ ಆತ್ಮಕ್ಕೆ ಶಾಂತಿಯನ್ನು ಕೋರಿ ಮೃತರನ್ನು ಸ್ಮರಿಸಿ ದೀಪಕ್ಕೆ ಅಕ್ಕಿ ಹಾಕುವರು. ತಿಥಿಗೆ ಬಂದ ನೆಂಟರಿಷ್ಟರು ತಂದ ತಿಂಡಿತಿನಿಸುಗಳನ್ನು ಮೃತರಿಗೆ ಬಡಿಸಿದ ಎಡೆಯ ಪಕ್ಕದಲ್ಲಿಟ್ಟು ಅವರು ವಂದಿಸುವರು. ಅತಿಥಿಗಳೆಲ್ಲರನ್ನೂ ಭೋಜನ ಮಾಡುವಂತೆ ನಿವೇದಿಸಿಕೊಳ್ಳುವುದು ಕ್ರಮ. ತಿಥಿಯ ಭೋಜನದಲ್ಲಿ ಮಾಂಸದ ಅಡಿಗೆಯನ್ನು ಏರ್ಪಡಿಸುವುದು ಸಾಮಾನ್ಯ. ಗೌಡರ ಸಂಪ್ರದಾಯದಲ್ಲಿ ಶುದ್ಧ ಕಳೆಯುವವರೆಗೆ ಮದ್ಯ ಮಾಂಸಗಳ ಬಳಕೆ ನಿಷೇಧವಾಗಿದ್ದರೂ ಹದಿನಾರರ ಕೊಲೆಗೆ ಸೇರಿಸುವ ಕ್ರಮವಿರುವುದು.

ಹದಿನಾರರ ಕೊಲೆಗೆ ಸೇರಿಸುವಿಕೆ : ಮೃತನು ಸತ್ತ ಹದಿನಾರನೆಯ ದಿವಸ ಅಕ್ಕಪಕ್ಕದ ನಾಲ್ಕಾರು ಜನರನ್ನು ಮನೆಗೆ ಆಮಂತ್ರಿಸಬೇಕು. ಒಂದು ಹುಂಜ ಕೋಳಿಯನ್ನು ಕೊಂದು ಸಾರು ಮಾಡಬೇಕು. ಜೊತೆಗೆ ನೀರುದೋಸೆ ರೊಟ್ಟಿ ಮಾಡಬೇಕು. ಅಡಿಗೆ ಕೆಲಸ ಮುಗಿದ ನಂತರ ಅಗಲು ಹಾಕುವ ಕೋಣೆಯನ್ನು ಸ್ವಚ್ಛಗೊಳಿಸಿ ಹದಿನೈದು ಚಿಕ್ಕ ಚಿಕ್ಕ ಬಾಳೆ ಎಲೆಯನ್ನು ಸಾಲಾಗಿ ಇಡಬೇಕು. ಇನ್ನೊಂದು ಬಾಳೆ ಎಲೆಯನ್ನು ಸಾಲಿಗಿಂತ ಸ್ವಲ್ಪ ದೂರದಲ್ಲಿ ಹಿಂಭಾಗದಲ್ಲಿಡಬೇಕು. ಒಂದು ಬಟ್ಟಲಿಗೆ ಒಂದೆರಡು ದೋಸೆ, ಒಂದು ರೊಟ್ಟಿಯನ್ನು ಸಣ್ಣಗೆ ಚೂರು ಮಾಡಿ ಕೋಳಿ ಸಾರನ್ನು ಅದಕ್ಕೆ ಹಾಕಿ ಮಿಶ್ರ ಮಾಡಬೇಕು. ತದ ನಂತರ ಕುಂಟಿಗೆ ನಿಂತವನು ಎಲ್ಲಾ ಬಾಳೆ ಎಲೆಗೆ ಸ್ವಲ್ಪ ಸ್ವಲ್ಪವಾಗಿ ಬಳಸಬೇಕು. ಪ್ರತಿ ಎಲೆಯ ತುದಿಗೆ ಒಂದೊಂದು ಎಣ್ಣೆ ಬತ್ತಿಯನ್ನು ಇಟ್ಟು ಹಚ್ಚಬೇಕು. ಅನಂತರ ಗಂಧ ಧೂಪವನ್ನು ಕೊಟ್ಟು ಎಲ್ಲರಿಗೂ ಸ್ವಲ್ಪ ಸ್ವಲ್ಪ ಅಕ್ಕಿ ಕೊಟ್ಟು ಯಾರಾದರೂ ಹಿರಿಯರೊಬ್ಬರೂ ಸತ್ತವನ ಗುಣಗಾನವನ್ನು ಹೇಳಿ ಹಿಂದೆ ಸತ್ತವರೊಂದಿಗೆ ನೀನು ಸೇರಿಕೊಂಡು ನಮ್ಮೆಲ್ಲರನ್ನು ರಕ್ಷಿಸು ಎಂದು ಪ್ರಾರ್ಥನೆ ಮಾಡಿ ಹಿಂದೆ ಇಟ್ಟಿದ್ದ ಒಂದು ಎಲೆಯನ್ನು ಹದಿನೈದನೇ ಎಲೆಯೊಂದಿಗೆ ಸೇರಿಸಬೇಕು, ಆಗ ಮೊದಲು ಸತ್ತವರೊಂದಿಗೆ ಈತನು ಸೇರಿಕೊಳ್ಳುವನೆಂದು ನಂಬಿಕೆ. ಹೀಗೆ ಎಲೆಯನ್ನು ಸೇರಿಸಿದ ನಂತರ ಎಲ್ಲರು ಊಟ ಮಾಡಿ ತಾಂಬೂಲ ಸೇವಿಸಿ ಅವರವರ ಮನೆಗೆ ಹೋಗುತ್ತಾರೆ.

ಪಿಂಡ ಹಾಕುವುದು : ಮೃತನಿಗೆ ದೀಕ್ಷೆಗೆ ನಿಂತವನು ಶುದ್ಧದ ದಿನದಂದು ಗಡ್ಡ, ಮೀಸೆ, ತಲೆಕೂದಲನ್ನು ಬೋಳಿಸಿದ ನಂತರ ಪಿಂಡ ಹಾಕುವವರೆಗೆ ಗಡ್ಡ, ಮೀಸೆ, ತಲೆಕೂದಲನ್ನು ತೆಗೆಯಬಾರದು. ಪಿಂಡ ಹಾಕುವುದೆಂದರೆ ಸತ್ತವನಿಗೆ ಮೋಕ್ಷ ಸಿಗಲಿ ಎಂದು ಮಾಡುವ ಕ್ರಮ. ಕಾವೇರಿಯಂತಹ ಪುಣ್ಯಕ್ಷೇತ್ರದಲ್ಲಿ ಪಿಂಡ ಹಾಕುವ ಸಮಯದಲ್ಲಿ (ಕಾವೇರಿ ಸಂಕ್ರಮಣ) ಪಿಂಡದ ಸಾಮಾನುಗಳನ್ನು ಮಾರುವ ಸ್ಥಳಗಳಿರುತ್ತವೆ. ಮತ್ತು ತಲೆ ಕೂದಲು, ಗಡ್ಡ, ಮೀಸೆ ಬೋಳಿಸಲು ಕ್ಷೌರಿಕರು ಇರುತ್ತಾರೆ. ಮೊದಲು ಸಂಗಮದಲ್ಲಿ ಮುಳುಗಿ ಸ್ನಾನ ಮಾಡಿದ ನಂತರ ಕ್ಷೌರಿಕನಿಂದ ತಲೆಗೂದಲು, ಗಡ್ಡ, ಮೀಸೆ ಬೋಳಿಸಿ ಕಾಣಿಕೆ ಕೊಟ್ಟು ಪುನಃ ಸ್ನಾನ ಮಾಡಬೇಕು. ತದನಂತರ ಪಿಂಡದ ಸಾಮಾನು ಮಾರುವ ಸ್ಥಳಕ್ಕೆ ಹೋಗಿ ಅಲ್ಲಿ ಪಿಂಡದ ಸಾಮಾನು ಇರುವ ಎಲೆಯನ್ನು ಖರೀದಿಸಿ ನೇರವಾಗಿ ನದಿಯ ಆಚೆ ಬದಿಯಲ್ಲಿ ಕುಳಿತಿರತಕ್ಕ ಪುರೋಹಿತ (ಬ್ರಾಹ್ಮಣ)ನ ಹಸ್ತ ಕೊಡ ತಕ್ಕದು ಪುರೋಹಿತನು ಹೇಳಿದಂತೆ ಅವನ ಎದುರಿನಲ್ಲಿ ಕುಳಿತು ಕೆಲವು

12 ನೇ ಪುಟಕ್ಕೆ

ವಿವಿಧ ಪಾತ್ರಗಳಲ್ಲಿ ಸ್ತ್ರೀ

ತಾಯಿ : ಸ್ತ್ರೀ ಪಾತ್ರದಲ್ಲೆಲ್ಲಾ ಅತ್ಯಂತ ಪ್ರಮುಖ ಹಾಗೂ ಉನ್ನತ ಪಾತ್ರಧಾರಿ ತಾಯಿ. ಎಷ್ಟೇ ಕೆಟ್ಟ ಸ್ವಭಾವದ ಹೆಣ್ಣಾದರೂ ತಾಯಿಯ ಪಾತ್ರದಲ್ಲಿ ಮಾತ್ರ ಆಕೆ ಕರುಣಾಮಯಿ. ನಾವು ದೇವರನ್ನು ಪ್ರತ್ಯಕ್ಷ ಕಾಣಲಾರೆವು. ದೇವಿ ಪ್ರತಿಯೊಬ್ಬರ ಬಳಿಗೆ ಹೋಗಿ ಪ್ರೀತಿ ತೋರಿಸಲು ಸಾಧ್ಯವಿಲ್ಲ. ಆದ್ದರಿಂದ ತನ್ನ ಪ್ರತಿನಿಧಿಯಾಗಿ ತಾಯಿ ಎಂಬ ದೇವತೆಯನ್ನು ಕರುಣಿಸಿದ್ದಾನೆ.

"ಮನೆಯೆ ಮೊದಲ ಪಾಠಶಾಲೆ ಜನನಿ ತಾನೆ ಮೊದಲ ಗುರುವು. ಜನನಿಯಿಂದ ಪಾಠ ಕಲಿತ ಜನರು ಧನ್ಯರು." ಎಂಬಂತೆ ತಾಯಿ ಮೊದಲ ಗುರು ಮಾತ್ರವಲ್ಲ. ಒಂದು ಮಗು ಅದು ಹೆಣ್ಣಾಗಿದ್ದರಂತೂ ನೂರಕ್ಕೆ ತೊಂಭತ್ತು ಭಾಗ ತನ್ನ ತಾಯಿಯ ಗುಣ ನಡತೆಗಳನ್ನು ಅನುಕರಿಸುತ್ತದೆ. ಆದ್ದರಿಂದಲೆ ತಮಿಳಿನಲ್ಲಿ ಈ ಗಾದೆ ಪ್ರಚಲಿತದಲ್ಲಿದೆ "ತಾಯಿ ಪೋಲೆ ಮಗಳ್, ನೂಲ್‌ಪೋಲೆ ಪೊಡವೆ" (ನೂಲಿನಂತೆ ಸೀರೆ, ತಾಯಿಯಂತೆ ಮಗಳು) ಎಂದು.

ಅಮ್ಮಾ ಎಂಬ ನುಡಿಯಲ್ಲಿ ಇರುವ ಮಾಧುರ್ಯ ಸಕ್ಕರೆ, ಸವಿಜೇನು ಎರಡೂ ಸೇರಿಸಿದರೂ ಕಡಿಮೆಯೆ. ಅದನ್ನು ವರ್ಣಿಸಲು ವಾಕ್ಯಗಳೇ ಇಲ್ಲ. ಕೇವಲ ಅನುಭವಿಸಿಯೇ ಅರಿಯಬೇಕು. ಒಂದು ಹೆಣ್ಣು ತಾಯಿಯಾದಾಗ ತನ್ನ ಜನ್ಮ ಸಫಲವಾಯಿತೆಂದು ಭಾವಿಸುತ್ತಾಳೆ. ಅದುವರೆಗೆ ತನಗಿದ್ದ ಆಸೆ ಆಕಾಂಕ್ಷೆ ಎಲ್ಲವನ್ನು ಬದಿಗೊತ್ತಿ ಮಗುವನ್ನು ಜೋಪಾನ ಮಾಡಿ, ಪ್ರಭುದ್ಧರನ್ನಾಗಿಸಲು, ಪ್ರೀತಿಯ ಧಾರೆ ಎರೆದು, ಮಗುವಿನ ಬೇಕು ಬೇಡಗಳನ್ನು ಒದಗಿಸಲು ಹೆಣಗುತ್ತಾಳೆ. ಹೀಗೆ ತಾಯಿಯ ಪಾತ್ರಕ್ಕೆ ಸಾಟಿಯೇ ಇಲ್ಲ.

ಹೆಂಡತಿ : ಹೆಣ್ಣು ಸಂಸಾರದ ಕಣ್ಣು (ಎಲ್ಲೋ ಒಂದೆರಡು ಇದಕ್ಕೆ ಅಪವಾದವಾಗಿರಬಹುದು) ಸರ್ವತೋಮುಖವಾಗಿ ತನ್ನ ಸಂಸಾರದ ಏಳಿಗೆಗೆ ಶ್ರಮಿಸುತ್ತಾಳೆ. ಜೊತೆಯಲ್ಲಿ ತನ್ನ ತವರಿನ ಮಾನಾಪಮಾನವನ್ನೂ ಕಾಪಾಡುತ್ತಾಳೆ. ಕುಡಿತ ಮತ್ತು ಇನ್ನಿತರ ಚಟವಿರುವ ಗಂಡನಿದ್ದಲ್ಲಿ ಹೆಣ್ಣು ತನ್ನ ಸಂಸಾರವೆಂಬ ಪಟದ ಸೂತ್ರ ಕಿತ್ತುಹೋಗದಂತೆ ಶತಪ್ರಯತ್ನ ಪಡುತ್ತಾಳೆ. ನಿಸ್ವಾರ್ಥ ಭಾವನೆಯಿಂದ ತನ್ನ ಗಂಡ ಮಕ್ಕಳ ಏಳಿಗೆಗಾಗಿ ದೇವರಲ್ಲಿ ದೈನ್ಯದಿಂದ ಮೊರೆ ಇಡುತ್ತಾಳೆ. ಆದ್ದರಿಂದಲೆ ಇರಬೇಕು ಸರ್ವಜ್ಞ ಈ ರೀತಿ ಹೇಳಿದ್ದಾನೆ.

"ಬೆಚ್ಚನೆಯ ಮನೆಯಾಗೆ, ವೆಚ್ಚಕ್ಕೆ ಹೊನ್ನಾಗೆ, ಇಚ್ಛೆಯನ್ನು ಅರಿವ ಸತಿಯಾಗೆ ಸ್ವರ್ಗಕ್ಕೆ ಕಿಚ್ಚು ಹಚ್ಚೆಂದ ಸರ್ವಜ್ಞ"

"ಹೆಣ್ಣಿನಿಂದಲೆ ಇಹವು, ಹೆಣ್ಣಿನಿಂದಲೆ ಪರವು, ಹೆಣ್ಣಿನಿಂದಲೇ ಸಕಲ ಸಂಪದವು, ಹೆಣ್ಣೊಲ್ಲದಣ್ಣಗಳು ಯಾರು ಸರ್ವಜ್ಞ"

ಮಗಳು : ಹೆಣ್ಣು ಮಗಳಿಲ್ಲದ ಮನೆ ಹಾಳೂರ ಗುಡಿಯಂತೆ, ಒಕ್ಕಲಿಲ್ಲದ ಯಜಮಾನನಂತೆ ಆಗಿರುವುದು. ನಗು ನಗುತ್ತಾ ಮನೆ ತುಂಬಾ ಓಡಾಡಿಕೊಂಡು ಮನೆಯ ಪ್ರತಿಯೊಬ್ಬ ಸದಸ್ಯರಿಗೂ ಒಂದಿಲ್ಲೊಂದು ಕೆಲಸದಲ್ಲಿ ನೆರವಾಗುತ್ತಾ ಕೆಲವೊಮ್ಮೆ ಹಕ್ಕು ಚಲಾಯಿಸುತ್ತಾ ಮನೆಯವರ ಕಣ್ಮಣಿಯಾಗಿ ಇರುತ್ತಾಳೆ. ಮನೆಯ ಪರಿಸರ ಸ್ವಚ್ಛವಾಗಿಡುವ ಹೆಣ್ಣು ಮಗಳಿರುವ ಮನೆಯ ಸರ್ವ ಸಂಪನ್ನ. "ಕೊಟ್ಟ ಹೆಣ್ಣು ಕುಲಕ್ಕೆ ಹೊರಗು" ಎಂಬ ಗಾದೆ ಇದ್ದರೂ ಯಾವುದೋ ಒಂದು ಭಾವನೆಯ ಸಂಕೋಲೆಯು ಸದಾ ಮ ತವರುಮನೆಗೆ ಬಂದಿಸಿರುತ್ತದೆ.

ಅತ್ತೆ : ಅತ್ತೆ ಎಂದಾಗ ಎಲ್ಲರ ಮನದಲ್ಲೂ ಒಂದು ರೀ ಬಿಗುಮಾನ, ದರ್ಪ, ಗಾಂಭೀರ್ಯ, ಮಾತ್ಸರ್ಯ ಮೂಡು ಯಾಕೆಂದರೆ ಈ ಅತ್ತೆಯ ಪಾತ್ರವೇ ಹಾಗೆ. ತಾಯಿ ಮಗಳನ್ನು ಕಾ ರೀತಿ ಅತ್ತೆ ಸೊಸೆಯನ್ನು ಕಾಣಲಾರಳು. ಯಾವುದೊ ಬಿಗುಮಾನ ಅಡ್ಡ ಬರುತ್ತದೆ. ತನ್ನ ಮಗನ ಪ್ರೀತಿಯನ್ನು ಕ ಕೊಂಡವಳು, ಎಂಬ ತಪ್ಪು ಕಲ್ಪನೆಯಿಂದಾಗಿ ಮತ್ಸರ ಪಡುತ ತಾನು ಕಟ್ಟಿದ ಅಕ್ಕರೆಯ ಅರಮನೆಯನ್ನು ಛಿದ್ರ ಮಾಡುವಳ ಎಂಬ ಅಳುಕು. ಎಷ್ಟೇ ಪ್ರೀತಿ ಆದರ ತೋರುವ ಒಳ್ಳೆ ಅತ್ತೆಯಾ ಮನದ ಒಂದು ಮೂಲೆಯಲ್ಲಿ ಕ್ಲೇಶದ ಯಾವುದೋ ಒಂದು ಎ ಇದ್ದೇ ಇರುತ್ತದೆ.

ಸೊಸೆ : ಸ್ವಚ್ಛಂಧವಾಗಿ ಹೆಚ್ಚು ಜವಾಬ್ದಾರಿಗಳಿ ಬಾಳುತ್ತಿದ್ದ ವಾತಾವರಣದಿಂದ ಗಂಡನ ಮನೆಗೆ ಬರುತ್ತಾಳೆ. ತ ಸೊಸೆ ಎಲ್ಲಿ ತಪ್ಪಾಗುವುದೊ ಎಂಬ ಅಳುಕು ಸದಾ ಎದೆಯಾಳ ಮನೆ ಮಾಡಿರುತ್ತದೆ. ಯಾರು ಏನು ಹೇಳಿದರೂ ಅದರ ಮ ಅರ್ಥ ಹುಡುಕುವ ಪ್ರಯತ್ನ ಮಾಡುತ್ತಾಳೆ ಅಥವಾ ದ್ವಂದ್ವ ಅ ಕಲ್ಪಿಸುತ್ತಾಳೆ. ಮಾತುಗಳು ತುಟಿ ಮೀರಿ ಬರದಂತೆ ತಡೆಯುತ ಚಿಕ್ಕವರೊಂದಿಗೆ ಬಹಳ ಬೇಗ ಹೊಂದಿಕೊಳ್ಳುತ್ತಾಳೆ. ದೊಡ್ಡವರೊ ಮಾತಾಡಲು ಸಂಕೋಚ ಪಡುತ್ತಾಳೆ. ಗಂಡನನ್ನೇ ಅಪದ್ಬಾಂದವನ ಕಾಣುತ್ತಾಳೆ.

ಇವುಗಳಲ್ಲದೆ ಇನ್ನು ಅನೇಕ ಪಾತ್ರಗಳಲ್ಲಿ ಸ್ತ್ರೀ ಕಾಣಿಸಿಕೊಳ್ಳುತ್ತಾಳೆ. ಅತ್ತಿಗೆ, ನಾದಿನಿ, ಚಿಕ್ಕಮ್ಮ, ದೊಡ್ಡಮ್ಮ, ಅ ತಂಗಿ ಹೀಗೆ ಪ್ರತಿಯೊಂದು ಪಾತ್ರದಲ್ಲೂ ತನ್ನದೇ ಆದ ವೈಶಿಷ್ಟ್ಯವ ತೋರಿಸುತ್ತಾಳೆ. ಇದು ಕೌಟುಂಬಿಕ ಪರಿಸರವಾದರೆ, ಸಾಮಾಜಿಕ ಇಂದು ಸ್ತ್ರೀತನ್ನ ಕದಂಬ ಬಾಹುಗಳನ್ನು ಎಲ್ಲೆಡೆಯೂ ಚಾಚಿದ್ದಾ ಅಧ್ಯಾಪಕಿ, ಗುಮಾಸ್ತೆ, ಡಾಕ್ಟರ್, ವಕೀಲ, ರಾಜಕೀಯ, ಸಹೋದ್ಯೋ ಹೀಗೆ ಅನೇಕಾನೇಕ ರಂಗಗಳಲ್ಲಿ ಸ್ತ್ರೀಯು ತನ್ನದೇ ಆದ ವಿಶಿ ರೀತಿಯ ಪಾತ್ರ ನಿರ್ವಹಿಸಿದ್ದಾಳೆ.

"ಮಗಳಕ್ಕ ತಂಗಿಯು ಮಿಗೆ ಸೊಸೆ ನಾದಿನಿಯು
ಜಗದ ವನಿತೆಯರು ಜನನಿಯು ಇವರೊಳಗೆ
ಜಗಕ್ಕೊಬ್ಬಳೇ ಸೈ ಸರ್ವಜ್ಞ"

ಬಿಟ್ಟೀರ ಜೋಂದಮ್ಮ ಶಂಭ

ಪ್ರೇಮ ಪತ್ರದ ಫಜೀತಿ

ನಾ ಬರೆದೆನೊಂದು ಪ್ರೇಮ ಪತ್ರ
ಅದನ್ನೋದಿದನು ನನ್ನ ಮಿತ್ರ
ಕೊಟ್ಟನದನ್ನು ಗುರುಗಳ ಹತ್ರ
ಪತ್ರದೊಂದಿಗೆ ಕಳುಹಿಸಿದರು ಪ್ರಾಂಶುಪಾಲರ ಹತ್ರ
ಓದಿದರು ಪ್ರಾಂಶುಪಾಲರು ಆ ಪ್ರೇಮ ಪತ್ರ
ಕೂಡಲೇ ದೊರಕಿತೆನಗೆ ಟಿ. ಸಿ. ಪತ್ರ.

ಗುಡ್ಡನ ರಮೇಶ್ ನಂದಿನಿ, ಕುಶಾಲನಗರ

ತಾಯಿ ದೇವರು

ತಾಯಿ ಎಂಬ ಶಬ್ಧ ಅದೆಷ್ಟು ಮಧುರ. ಮಧುರದಲ್ಲಿ ಮಧುರ ತಾಯಿ. ಸನಾತನದಲ್ಲಿ ಭಾರತೀಯರು ತಾಯಿಯನ್ನು ದೇವರೆಂದು ಗೌರವಿಸುತ್ತಿದ್ದರು. ಹಾಗೆಯೇ ತಾಯಿದೇವರು, ತಂದೆ ದೇವರು, ಗುರುದೇವರು, ಹುಟ್ಟಿದಾತ ಮಾನವನಾಗಲು ಮೂರು ಮುಖ್ಯ ಅವಶ್ಯಕತೆ ಇದೆ. ಜನ್ಮ, ಜೀವನ ಬುದ್ಧಿ, ಜನ್ಮ ಕೊಟ್ಟವರು ತಾಯಿ, ಸಾಕುವವರು ತಂದೆ, ಜ್ಞಾನ ಅಥವಾ ಬುದ್ಧಿ ಕೊಟ್ಟವರು ಗುರು. ಆದ್ದರಿಂದ ತಾಯಿ, ತಂದೆ, ಗುರು ದೇವರಿಗೆ ಸಮಾನ. ಆದರೆ ಅವರು ದೇವರಲ್ಲ. ಹೃದಯವಾಸಿಯೇ ದೇವರು. ಅದೇ ಆತ್ಮ., ಅದೇ ಚೈತನ್ಯ, ತಾಯಿ, ತಂದೆ, ಗುರು ದೇವರಾದರೆ, ನಮಗೆ ದೇವರ ಅವಶ್ಯಕತೆ ಏನು? ಲೌಕಿಕ ಜೀವನಕ್ಕೆ ತಾಯಿ, ತಂದೆ, ಗುರು ದೇವರು. ಪಾರಮಾರ್ಥಿಕ ಜೀವನಕ್ಕೆ ದೇವರು ಅಥವಾ ಪರಮಾತ್ಮ.

ತಂದೆ, ತಾಯಿ ಮನೆಯಲ್ಲಿರುವವರು ಗುರು ಆಶ್ರಮವಾಸಿ ಅಥವಾ ಶಾಲೆಗಳಿಗೆ ಭೇಟಿ ಕೊಡುವವ ಇವರಲ್ಲಿ ಕರ್ತವ್ಯವಿದೆ. ಅನುಕಂಪವಿದೆ. ಪ್ರೀತಿ ಇದೆ ಅಷ್ಟೇ ಸ್ವಾರ್ಥ ಇದೆ. ಪರಮಾತ್ಮನಲ್ಲಿ ಎಲ್ಲಾ ಗುಣಗಳು ಅಡಗಿವೆ ಪರಮಾತ್ಮ ಸರ್ವರ ಹೃದಯದಲ್ಲಿ ಅಡಗಿದ್ದಾನೆ. ದೇವನೊಬ್ಬನೇ ಹೃದಯವಾಸಿ. ಮಿಕ್ಕವರಿಗೆ ಹೃದಯವಾಸಿಯಾಗಲು ಸಾಧ್ಯವಿಲ್ಲ. ಆದ್ದರಿಂದ ದೇವನೊಬ್ಬನಿಗೆ ಪ್ರಾರ್ಥನೆ ಸಲ್ಲಬೇಕು. ಇತರರಿಗೆ ಕೃತಜ್ಞತೆ ಸಲ್ಲಬೇಕು. ಜ್ಞಾನಿಗಳು ಹೀಗೆ ವಿವರಿಸುತ್ತಾರೆ. ಮಾನವನಿಗೆ ದೇವರು ತಾಯಿ ತಂದೆಗಳಿಗಂತ ಹತ್ತಿರದವನು. ಅಂಥಾ ಪ್ರೇಮಸ್ವರೂಪಿಯಾದ ದೇವನನ್ನು ಪ್ರಾರ್ಥಿಸದವನು ಮನುಷ್ಯನೇ ಅಲ್ಲ.

ತಾಯಿಯ ಆಶೀರ್ವಾದ : ಆಶೀರ್ವಾದವೆಂಬುದು ಕಿರಿಯರು ಹಿರಿಯರಿಂದ ಪಡೆಯುವ ಅಮೂಲ್ಯ ವಸ್ತು. ಹಿರಿಯರು ಆಶೀರ್ವದಿಸುತ್ತಾರೆ. ಭಗವಂತನು ಈಡೇರಿಸುತ್ತಾನೆ. ಇದೇ ಹಿರಿಯರಿಗೂ ಭಗವಂತನಿಗೂ ಇರುವ ಬಾಂಧವ್ಯ. ಭಾರತದಲ್ಲಿ ಹಿಂದೆ ಒಂದು ಪರಂಪರೆ ಇತ್ತು. ಯಾರಾದರು ಯುದ್ಧಕ್ಕಾಗಲೀ, ತಪಸ್ಸಿಗೆ ಕಾಡಿಗಾಗಲೀ ಅಥವಾ ಇನ್ನಾವುದೋ ಮಹಾಕಾರ್ಯಕ್ಕಾಗಲೀ ಹೋಗಬೇಕಾದರೆ ಮೊಟ್ಟ ಮೊದಲು ಹೆತ್ತ ತಾಯಿಯ ಆಶೀರ್ವಾದ ಪಡೆಯುತ್ತಿದ್ದ ಅದೆಷ್ಟೋ ನಿದರ್ಶನಗಳಿವೆ. ಇಲ್ಲಿ ಒಂದೆರಡು ಉದಾಹರಣೆಗಳನ್ನು ಗಮನಿಸಿ. ಪಾಂಡುಪುತ್ರ ಅರ್ಜುನ ಯುದ್ಧ ಕ್ಷೇತ್ರಕ್ಕೆ ಹೊರಡುವ ಮುನ್ನ ತನ್ನ ತಾಯಿಯ ಆಶೀರ್ವಾದ ಪಡೆದ. ಅವನಿಗೆ ಅವನ ತಾಯಿ ಹೀಗೆಂದಳು "ಎಲ್ಲಿ ಧರ್ಮವಿದೆಯೋ ಅಲ್ಲಿ ಜಯ ಇದೆ" ಎಂದಳು. ಅಂದರೆ ಎಲ್ಲಿ ಆಶೀರ್ವಾದ ಮತ್ತು ಧರ್ಮ ಇದೆಯೋ ಅಲ್ಲಿ ಜಯ ಶತಃಸಿದ್ಧ. ಇವೆಲ್ಲದರ ಗೂಡಾರ್ಥ ಮಕ್ಕಳು ಯಾವ ಕಾಲಕ್ಕೂ ಯಾವ ಸಂದರ್ಭಕ್ಕೂ ತಾಯಿಯ ಮನ ನೋಯಿಸಬಾರದು. ತಾಯಿಯ ಮನ ನೊಂದರೆ ಮಕ್ಕಳ ಜೀವನ ನೋಯುತ್ತೆ. ಮಕ್ಕಳಿಗೆ ತಾಯಿಯ ಆಶೀರ್ವಾದ ದೇವರದಯೆ ಮುಖ್ಯ.

ತಾಯಿಯಾದವಳಲ್ಲಿಯೂ ಉನ್ನತ, ಉತ್ಕೃಷ್ಟ, ಪರಂಪರೆ ಇರಬೇಕು. ತನ್ನ ಮಕ್ಕಳನ್ನು ಸದ್ಗತಿಗೆ ಏರಿಸುವ ಗುಣ, ಹಂಬಲವಿರಬೇಕು. ಧೃತರಾಷ್ಟ್ರ, ಗಾಂಧಾರಿಯಿಂದ ನೂರು ಜನ ಮಕ್ಕಳನ್ನು ಪಡೆದ. ಗಾಂಧಾರಿ ತನ್ನ ಪತಿ ಕುರುಡನಾದ್ದರಿಂದ ನನಗೇಕೆ ಕಣ್ಣು ಎಂದು ಇದ್ದ ಕಣ್ಣಿಗೆ ಬಟ್ಟೆ ಕಟ್ಟಿಕೊಂಡಳು. ಕುರುಡಾಗಿ ಬೆಳೆದಳು. ನೂರು ಮಕ್ಕಳಲ್ಲಿ ಯಾರನ್ನೂ ನೋಡಲಿಲ್ಲ. ಅವರನ್ನು ತಿದ್ದಲಿಲ್ಲ. ನೂರು ಮಕ್ಕಳೂ ನಾಶವಾದರು. ಕುಂತಿ ದೇವಿಯು ತನ್ನ ಮಕ್ಕಳಿಗೆ ನ್ಯಾಯ, ಧರ್ಮ, ದೈವಭಕ್ತಿ ಕಲಿಸಿ ಹರಸಿದಳು. ಮಕ್ಕಳು ಎಲ್ಲಾ ಕ್ಷೇತ್ರದಲ್ಲಿ ಕೃಷ್ಣನ ಸಹಾಯದಿಂದ ಜಯ ಪಡೆದರು.

ತಾಯಿಯಾದವಳು ತನ್ನ ಪಾಲಿನ ಕರ್ತವ್ಯ ಮಾಡಲೇಬೇಕು. ಮೊಟ್ಟ ಮೊದಲು ತಾನು ಸದ್ಗುಣಿಯಾಗಬೇಕು. ತನ್ನ ಧರ್ಮವನ್ನು ತಾನು ಅರಿತಿರಬೇಕು. ಮಕ್ಕಳಿಗೆ ಧರ್ಮ ಪರಿಪಾಲನೆ ಕಲಿಸಬೇಕು. ಈ ವಿದ್ಯೆ ಒಂದು ಮಹಾ ಕಲೆ. ಹೃದಯದ ಅಂತರಾಳದಲ್ಲಿ ಹುಟ್ಟುವ ಕಲೆ ಹೃದಯವಾಸಿಯನ್ನು ಪಳಗಿಸುವ ಕಲೆ. ಸತತ ಪ್ರಯತ್ನದಿಂದ ದೊರಕುವ ಕಲೆ ಓದು ಬರಹ, ಸಂಪಾದನೆ ಬೇಕು. ಆದರೆ ಅದೊಂದೇ ಸಾಲದು. ಅದಕ್ಕೆ ಸದುಪಯೋಗ ಮುಖ್ಯ. ಉಪಯೋಗಕ್ಕಿಲ್ಲದ ಉಪಾಯ ಯಾವಾಗಲೂ ಅಪಾಯ.

ಇಂದಿನ ಯುವ ಪೀಳಿಗೆಯಲ್ಲಿ ಮಾತೃಭಾವನೆ ಅಳಿಯುತ್ತಿದೆ. ವಿದ್ಯಾವಂತರೆಂದೆನಿಸಿಕೊಂಡವರಿಂದಲೇ ಮಾತೆಯ ನಿರ್ಲಕ್ಷತೆ ಹೆಚ್ಚು. ಇದು ಸನಾತನ ಧರ್ಮವನ್ನು ಅಲಕ್ಷಿಸಿದಂತೆ. ವಿದ್ಯೆ ವಿನಯವನ್ನು ಗಳಿಸಬೇಕು. ಧರ್ಮ ಒಳ್ಳೆ ನಡೆವಳಿಕೆಯನ್ನು ತೋರಬೇಕು. ನಮ್ಮ ತಾಯಿ ನಮ್ಮಷ್ಟು ಶಿಕ್ಷಣ ಪಡೆಯದಿರಬಹುದು, ನಮ್ಮಪ್ಪ ಹಣ ಗಳಿಸದಿರಬಹುದು, ನಮ್ಮ ಹಾಗೆ ಲಕ್ಷಣವಿಲ್ಲದರಿಬಹುದು. ನಮ್ಮಲ್ಲಿರುವ (ಅ)ಜ್ಞಾನ ಅವರಿಗಿಲ್ಲದಿರಬಹುದು. ವಯಸ್ಸಾಗಿರಬಹುದು, ಕಣ್ಣು, ಕಿವಿ ಕಾರ್ಯಹೀನತೆಯಲ್ಲಿರಬಹುದು, ಕುರೂಪಿ, ಕೃಷ ಶರೀರದವರಿರಬಹುದು. ಆದ್ದರಿಂದ ಇನ್ನಾವುದೋ ಅಸಮರ್ಪಕ ರೀತಿಯಲ್ಲಿರಬಹುದು. ಆದರೆ ಜನ್ಮವಿತ್ತ ತಾಯಿ ತಾಯಿಯೇ. ತನ್ನ ಮಕ್ಕಳಿಂದ ತಾನು ನಿರ್ಲಕ್ಷಿಸಲ್ಪಟ್ಟಿದೆ ಎಂಬ ಭಾವನೆ ತಾಯಿಗೆ ಬಂದರೆ ಮಕ್ಕಳ ಬಾಳು ಕ್ಷಯವನ್ನು ಆಹ್ವಾನಿಸಿದಂತೆ. ಹೆತ್ತ ತಾಯಿ, ಹೊತ್ತಭೂಮಿಗೆ ಕೃತಜ್ಞತೆ ಸಲ್ಲಲೇಬೇಕು. ಯುವ ಜನಾಂಗ ಇದನ್ನರಿಯಬೇಕು. ತಾಯಿಯ ಪ್ರೀತಿ, ತಾಯಿಯ ತ್ಯಾಗ ಇತರರಿಗೆ ಸಾಧ್ಯವಿಲ್ಲ. ಆದ್ದರಿಂದ ಹೆತ್ತ ತಾಯಿಯನ್ನು ಹೊತ್ತಭೂಮಿಯನ್ನು ಪ್ರೀತಿಸಿ, ನಿಮ್ಮನ್ನು ನೀವು ಪ್ರೀತಿಸಿ. ಪ್ರೀತಿ ಎಂದೂ ಏನನ್ನೂ ಕೇಳುವುದಿಲ್ಲ. ಬದಲಾಗಿ ಎಲ್ಲವನ್ನೂ ಕೊಡುವುದು. ಸ್ವಾರ್ಥ ಎಲ್ಲವನ್ನೂ ಕೇಳುವುದು. ತಾಯಿಯ ಮೇಲೆ ಪ್ರೀತಿ, ಹೊತ್ತ ಭೂಮಿಯ ಮೇಲೆ ಪ್ರೀತಿಯೇ ನಮ್ಮ ಉಸಿರಾಗಿರಲಿ.

ಚೇಂದ್ರಿಮಾಡ ಮುತ್ತಪ್ಪ, ಕುಶಾಲನಗರ.

ನಾಣ್ನುಡಿ

ಹೆಂಣು ಹೆತ್ತು ಸಾಯಬೇಕು
ಗಂಡು ದಂಡಿಗೆ ಹೋಗಿ ಸಾಯಬೇಕು
ಇದುವೇ ವೀರಮರಣ, ಇದಕ್ಕಿಂತ ಬೇರೇನು ಬೇಕು.
ಕೊಡಗಿನ ಗೌಡರಲ್ಲಿ ಪ್ರಚಲಿತವಿರುವ ನಾಣ್ನುಡಿ

ಪಟ್ಟಡ ಪ್ರಭಾಕರ್

ಒಂದು ಸಂಭಾಷಣೆ

ಏ.... ನಿಂಗೆ ಗೊತ್ತಾಲೇನೇ

ಹೆಂಡತಿ : ನಾನ್ ಎಷ್ಟ್ ಹೇಳ್ದು ನಿಮಿಗೆ ಹೊಳೆ ಕರೆ ಭೂಮಿ ತೆಗೆದು ಬ್ಯಾಡತ?

ಗಂಡ : ನಿನ್ನ ಮಾತ್ ಕೇಳಿಕಂಡ್ ದುಡ್ಡ್ ಇಸ್ಸಿದ್ದರೆ ಊರವು ನೆಂಟ್ರು ಆ ಕಷ್ಟ, ಈ ಕಷ್ಟತ ಹೇಳಿ ಸಾಲ ಕೇಳ್‌ತಿದ್ರೊ. ಅವ್ಕ ಸಾಲ ಕೊಟ್ಟ್ ಕೇಳಿಕೆ ಹೋಕನ ಮುಖ ದಪ್ಪ ಮಾಡಿಕಂಡ್ ಮಾತಾಡದೆ ಹೋಗ್‌ತಿದ್ರೊ ಈಗ ನೋಡ್ ಎಲ್ಲವು ಕರ್ದ್ ಮಾತಾಡ್ತುವೆ.

ಹೆಂ. : ಕಾಫಿ ಸ್ವಲ್ಪ ಸಮಯ ಇಸ್ಸನೊ ಒಳ್ಳ ರೇಟ್ ಬಂದೆತ ಹೇಳ್ದ್ ನೀವು ಕೊಟ್ಟರಿ 1375ಕ್ಕೆ?

ಗಂ. : ಅಂದ್ 1375ಕ್ಕೆ ಕೊಟ್ಟರ್‌ಂದ ನಿನ್ನ ತಂಗೆನ ಮದುವೆ ವರದಕ್ಷಿಣೆ ಕೊಟ್ಟ್ ಮಾಡ್ದ್ ಮರ್ತ್ ಬುಟ್ಟನೆ.

ಹೆಂ. : ಅಲ್ಲ ನಿಮಿಗೆ ಬುದ್ಧಿ ಉಟ್ಟ ಅಂತ ದೊಡ್ಡ ಎತ್ತ್‌ನ ಮಾಪ್ಪಿಳ್ಳೆಗೆ ಕೊಟ್ಟರೆ ಅಲ್ಲ

ಗಂ. : ನೋಡ್‌ನೇ ಆ ಎತ್ತ್ ಸರಿ ಹೂಡಿಕೆ ಬಾಲೆ. ಯಾರರ ತೋಟ ನುಗ್ಗಿ ಲೂಟಿ ಮಾಡ್ತು. ಅವು ನಮ್ಮ ಚಾಂಪ, ಚಾಮೆವ್ವನ ಹೇಳಿ ನಮ್ಮ ಮಕ್ಕಳವರೆಗೆ ಕರ್ದ್ ಬಯ್ಯದು ತಪ್ಪಿತ್.

ಹೆಂ. : ನೋಡಿ, ಆ ಎತ್ತ್ ಮಾಪಳೆಗೆ ಕೊಡ್‌ಕ್‌ನ ನನ್ನನೇ ನೋಡತ್ತಿತ್ತ್?

ಗಂ. : ಅದ್ ನಿನ್ನನೇ ನೋಡ್ದ್ ನಿಂಗೆ ಅದಿಕೆ ಯಾವ ವ್ಯತ್ಯಾಸ ಇಲ್ಲೆ ಅದ್ಕೆ.

ಹೆಂ. : ನಮ್ಮಪ್ಪ ಡಿಗ್ರಿ ಓದಿಸಿದ್ದ್ ದನಕೆ ಹೋಲ್‌ಸಿಕೆ ಅಲ್ಲಾ?

ಗಂ. : ನೀನ್ ಡಿಗ್ರಿ ಓದಿರು ನಿಂಗೆ ಬುದ್ಧಿ ಇಲ್ಲೆ.

ಹೆಂ. : ನಂಗೆ ಬುದ್ಧಿ ಇಲ್ಲೆಗಡ ನಿಮಿಗೆ ಮಾತ್ರ ಎಷ್ಟ್ ಬುದ್ಧಿ ಉಟ್ಟ್‌ತ ಗೊತ್ತಲ್ಲ.

ಗಂ. : .... ಇಂವ ಸುಮ್ಮನೇ ಇತ್ತ್.

ಹೆಂ. : ನೀವು ಹಿಂಗೆ ಆಡ್‌ರೆ ನಾನ್ ತವ್ರು ಮನೆಗೆ ಹೋನೆ?

ಗಂ. : ನೋಡ್ ನಿನ್ನ ತವ್ರು ಮನೆಲೀ ಅಣ್ಣ ತಮ್ಮ ಎಲ್ಲಾ ಪಾಲಾಗಿ ಅವ್ಕ ಜೀವನ ಮಾಡಿಕೆ ಕಷ್ಟ.

ಹೆಂ. : ನನ್ನ ಅವ್ವ ಅಪ್ಪ ಸಾಂಕಿದೆ?

ಗಂ. : ಅಲ್ಲನೇ ನಿಮ್ಮ ಅಪ್ಪಂಗೆ ಬ್ಯಾರೆ ಉಸಾರಿಲ್ಲೆ. ಅಪ್ಪ ನಿನ್ನನ ಸಣ್ಣದರ್ಲಿ ಬೆಳ್‌ಸಿ ಡಿಗ್ರಿ ಓದ್‌ಸಿ ಮದ್ವೆ ಮಾಡ್‌ದ್ ಅಲ್ಲದೆ ನಿಂಗೆ ಮಕ್ಕ ಆದ ಮ್ಯಾಲೆ ನಿನ್ನ ಸಾಂಕಕು ತೇಳ್‌ರೇ ಆದೆನೆ?

ಹೆಂ. : ನಂಗೆ ಎಜ್‌ಕೆಶನ್ ಇದ್ದ್ ಏನ್ ಪ್ರಯೋಜನ?

ಗಂ. : ಸಧ್ಯ ನಿಂಗೆ ಈಗಾರ್ ಗೊತ್ತಾತಲ. ನಿನ್ನ ಅಹಂಕಾರನ ಬುಟ್ಟು ಬುಡ್‌ತ.

ಹೆಂ. : ನೀವು ಎಂಟನೇ ಕ್ಲಾಸ್ ಓದಿರು ಡಿಗ್ರಿ ಮಾಡ್‌ದವುಕ್ಕಿಂತ ಹೆಚ್ಚ್?

ಗಂ. : ಇನ್ನಾರ್ ನನ್ನ ಅರ್ಥ ಮಾಡಿಕ. ವಿದ್ಯಾ ಇರಕು ಅದ್ ಯಾವ ಸಮಯಲಿ ಎಲ್ಲಿ ಹೆಂಗೆ ಉಪಯೋಗಿಸಕು ಹಂಗೆ ಉಪಯೋಗಿಸಕು. ನಾವು ಕೊಡಗಿನ ಅರೆಭಾಷೆ ಗೌಡರ ವಂಶಲಿ ಹುಟ್ಟಿ, ಮಣ್ಣ್‌ಲಿ ಬೆವರ್ ರಕ್ತ ಸುರಿಸಿ ದುಡ್ಡ್ ಸಂಪಾದನೆ ಮಾಡವು. ನಮಿಗೆ ಯಾರರ ಒಟ್ಟಿಗೆ ಹೆಂಗೆ ಇರಕುತೇಳಿ ಗೊತ್ತಿದ್ದದ್ದೆ. ಆತಾ.

ಕುಂಜಿಲನ ಆರ್. ರಾಜು, ಕುಂಬಳದಾಳು.

ಓ ನೆನಪುಗಳೇ........

ಓ ನೆನಪುಗಳೇ ನೀವೇಕೆ ಕಾಡುವಿರಿ
ಎದೆಯ ಗಾಯವನ್ನೇಕೆ ಕೆದಕುವಿರಿ
ಕಣ್ಣೀರನ್ನೇಕೆ ಕೆಣಕಿ ಕೆನ್ನೆಯಲಿ ಜಾರಿಸುವಿರಿ
ಓ ನೆನಪುಗಳೇ ನೀವೇಕೆ ಕಾಡುವಿರಿ
ಹೃದಯವನ್ನೇಕೆ ಕಂಡಿಸುವಿರಿ
ಮನವ ನೋಯಿಸಿ ನಿದ್ದೇಯನ್ನೇಕೆ ಕೆಡಿಸುವಿರಿ
ಓ ನೆನಪುಗಳೇ ನೀವೇಕೆ ಕಾಡುವಿರಿ
ಗತ ಗಳಿಗೆಯನ್ನೇಕೆ ಹಿಂದಕ್ಕೆಳೆದು
ಭವಿಷ್ಯದಾಕಾಂಕ್ಷೆಗಳನ್ನೇಕೆ ಕೊಲ್ಲುವಿರಿ
ಓ ನೆನಪುಗಳೇ ನೀವೇಕೆ ಕಾಡುವಿರಿ

ಕಟ್ಟೆಮನೆ ಆರ್. ನವೀನ್
ಸಿದ್ದಾಪುರ

9 ನೇ ಪುಟದಿಂದ

ಮಂತ್ರೋಚ್ಚಾರಗಳನ್ನು ಹೇಳಿದ ನಂತರ, ಅವನು ಹೇಳಿದಂತೆ ದೀಕ್ಷಿತನಿಗೆ ಹೇಳಲು ಹೇಳುವನು. ಕೈಯ ಬೆರಳಿಗೆ ದರ್ಬೆಯನ್ನು ಕಟ್ಟಿ ಪಿಂಡದ ಎಲೆಗೆ ನೀರು ಬಿಟ್ಟು ಪುರೋಹಿತ ಹೇಳಿದಂತೆ ಮಾಡುವುದು. ಪಿಂಡದ ಎಲೆಯನ್ನು ಸಂಗಮದಲ್ಲಿ ಬಿಟ್ಟು ನೀರಿನಲ್ಲಿ ಮುಳುಗಿ ಸ್ನಾನ ಮಾಡಿ ಮಡಿ ಬಟ್ಟೆಗಳನ್ನು ತೊಟ್ಟು ಪುರೋಹಿತನ ದಕ್ಷಿಣೆ ಕೊಟ್ಟು ಮೊದಲೇ ತಂದ ಹಣ್ಣು ಕಾಯಿ ಫಲಾಮೃತದೊಂದಿಗೆ ದೇವಸ್ಥಾನದ ಪೂಜೆಗೆ ಹೋಗುವುದು. ದೇವರಿಗೆ ಪೂಜೆ ಸಲ್ಲಿಸಿ ತೀರ್ಥ ಪ್ರಸಾದ ಸ್ವೀಕರಿಸಿ ಮನೆಗೂ ತಂದು ಮನೆಯವರಿಗೆ ಕೊಡುವುದು ಇಲ್ಲಿಗೆ ಪಿಂಡ ಹಾಕುವ ಕ್ರಮ ಮುಗಿಯಿತು.

– ಮುಂದುವರೆಯುತ್ತದೆ.

ಧಾರವಾಹಿ -11



✦ ಕೌಂಡಿನ್ಯ

ಅದು ಹೊಳೆಯ ತೀರ !

ಬಂಡೆಯೊಂದರ ಮೇಲೆ ಪ್ರಸನ್ನ ಮತ್ತು ವತಿ ಕುಳಿತುಕೊಂಡಿದ್ದಾರೆ. ಬಿಸಿಲಿನ ರತೆ ತೀವ್ರವಾಗಿದೆ.

ಪ್ರಸನ್ನನ ಮುಖ ಬಿಗಿದುಕೊಂಡಿದೆ !

ರೇವತಿ ವ್ಯಂಗವಾಗಿ "ಮೀನ ನಿಮ್ಮನ್ನು ತಿಸುತ್ತಿದ್ದ ಸಂಗತಿ ಮತ್ತು ಆಕೆ ಭಯಾನಕವಾಗಿ ರುವ ಸಂಗತಿ ನಿಮಗೆ ಗೊತ್ತಿದ್ದರೂ ಸಹ ದನ್ನು ನನಗೆ ಹೇಳಲಿಲ್ಲ. ಏಕೆ?"

ಪ್ರಸನ್ನನ ಮುಖ ಕೆಂಪೇರಿತು !

"ನನಗೆ..... ನನಗೆ..... ಇಲ್ಲೇ ಸಂದೇಹ"

ಪ್ರಸನ್ನ ಕೋಪದಿಂದ "ಸಂದೇಹ...... ಕೆ..... ನಾನೇನು ಮಹಾ ಅಪರಾಧ ಡಿದ್ದೇನೆ ಅಂತ ಸಂದೇಹ ನಿನಗೆ?"

"ಮೀನ ನಿಮ್ಮನ್ನು ಪ್ರೀತಿಸುತ್ತಿರಲಿಲ್ಲವೆ?"

ಪ್ರಸನ್ನ ನಗುತ್ತಾ "ಮೀನ ಮಾತ್ರವಲ್ಲ ಊರಿನಲ್ಲಿ ತುಂಬಾ ಯುವತಿಯರು ನ್ನನ್ನು ಪ್ರೀತಿಸುತ್ತಿದ್ದರು. ಅದಕ್ಕೆ ಕಾರಣ ನ್ನ ಶ್ರೀಮಂತಿಕೆ. ಅವರು ಪ್ರೀತಿಸುತ್ತಿದ್ದರು ತ ನಾನು ಸಹ ಅವರೆಲ್ಲರನ್ನು ಪ್ರೀತಿಸಲು ಧ್ಯವೆ?"

ರೇವತಿ "ಅಂದರೆ ನನ್ನ ಗೆಳತಿ ಮೀನಳನ್ನು ವು ಪ್ರೀತಿಸುತ್ತಿರಲಿಲ್ಲವೆ ಪ್ರಸನ್ನ"

"ನಾನು ಯಾರನ್ನೂ ಪ್ರೀತಿಸುತ್ತಿರಲಿಲ್ಲ!"

ರೇವತಿಗೆ ಈಗ ತುಸು ಸಮಾಧಾನ ಯಿತು. ಅವಳು "ಇದನ್ನು ನಾನು ಬಬಹುದೆ?"

"ಅದು ನಿನಗೆ ಸೇರಿದ್ದು. ನಿನ್ನೆಯ ದಿನ ೊದಲ ಸಲ ನಿನ್ನನ್ನು ಕಂಡಾಗಲೇ ನನ್ನ ಹೃದಯದಲ್ಲಿ ನಿನ್ನ ಬಗ್ಗೆ ಮಧುರವಾದ ಭಾವನೆಗಳು ಉಂಟಾಯಿತು. ನನ್ನ ಸಂಗಾತಿಯಾಗಲು ನೀನೆ ತಕ್ಕವಳು ಎನಿಸಿತು. ಅದಕ್ಕೆ ನೇರವಾಗಿ ನಿನ್ನನ್ನು ಕೇಳಿದೆ. ನಿನ್ನನ್ನು ಒತ್ತಾಯ ಮಾಡಲಾರೆ. ಏಕೆ ಅಂದರೆ ನನ್ನ ಬಗ್ಗೆ ನಿನಗೆ ಅದೇನೋ ಸಂದೇಹ ಇದೆ. ಸಂದೇಹ ಇರುವ ಜಾಗದಲ್ಲಿ ಪ್ರೀತಿ ಇರಲು ಸಾಧ್ಯವೇ ಇಲ್ಲ."

ರೇವತಿ ಗೊಂದಲದಿಂದಲೇ ಏನನ್ನೋ ಹೇಳಲು ಬಾಯಿ ತೆರೆದಳು. ಆಗ ಪ್ರಸನ್ನ "ರೇವತಿ ದುಡುಕಬೇಡ ನನ್ನ ಬಗ್ಗೆ ನಿನಗೆ ನಂಬಿಕೆ ಬರುವ ತನಕ ಯಾವ ನಿರ್ಧಾರವನ್ನು ಸಹ ತೆಗೆದುಕೊಳ್ಳಬೇಡ. ಬೇಕೆನಿಸಿದಾಗ ನೀನು ನನ್ನ ಬಂಗಲೆಗೆ ಬಂದು ಉಳಿದುಕೊಳ್ಳಬಹುದು" ಎಂದು ಅಲ್ಲಿಂದ ಎದ್ದು ನಡೆದು ಬಂದನು.

ರಸ್ತೆಯ ಅಂಚಿನಲ್ಲಿ ಜೀಪು ನಿಂತಿತ್ತು. ಅದೇಕೋ ಅವಳನ್ನು ಕರೆಯದೆ ಒಬ್ಬನೇ ಹೊರಟುಹೋದನು.

ಸುತ್ತಲೂ ಗಗನಚುಂಬಿ ವೃಕ್ಷಗಳು !

ರಭಸದಿಂದ ಹರಿಯುತ್ತಿರುವ ನದಿ !

ರೇವತಿಗೆ ಪ್ರಕೃತಿಯ ಸೌಂದರ್ಯವನ್ನು ಕಂಡು ಸಂತೋಷ ಪಡಲು ಮನಸ್ಸೇ ಸರಿ ಇರಲಿಲ್ಲ.

ಹೆಜ್ಜೆಗಳ ಶಬ್ದ !

ಚರಕ್....... ಪರಕ್ !

ರೇವತಿ ಬೆಚ್ಚಿ ಬಿದ್ದು ಹಿಂತಿರುಗಿದಳು !

ಅಲ್ಲಿ..... ಅಲ್ಲಿ ಬಂಗಲೆಯಲ್ಲಿ ಕಂಡಿದ್ದ ಮುದುಕ ನಿಂತಿದ್ದನು. ತನ್ನ ಪಾಡಿಗೆ ತಾನು ನಗುತ್ತಿದ್ದನು.

ಮುಖದ ತುಂಬಾ ಕುರುಚಲು ಗಡ್ಡ !

ಪೈಯಿಜಾಮದ ಲಾಡಿ ಸಡಿಲವಾಗಿದೆ. ಮುಳ್ಳುಗಳು ತರಚಿದ್ದರಿಂದ ಜುಬ್ಬಾ ಕೆಲವು ಕಡೆ ಹರಿದಿದೆ.

ರೇವತಿಯ ಹತ್ತಿರ ಬಂದನು.

ರೇವತಿ ಭಯದಿಂದ ಹಿಂದೆ, ಹಿಂದೆ ಸರಿಯುತ್ತಿದ್ದಾಳೆ. ಇವಳನ್ನೇ ನುಂಗುವಂತೆ ನೋಡುತ್ತಿದ್ದಾನೆ.

ಈ ಅರೆ ಹುಚ್ಚ ಪ್ರಸನ್ನನ ಅಕ್ಕನ ಗಂಡ ! ಇದ್ಯಾಕೆ ಈ ರೀತಿ ಇವರು ತಿರುಗಲು ಬಿಟ್ಟಿದ್ದಾರೆ.

ಹಿಂದೆ, ಹಿಂದೆ ಸರಿಯುತ್ತಿದ್ದ ರೇವತಿ ಈಗ ಮರದ ಹತ್ತಿರ ನಿಂತಿದ್ದ ವ್ಯಕ್ತಿಗೆ ಗುದ್ದಿದಳು. ಭಯದಿಂದ ಪಟ್ಟನೆ ಹಿಂತಿರುಗಿದಳು.

'ಉಫ್' ಎಂಬ ಉಸಿರು ಹೊರ ಬಂತು !

ದೇವಸ್ಥಾನದ ಯುವಕ ಪೂಜಾರಿ !

ಪೂಜಾರಿ ರೇವತಿಯನ್ನು ತಬ್ಬಿ ಹಿಡಿದುಕೊಂಡು ಮುಂದೆ ಬಂದ ಕೂಡಲೇ ಅರೆ ಹುಚ್ಚ ಓಡಿಹೋದನು.

ಪೂಜಾರಿ ನಗುತ್ತಾ "ಮೇಡಂ....... ಇದು ನಗರ ಅಲ್ಲ. ನೀವು ಈ ರೀತಿ ಒಬ್ಬೊಬ್ಬರೇ ತಿರುಗಲು ಬರಬಾರದು.

ಈ ಅರೆ ಹುಚ್ಚ ಯಾರು ಅಂತ ಗೊತ್ತೆ?

"ಗೊತ್ತು" ಎಂಬಂತೆ ತಲೆಯಾಡಿಸಿದಳು.

ಈಗ ಅವರಿಬ್ಬರು ಊರಿನತ್ತ ನಡೆಯುತ್ತಿದ್ದಾರೆ.

ಯುವಕ ಪೂಜಾರಿ ನಗುತ್ತಾ "ಎಡತೊರೆ ಬಂಗಲೆಯಲ್ಲಿ ಇನ್ನೂ ಇಬ್ಬರು ಅರೆಹುಚ್ಚರಿದ್ದಾರೆ. ನೋಡಿದ್ದೀರ?"

"ಪ್ರಸನ್ನನ ಅಣ್ಣಂದಿರೆ?"

"ಹೌದು"

ರೇವತಿ ಅವರನ್ನೆಲ್ಲಾ ನೋಡುತ್ತಿದ್ದರೆ ಸಂದೇಹ ಬರುತ್ತದೆ. ಈ ಮೂವರಿಗೂ ಹುಚ್ಚು ಹಿಡಿಯಲು ಕಾರಣ ಏನು?

ಯುವಕ ಪೂಜಾರಿ ಸ್ವಲ್ಪ ಹೊತ್ತು ಸುಮ್ಮನಿದ್ದು ಬಳಿಕ "ನಾನು ಈ ಊರಿನವನಲ್ಲ. ಜೀವನ ನಿರ್ವಹಣೆಗೆ ಅಂತ ಇಲ್ಲಿಗೆ ಬಂದು ಎರಡು ತಿಂಗಳಾಯಿತು. ನಾನು ಏನನ್ನೂ ಕಂಡವನಲ್ಲ. ಊರಿನವರು ಆಡಿದ್ದನ್ನು ಹೇಳುತ್ತೇನೆ"

ಇಲ್ಲಿಯವರೆಗೆ.........

ಮೀನಳ ಡೈರಿಯನ್ನು ಓದಲು ಆಗುವುದಿಲ್ಲ. ಮಾರನೆಯ ದಿನ ರೇವತಿ ಹುತ್ತವನ್ನು ನೋಡಲು ಹೋಗುತ್ತಾಳೆ. ಹಾವು ಕಚ್ಚಲು ಪ್ರಯತ್ನಿಸಿದಾಗ ಪ್ರಸನ್ನ ಕಾಪಾಡುತ್ತಾನೆ. ಮೀನ ಪ್ರಸನ್ನನನ್ನು ಪ್ರೀತಿಸುತ್ತಿದ್ದ ಸಂಗತಿಯ ಬಗ್ಗೆ ರೇವತಿ ಮಾತಾನಾಡುತ್ತಾಳೆ.

ಮುಂದೆ ಓದಿ..............

ರೇವತಿ ಒಪ್ಪಿಕೊಂಡು ತಲೆಯಾಡಿಸಿದಳು.

ಪೂಜಾರಿ ಗಂಭೀರವಾಗಿ "ಅಣ್ಣಂದಿರಿಗೆ, ಅಕ್ಕನ ಗಂಡನಿಗೆ ಹುಚ್ಚು ಹಿಡಿಯಲು ಕಾರಣ ಪ್ರಸನ್ನ!"

ರೇವತಿ ಬೆಚ್ಚಿ ಬಿದ್ದಳು. ಭಯ ಗಾಬರಿಯಿಂದ..... ಏನು..... ಏನಂದ್ರಿ ಪ್ರಸನ್ನ.... ಪ್ರಸನ್ನ...."

"ನಂಬಿಕೆ ಬರುತ್ತಿಲ್ಲ ಅಲ್ಲವೆ!"

ರೇವತಿ ಉತ್ತರಿಸಲಿಲ್ಲ.

"ಪ್ರಸನ್ನನ ಭಾವ ಸೌಂದರ್ಯ ಕಂಡು ನೀವು ಬೆರಗಾಗಿದ್ದೀರ ಅಂತ ನನಗೆ ಗೊತ್ತು. ಆದರೆ ಅವನೊಬ್ಬ ರಾಕ್ಷಸ !"

ರೇವತಿ ಗಂಭೀರವಾಗಿ "ಆವೇಶ ಪಡಬೇಡಿ. ತನ್ನ ರಕ್ತ ಸಂಬಂಧಿಗಳಿಗೆ ಹುಚ್ಚು ಹಿಡಿಯಲು ಪ್ರಸನ್ನ ಹೇಗೆ ಕಾರಣನಾದ ಅಂತ ಹೇಳುತ್ತೀರ ಪೂಜಾರಿಯವರೆ?

ಯುವಕ ಪೂಜಾರಿ ಸುತ್ತಲೂ ನೋಡುತ್ತಾ "ಇಲ್ಲಿ ಬೇಡ ದೇವಸ್ಥಾನಕ್ಕೆ ಬನ್ನಿ ಹೇಳುತ್ತೇನೆ"

"ಯಾವಾಗ ಬರಲಿ" "ಸಂಜೆ ಆರು ಗಂಟೆಗೆ"

ಅವರಿಬ್ಬರು ನಡೆದುಕೊಂಡು ಬರುತ್ತಿದ್ದಾರೆ. ಯುವಕ ಪೂಜಾರಿ ಅವರ ಹತ್ತಿರ ಬರುತ್ತಾ "ಜನಗಳು ಮೀನಾಳ ಸಾವಿಗೂ ಪ್ರಸನ್ನನಿಗೂ ಸಂಬಂಧ ಕಲ್ಪಿಸುತ್ತಿದ್ದಾರೆ"

ರೇವತಿ ಭಯಾಶ್ಚರ್ಯದಿಂದ ನೋಡಿ

ಪೂಜಾರಿ ಇದು ನನ್ನ ಅಭಿಪ್ರಾಯ ನೀನು ಇದರ ಬಗ್ಗೆ ಈ ಊರಿನ ಜನಗ ಕೇಳಿದರೆ ಹೇಳುತ್ತಾರೆ. ಮೀನಳ ಪ್ರೀತಿಯ ನಾಟಕ ಆಡಿ ಮೋಸ ಮಾಡಿ

ರೇವತಿ ತತ್ತರಿಸಿ ಹೋದಳು.

ಬಯಲಾಗುತ್ತಿರುವ ರಹಸ್ಯ ! ಪ್ರಸ ನಾಟಕದ ಮತ್ತೊಂದು ಮುಖದ ದರ್ಶ

ಮೀನಳ ಸಾವಿಗೆ ಪ್ರಸನ್ನ ಕಾರಣ !

(ಮುಂದುವರೆಯು

ಟೋಲೋಲಿಂಗ್ ವೀರ : ಪ್ರವೀಣ್ ತೋಮಾರ್

ಶ್ರೀನಗರ–ಲೇಹ್ ರಾಷ್ಟ್ರೀಯ ಹೆದ್ದಾರಿಗೆ ಬಹಳ ಸಮೀಪವಿರುವ ಡ್ರಾಸ್ ಉಪವಿಭಾಗದ ಟೋಲೋಲಿಂಗ್ ಬೆಟ್ಟವನ್ನು ಕಳೆದ ಜೂನ್ 12ರಂದು ಅತಿಕ್ರಮಣಕಾರರಿಂದ ವಶಪಡಿಸಿಕೊಳ್ಳುವಲ್ಲಿ 23 ವರ್ಷದ ಲೆಫ್ಟಿನೆಂಟ್ ಪ್ರವೀಣ್‌ತೊಮಾರ್ ಅವರು ಮೆರೆದ ಸಾಹಸ ಅಪ್ರತಿಮವಾದದು.

2 ರಜಪುತಾನ ರೈಫಲ್ಸ್‌ಗೆ ಸೇರಿದ ಬೆಟಾಲಿಯನ್‌ನ ನೇತೃತ್ವವನ್ನು ಮೇಜರ್ ವಿವೇಕ್ ಗುಪ್ತಾ ಅವರು ವಹಿಸಿದ್ದರು. ಶತ್ರುವತ್ತ ಮುನ್ನುಗ್ಗುತ್ತಿರುವಾಗಲೇ ಮೇಜರ್ ಅವರ ಮೇಲೆ ಶತ್ರುವಿನ ಗುಂಡು ಎರಗಿತು. ಆದರೆ ಕೆಚ್ಚೆದೆಯ ಆ ವೀರ ಕೊನೆಯುಸಿರೆಳೆಯುವ ಮೊದಲು ಶತ್ರುವಿನ ಬಂಕರ್ ಮೇಲೆ ಹ ಕೈ ಬಾಂಬುಗಳನ್ನು ಎಸೆದು ಭಾರಿ ಹಾನಿ ಉಂಟು ಮಾಡಿದರು. ಅವರ ಅಂತಿಮ ಸಾಹಸವೂ ಆಯಿತು.

ನಾಯಕನ ಅಗಲಿಕೆ ತೊಮಾರ್ ಅವರನ್ನು ಒಂದಿ ವಿಚಲಿತಗೊಳಿಸಲಿಲ್ಲ. ಶತ್ರುವನ್ನು ಮುಗಿಸುವ ನೇತೃತ್ವವನ್ನು ಅ ವಹಿಸಿಕೊಂಡರು. ತಮ್ಮ ನಾಯಕ ನಡೆದ ದಾರಿಗೆ ಬದಲಾಗಿ ಅತ್ಯ ಕಷ್ಟಕರವಾದ ಕಲ್ಲುಬಂಡೆಗಳನ್ನು ಏರಿ ಶತ್ರುಪಾಳೆಯದತ್ತ ನುಗ್ಗಿದ ಮಾತೃಭೂಮಿಯ ರಕ್ಷಣೆಯ ಹೊಣೆ ಅವರನ್ನು ಸಿಂಹದ ಮುನ್ನುಗ್ಗಿಸಿತ್ತು. ಅದೇ ರಾತ್ರಿ ಟೋಲೋಲಿಂಗ್ ಬೆಟ್ಟ ಭಾರ ವಶವಾಯಿತು.



ಲವ್ ಇನ್ ನೇಪಾಳ್ — ಕೊರಿಯರ್ ರವಿಕುಮಾರ್, ಅರ್ಚನಾ

'ಲವ್ ಇನ್ ನೇಪಾಳ್' ಗೆ ಸೆನ್ಸಾರ್ ಮನ್ನಣೆ

ಕೊರಿಯರ್ ರವಿಕುಮಾರ್ ನಿರ್ಮಿಸಿ. ಆರ್. ಕೇಶವ ಕಥೆ, ಚಿತ್ರಕಥೆ ಬರೆದು ನಿರ್ದೇಶಿಸಿರ 'ಲವ್ ಇನ್ ನೇಪಾಳ್' ಚಿತ್ರವನ್ನು ಸೆನ್ಸಾ ಮಂಡಳಿಯವರು ವೀಕ್ಷಿಸಿ ಯು ಸರ್ಟಿಫಿಕೇ ನೀಡುವ ಮೂಲಕ ಹಸಿರು ನಿಶಾನೆ ನೀಡಿದ್ದಾ

ಆಗಸ್ಟ್ ತಿಂಗಳೊಳಗೆ ತೆರೆ ಕಾಣಲಿದೆ.

ಚಿತ್ರದ ಛಾಯಾಗ್ರಹಣ ಕೆ. ವಾಸುದೇವ ಸಂಗೀತ ಮಾರುತಿ ಮೀರಜ್‌ಕರ್ ಅವರದು.

ಚಿತ್ರದ ತಾರಾಗಣದಲ್ಲಿ ರವಿಕುಮಾರ ನಾಗೇಶ್‌ಮಯ್ಯ, ಅರ್ಚನ, ಭವ್ಯಶ್ರೀ ಗಾಯತ್ರಿ ಪ್ರಭಾಕರ್, ಪ್ರೇಂರಾಜ್, ಬಿ. ಆರ ಕೇಶವ, ಶಿವು, ಕರ್ಮಂಡು ಕೋಬ್ರಾ, ಮೇಕ ಗೋವಿಂದ ಮುಂತಾದವರು ಇದ್ದಾರೆ.

ಹುತಾತ್ಮ ಯೋಧರು :

ಪೆಮ್ಮಂಡ ಕಾವೇರಪ್ಪ : ದೇಶದ ರಕ್ಷಣೆಗಾಗಿ ಹೋರಾಡಿದ ಭಾರತೀಯ ಭೂದಳದ ಸೈನಿಕ ಕೊಡಗಿನ ವೀರ ಯೋಧ ಪೆಮ್ಮಂಡ ೇರಪ್ಪನವರು ಜುಲೈ ತಿಂಗಳ ಮೊದಲವಾರ ಕಾರ್ಗಿಲ್ ಕಾರ್ಯಾಚರಣೆಯಲ್ಲಿ ಪಾಕ್ ಶತ್ರುಗಳ ಮುಖಾಮುಖಿ ಯುದ್ಧ ಹೋರಾಟದಲ್ಲಿ ಶಕ್ಕಾಗಿ ಪ್ರಾಣವನ್ನು ಅರ್ಪಿಸಿದರು.

ಮೂವತ್ತೆರಡು ವರ್ಷ ಪ್ರಾಯದ ಕಾವೇರಪ್ಪನವರು ವಿರಾಜಪೇಟೆ ಸಮೀಪದ ಮೈತಾಡಿ ಪೆಮ್ಮಂಡ ದೇವಯ್ಯನವರ ಪುತ್ರರಾಗಿದ್ದರು. ನ ಹದಿನಾಲ್ಕು ವರ್ಷಗಳಿಂದ ಭಾರತೀಯ ಸೇನೆಯ 224ನೇ ಹೆವಿ ಮೋಟಾರ್ ರೆಜಿಮೆಂಟಿನಲ್ಲಿ ಹವಾಲ್ದಾರ್‌ರಾಗಿದ್ದರು. ಇವರು ಕಡಿಯತ್ತೂರು ಮದ ಕೊಪ್ಪಡ ಚಂಗಪ್ಪನವರ ಮಗಳು ಶೋಭರನ್ನು ಐದು ವರ್ಷದ ಹಿಂದೆ ಮದುವೆಯಾಗಿದ್ದು ಇವರಿಗೆ ಮಕ್ಕಳ ಭಾಗ್ಯವಿರಲಿಲ್ಲ. ಇವರು ರ್ವ ಪತ್ನಿ, ಓರ್ವ ಸಹೋದರಿ, ಮೂವರು ಸಹೋದರರನ್ನು ಅಗಲಿದ್ದಾರೆ. ಇವರ ಒಬ್ಬ ಸಹೋದರ ಸಿ. ಆರ್. ಪಿ. ಎಫ್.ನ ಮಿಜೋರಾಂನಲ್ಲಿ ನೆ ಸಲ್ಲಿಸುತ್ತಿದ್ದಾರೆ. ತಂದೆ, ತಾಯಿಯನ್ನು ಕಳೆದುಕೊಂಡಿರುವ ಕಾವೇರಪ್ಪನವರೆ ಕುಟುಂಬದ ಹಿರಿಯ ಆದರ್ಶ ಪ್ರಾಯವಾಗಿದ್ದರು. ಜುಲೈ ಭತ್ತರಲ್ಲಿ ವೀರಯೋಧನ ಪಾರ್ಥಿವ ಶರೀರವನ್ನು ಕೊಡಗು ಜಿಲ್ಲಾಧಿಕಾರಿ ಜಯರಾಂ ರಾಜ್ ಅರಸ್ ಮತ್ತು ಪೋಲೀಸ್ ಉನ್ನತಾಧಿಕಾರಿ ಸ್ಕರರಾವ್ ಅವರು ಆನೆಚೌಕೂರು ಗೇಟಿನಲ್ಲಿ ಪುಷ್ಪ ಗುಚ್ಛವಿರಿಸಿ ಬರಮಾಡಿದರು. ದಾರಿಯ ಇಕ್ಕೆಲಗಳಲ್ಲಿ ಜನ ಸಮೂಹವು ಅವರ ರ್ಥಿವ ಶರೀರವನ್ನು ಸ್ವಾಗತಿಸಿತು. ವಿರಾಜಪೇಟೆಯ ಮುಖ್ಯ ಬೀದಿಗಳಲ್ಲಿ ಮೆರವಣಿಗೆಯಲ್ಲಿ ಸಾಗಿದ ಜನಸ್ತೋಮವು ಪೆಮ್ಮಂಡ ಕುಟುಂಬದ ್ ಮನೆಗೆ ತಲುಪಿ ಸಕಲ ಮಿಲಿಟರಿ ಗೌರವದೊಂದಿಗೆ ಅಂತಿಮ ನಮನವನ್ನು ಸಲ್ಲಿಸಿತು. ಈ ಸಂದರ್ಭದಲ್ಲಿ ಕೊಡಗಿನ ಜಿಲ್ಲಾಧಿಕಾರಿಗಳಲ್ಲದೆ, ೀಲಿಸ್ ಅಧಿಕಾರಿಗಳು, ಮಿಲಿಟರಿ ಅಧಿಕಾರಿಗಳು ಮಾಜಿ ಶಾಸಕರು, ಸಂಘ ಸಂಸ್ಥೆಗಳ ಅಧ್ಯಕ್ಷರು ಅಲ್ಲದೇ ಶಾಸಕರಾದ ದಂಬೆಕೊಡಿ ಮಾದಪ್ಪ ತ್ತು ಬಸವರಾಜುರವರು ಹಾಜರಿದ್ದರು.

ಹೆಚ್. ವಿ. ವೆಂಕಟ : ಜುಲೈ ತಿಂಗಳ ಆರನೇ ತಾರೀಖಿನಂದು ದೇಶದ ಕಾರ್ಗಿಲ್‌ನಲ್ಲಿ ಭೀಕರ ಹೋರಾಟ. ಮದ್ದುಗುಂಡುಗಳ ್ಚರವಿಲ್ಲದೆ ಶತ್ರು ಪಾಳೆಯದ ಮೇಲೆರಗಿ ಮುಖಾಮುಖಿ ಹೋರಾಟ. ಈ ಅಂತಿಮ ನಿರ್ಣಾಯಕ ಹೋರಾಟದಲ್ಲಿ ಕೊಡಗಿನ ಇನ್ನೊಬ್ಬ), ಪಾಲಿಬೆಟ್ಟದ ನಿವಾಸಿ, ಹೆಚ್. ವಿ. ವೆಂಕಟ ತನ್ನ ಆತ್ಮವನ್ನು ದೇಶಕ್ಕಾಗಿ ಬಲಿದಾನ ಗೈದಿದ್ದಾರೆ. ಇವರಿಗೆ ಮೂವತ್ತೊಂದು ವರ್ಷ ್ರಯವಾಗಿತ್ತು.

ಮೂಲತಃ ಪಾಲಿಬೆಟ್ಟ ನಿವಾಸಿಯಾದ ಇವರ ತಂದೆ ವೆಂಕಟಗಿರಿಯವರು ಹಾಸನದ ರಾಮನಾಥಪುರದ ಅಗ್ರಹಾರದಲ್ಲಿ ನೆಲೆ ನಿಂತರು. ಂಕಟರ ಪತ್ನಿ ನೀಲಮ್ಮ ಕುಶಾಲನಗರದ ಸನಿಹದ ಮಾದಾಪಟ್ನದಲ್ಲಿ ನೆಲೆಸಿದ್ದು ಸುಂಠಿಕೊಪ್ಪ ಹೇರೂರು ಪ್ರಾಥಮಿಕ ಶಾಲೆಯಲ್ಲಿ ್ಷಕಿಯಾಗಿದ್ದಾರೆ. ಶ್ರೀಯುತರು ಹದಿನಾರು ವರ್ಷದ ಹಿಂದೆ ಸೇನೆಗೆ ಸೇರಿದ್ದರು. ಅತೀ ಬಡ ಕುಟುಂಬದಲ್ಲಿ ಬೆಳೆದು ಬಂದ ಇವರಿಗೆ ಓರ್ವ ಹೋದರ, ಗೋವಿಂದರಾಜು, ಸಿ.ಆರ್. ಪಿ. ಎಫ್. ಪಡೆಯಲ್ಲಿ ಯೋಧರಾಗಿದ್ದಾರೆ. ವೆಂಕಟರ ಮಗ ಕಿರಣ್, ಮಗಳು ಕಾವ್ಯ ಮತ್ತು ್ಬರು ಸಹೋದರರು ಮತ್ತು ಓರ್ವ ಸಹೋದರಿಯನ್ನು ಅಗಲಿದ್ದಾರೆ.

ಕಾರ್ಗಿಲ್ ಕಾರ್ಯಾಚರಣೆಯಲ್ಲಿ ಪಾಕ್ ಅತಿಕ್ರಮಣಕಾರರನ್ನು ಮುಖಾಮುಖಿ ಹಿಮ್ಮೆಟ್ಟಿಸುವಲ್ಲಿ ಜುಲೈ ಆರರ ಸಂಜೆ ಐದು ಗಂಟೆ ಳೆಗೆ ವೆಂಕಟ ಶತ್ರುಗಳ ಗುಂಡೇಟಿಗೆ ಗುರಿಯಾದರು. ಶ್ರೀನಗರದಿಂದ ವಿಮಾನದಲ್ಲಿ ರವಾನಿಸಲ್ಪಟ್ಟ ಪಾರ್ಥಿವ ಶರೀರವು ಬೆಂಗಳೂರಿನಿಂದ ಮನಾಥಪುರಕ್ಕೆ ಸೇನಾ ಪಡೆಯ ಸಕಲ ಮರ್ಯಾದೆಯೊಂದಿಗೆ ಆಗಮಿಸಿತು. ರಾಮನಾಥಪುರದಲ್ಲಿ ಕಿಕ್ಕಿರಿದು ತುಂಬಿದ ಜನಸ್ತೋಮ ಪಾರ್ಥಿವ ೀರವನ್ನು ಬರಮಾಡಿಕೊಂಡಿತು. ಗಡಿಭದ್ರತಾ ಪಡೆಯ ಪರವಾಗಿ ಕಮಾಡೆಂಟ್ ಉಳ್ಳಿಯಡ ಸುಬ್ರಮಣಿ ಪುಷ್ಪಗುಚ್ಛವಿರಿಸಿ ತ್ರಿವರ್ಣ ಧ್ವಜವನ್ನು ೊದಿಸಿ ನಮಿಸಿದರು. ಹಾಸನ ಜಿಲ್ಲಾ ಉಸ್ತುವಾರಿ ಸಚಿವ. ಎಚ್. ಡಿ. ರೇವಣ್ಣ ಅಂತ್ಯಕ್ರಿಯೆ ಸಮಯದಲ್ಲಿ ಹಾಜರಿದ್ದರು.

ಟ್ಟಿಕಂಡ ಹೆಣ್ಣ್‌ನ ಬುಟ್ಟಂಗೆ ಆತ್

ಮೊನ್ನೆ ಪೋಸ್ಟ್‌ಲೀ ಬಂದ ಕೊಡಗು ಸಂಗಾತಿನ ಓದಿಕಂಡಿರ್‌ಕನ ಒಬ್ಬ ನಮ್ಮವು ನನ್ನ ಹತ್ತಿರ ಬಂದ್ ಕೇಳ್ತ್ ಏನ್‌ವಿಷ್ಯ ಉಟ್ಟುತಾ ು ಕೇಳ್‌ದೆ ನಂಗೆ ಬಾತ್‌ಲೇ ತಾ. ಅಂವ ಹೇಳ್ತ್ ಒಂದು ವರುಷಂದ ದುಡ್ಡು ಕಳಿಸಿತ್‌ಲೆ ಅದಿಕ್ಕೆ ಬಾಲೆ ಕಂಡದೆ ತಾ ನಾ ಆಗ ಅವಂಗೆ ೀಳ್‌ದೆ ಕಟ್ಟಿ ಕಂಡ ಹೆಣ್ಣ್‌ನ ಒಂದೇ ವರುಷಲಿ ಬುಟಂಗೆ ಆತಲತಾ ಆಗ ಅವಂಗೆ ತಿರುಗಿ ಮಾತಡಿಕೆ ನಾಲಿಗೆಲಿ ಪಸೆ ಇಲ್ಲೆ. ನಮ್ಮವು ಂದಾರರಾಗಿ ಪುಸ್ತಕನ ತರಸಿಕಂಡ್ ಸ್ವಲ್ಪ ದಿನದವರೆಗೆ ಓದುವೇ ಮತ್ತೆ ಅದರ ಬಗ್ಗೆ ಇಷ್ಟಪಡುದುಲೇ ತರಿಸಿದ ಮೇಲೆ ಅದನ್ನ ಕೊನೆಯವರೆಗೆ ್ರರೈಸಿಕೆ ಏನ್ ಕೇವಲ 120 ರೂ. ತಾನೇ ಎಲ್ಲಿ ಹೋದೆ ಎಲ್ಲಿ ಬಂದೆ ನಮ್ಮ ಅರೆಭಾಷಿಕ ಉಟ್ಟು ಅಲ ತಾ ನಮ್ಮ ಹೃದಯದಲ್ಲಿ ಅಳವಡಿಸಿದರೆ ಾತ್ರ ಇದು ಶಾಶ್ವತವಾಗಿ ಉಳಿಯಕ್ಕೆ ಕಾರಣ ಬಾಯಿಲಿ ಹೇಳ್‌ದಂಗೆ ಆದುಲೆ ಹೀಂಗೆ ಕೆಲವು ಜನ ಗಮನೀಯವಾಗಿ ಯೋಚಿಸದಿದ್ದಲಿ ಅದ್ ೊಲೆ ಸೇರಿಕಾದೆ ಪ್ರತಿಯೊಬ್ಬ ಗೌಡನಾದವ ಇದರಲಿ ಸಹಕರಿಸಲಿತ ನನ್ನ ಪ್ರಾರ್ಥನೆ.

ತೆಕ್ಕಡೆ ಬಿ. ರಘುನಾಥ, ಮುತ್ತಾರ್‌ಮುಡಿ

ಪಾಚುನ ರಾತ್ರಿ ಬೇಟೆ

ಈ ಮಳೆಗಾಲಲಿ ಯಾಗೊಳು ಸೋಂತೆಕಾಯಿ ಗೈಪು, ಹಲಸ್ನಕ್ಕಿ **ಪೊಜ್ಜಿ ತಿಂದ್** ತಿಂದ್ ಸಾಕಾಗೋವುಟು. ನಾಳೆ ಕಂಬಳ ನಾಟಿಗೆ **ಎಂತಾದರ್** ಗದ್ದಾಳ ಮಾಡೊಕುತ ಆತ್ ಪಾಚುಗೆ, ಯಾವದೇ ಕೆಲ್ಸ **ಆದರೂ** ಸರಿ ಒಮ್ಮೆ ಮನ್ಸ್ ಮಾಡ್ತೇತೇಳ್ರೆ ಮತ್ತೆ ಆ ಕೆಲ್ಸ **ಪೂರ್ಮೈಸುವವರೆಗೂ** ಹಿಡ್ದ ಹಟನ ಬುಡದೇ ಇರುದು ಅವನ ಸ್ವಭಾವ. **ಎರ್ಡ್** ದಿನಂದ ಮಳೆನೂ ಒಸಿ ಕಮ್ಮಿ ಆಗಿರುದರ್‌ಂದ ರಾತ್ರಿ ಲೈಟ್ **ತಕಂಡ್ ಹೋ**ಕೆ ಕಷ್ಟ ಏನೂ ಇಲ್ಲೆ. ಆದರೆ ಈ ಉಂಬಳುಗಳ ಕಾಟ **ಉಟ್ಟಲೆ?** ಆದಾದರೂ ಪರವಾಗಿಲ್ಲೆ ಕಾಲಿಗೆ ಲಾಯಿಕ ಕಾಚುಳಿ **ತಿಕ್ಕಿಕಂಡ್ರೆ** ಹೆಂಗೋ ಬಚಾವಾಕ್ಕ್. ಇನ್ನ್ ಅಪ್ಪ, ಅವ್ವ ಪಿರಿ ಪಿರಿ **ತೇಳಿಕಂಡಿದ್ದ**ವೆ. ಏನಾದರ್ ಆಗಲಿ ಇಂದ್ ರಾತ್ರಿ ಮಾತ್ರ ಲೈಟ್ **ತಕಂಡ್ ಹೋ**ಗೇಹೋಕುತ ಮನ್ಸ್‌ಲಿ ಗ್ಯಾನಮಾಡಿಕಂಡ್ತ್.

ರಾತ್ರಿ ಊಟ ಮಾಡಿ ಎಲ್ಲವು ಮಲ್ಗಿಕೆ ಹೋದ ಮೇಲೆ **ಕೊತ್ತಿನಂಗೆ** ಮೆಲ್ಲೆ ಅಡಿಗೆ ಮನೆಗೆ ಬಂದ ಪಾಚು ಕತ್ತಲೆಲಿ **ತಬ್ಬುರ್ಸಿಕಂಡ್** ಬೆಸಿಗೆಲಿ ತೋಟದ ಡಬ್ಬಿನ ಹುಡ್ಕಿತ್. ಆಗ ಅಲ್ಲೇ **ಕರೇಲಿದ್ದ** ಮೆಣ್ಸ್‌ನ ಹುಡಿ ಡಬ್ಬಿಗೆ ಕೈ ತಾಗಿ, ಅದ್ ದಡಬಡಾತ **ಹೊಣ್ಕಿ ಒಲೆ** ಮೇಲೆ ಬೀತ್. ಬೂದಿ ಮುಚ್ಚಿಕಂಡಿದ್ದ ಕೆಂಡದ ಮೇಲೆ **ಮೆಣ್ಸ್‌ನ** ಹೂಡಿ ಬಿದ್ದಾಕನ ಕಾರದ ಹೊಗೆ ಏಳಿಕೆ ಸುರಾತ್. ಆ **ಹೊಗೆಲಿ ಉಸು**ರಾಡಿಕೆ ಬೊತ್ತದೆ ಕೆಮ್ಮಿಕಂಡ್ ಇದೊಂದು ಪರ್ದೇಶಿ **ಡಬ್ಬಿ** ಎಲ್ಲಿತ್ತ್ತೋ ತೇಳಿ ಅದರ್ನ ಎತ್ತಿ ಒಂದು ಕರೆಗೆ ಕುಕ್ಕಿಬುಟ್ಟು, **ಚೊಂಬುಲಿ** ನೀರ್ ತೆಗ್ದ್ ಕೆಂಡದ ಮೇಲೆ ಹೊಯ್ದ್ ಬೆಂಕಿ ಕೆಡ್ಸಿತ್.

ಕೊತ್ತಿ ಬಂದ್ ಅನ್ನದ ಮಡ್ಕೆನ ಮೊಗ್‌ಚ್ಹಾವುಟ್ಟು ಕಂಡದೆತ **ಗ್ಯಾನ ಮಾಡಿ** ಅವ್ವ ದೀಪ ತಕಂಡ್ ಬಂದ್ ನೋಡ್ರೆ ಪಾಚು ಹೈದ **ಒಲೆ ಕರೆಲಿ** ಕಣ್ಣುಜ್ಜಿಕಂಡ್ ನಿತ್ತುಟ್ಟು! ನೀ ಎಂತನೇ ಈ ಕತ್ತಲೆಲಿ **ತುಡುಗುದುತ** ಅವ್ವ ಜೋರು ಮಾಡ್ತ್. ಕೊಲ್ಲಿ ಕರೇಲಿರುವ ಹಲಸ್ನ **ಮರಕೆ,** ದಿನಾ ಬೆಕ್ಕ್ ಬರ್ತಾವುಟ್ಟವ್ವ, ಹೋಗಿ ನೋಡಿಕಬನ್ನೆತ ಮೆಲ್ಲೆ **ಹೇಳ್ತ್. ಈ** ಮಳೆಗಾಲಲಿ ಎಂತ ಸುಟ್ಟ ಬೇಟೆನೇ ನಿಂದ್? ಅದೂ **ಅಲ್ಲದೆ ನಾ**ಳೆ ಕಂಬಳ ನಾಟಿ ಇರ್ಕನ? ಹೂಡಿಕೆತೇಳಿ ಹೊತಾರೆ **ನೆರೆಮನೆವು** ಎತ್ತ್ ಹೊಡ್ಕಂಡ್ ನಮ್ಮ ಗದ್ದೆಗೆ ಬರುವ ಹೊತ್ತುಲಿ, **ರಾತ್ರಿಯೆಲ್ಲಾ** ನಿದ್ದೆಗೆಟ್ಟ್ ತಿರ್ಗಿದ ನೀನ್ ಮಲ್ಗಿ ನಿದ್ದೆ ಮಾಡ್ತಾ **ಇರುವಾ. ಬೇ**ಟೆನೂ ಬೇಡ. ಎಂತದೂ ಬೇಡ ಸುಮ್ಮಂಗೆ ಹೋಗಿ **ಬೀಳ್‌ತ** ಗದ್‌ರ್ಸಿತ್.

ಅವ್ವನ ಮಾತ್ ಕೇಳಿ ಹುಸಿನೆಗೆ ನೆಗಾಡಿಕಂಡ್ ತುಂಬಾ ದೂರ **ಹೊದುಲೆವ್ವ**, ಆ ಹಲಸ್ನ ಮರನ ನೋಡಿಕಂಡ್ ಬೇಗ ಬಂದ್‌ಬುಟ್ನೆ. **ಹೊತಾರೆ** ಎತ್ತ್ ಇಳ್ಸುವ ಹೊತ್ತಿಗೆ ಎಲ್ಲವುಕ್ಕಿಂತ ಮುಂದೆ ನಾನ್ ಗದ್ದೆಲಿ **ಇದ್ದರೆ ಸಾಕ**ಲೆ? ತೇಳಿ ಪಾಚು ಹಿತ್ಲ್ ಬಾಗ್ಲ್ ತೆಗ್ದ್ ಹೊರಗೆ ಹೋತು.


ಸುಮಾರ್ ಹೊತ್ತು ಸುತ್ತಿರೊ ಪಾಚುಗೆ ಎಲ್ಲೂ ಒಂದೇ **ಒಂದು ಕಣ್ಣ್** ಕಾಂಬಕೆ ಸಿಕ್ಕಿತ್ಲೆ. ಬೇಗ ಮನೆಗೆ ಹೋಕುತ ಒಂದು **ಕಡೆಗ್ಯಾ**ನ ಇದ್ದರೆ, ಏನೇ ಆದರೂ ಇಂದ್ ಬರಿಕೈಲಿ ಮಾತ್ರ ವಾಪಸ್ಸ್ **ಹೋಕಾಗದ್**ತೇಳುವ ಹಟ ಇನ್ನೊಂದು ಕಡೆಗೆ. ಅಂತೂ ಕಡೆಗೂ **ಕುರ್ಕಿಲ್** ಕಾಡೊಳಗೆ ಬಾಕನ ದೂರಲಿ ಪಿಳಿಪಿಳಿ ಕಣ್ಣ್ ಕಂಡತ್. **ಚೂರುಲಿ** ಹೊಡ್ದರೂ ಈ ಗಿಡಗಳ ಎಡೆಲಿ ತಾಗ್‌ಕಿಲ್ಲೆ. ಹಂಞ **ಮುಂದೆ ಹೋ**ದು ಒಳ್ಳೆದ್‌ತ ಗ್ಯಾನಮಾಡಿಕಂಡ್, ಅದರ ಕಣ್ಣ್‌ಂದ
ಲೈಟ್ ತಪ್ಪುಸದಂಗೆ ಕುರ್ಕಿಲ್ ಗಿಡಗಳ ಸೆರೆಲಿ ಮೆಲ್ಲೆ ಹರ
ಹೋದಂಗೆ ಹೋತು. ನಾಕ್ ಹೆಜ್ಜೆ ಮುಂದೆ ಹೋಕನ
ತೋರ್ಸ್ತಿದ್ದ ಜಾತಿ ಗುರ್......ತ ಬಾಯಿ ಬುಟ್ಟ್‌ಕಂಡ್
ನಿಲ್ಲ್‌ಕನ ಪಾಚುಗೆ ಒಮ್ಮೆಗೇ ಜೀವ ಹಾರಿ ಹೋದಂಗೆ
ಸುಮಾರ್ ನಾಲ್ಕೈದ್ ಅಡಿ ಎತ್ತರದ ಹೆಬ್ಬುಲಿ ! ಈ ಕಾಡ್‌ಲಿ
ಇರ್‌ದುತ ಅಂವ ಕನ್ಸ್‌ಮನ್ಸ್‌ಲೂ ಗ್ಯಾನ ಮಾಡಿತ್ಲೆ. ಇದುವ
ಕಾಡ್‌ಲಿ ಹುಲಿ ಕಂಡವನೇ ಅಲ್ಲ. ಅದೂ ಅಲ್ಲದೆ ಲೈಟ್ ಬೆಳ್
ಹುಲಿಕಣ್ಣ್ ಕೆಂಪು ಕೆಂಡದಂಗೆ ಕಂಡದೆತ ಹೇಳುದರ್ನ ಕೇಳಿತ್ತ್.
ಇದರ ಕಣ್ಣ್ ಅಷ್ಟ್ ಕೆಂಪು ಇಲ್ಲದೆ ಒಂತರಾ ಅರ್ಸಣ ಬಣ್ಣ
ಹಂಗಾಗಿ ಹುಲಿತೇಳುವ ಸಣ್ಣ ಅನುಮಾನ ಸನ ಅವಂಗೆ
ಕುರಿನೋ, ಬೇರೆ ಎಂತದೋ ಜಾತಿ ಇರೊಕುತ ಗ್ಯಾನ ಮಾಡಿ
ಬಂದರೆ ಈಗ ಅವನ ಕತೇ ಮುಗಿಯುವಂಗೆ ಆತ್. ಹೆದ್
ಅವನ ಮೈಯೆಲ್ಲ ಬಿಸಿಯಾಗಿಕೈಕಾಲ್ ನಡ್‌ಗಿಕೆ ಸುರಾತ್. ಕೈ
ಕೋವಿ ಮತ್ತೆ ಲೈಟ್ ಇವನಿಗಿಂತ ಹೆಚ್ಚಿ ಹೆದ್‌ರಿ ಹೋಗಿ
ಏನೋ! ಅವೆರ್ಡೂ ಇವನ ಕೈ ಬುಟ್ಟ್ ಎತ್ತ ಹಾರಿಬುಟ್ಟೊ
ಕತ್ತಲೆಲಿ ಗೊತ್ತಾತ್ಲೆ. ಅಲ್ಲಿಂದ ಓಡಿಕೆ ಆಗದೆ ಒಮ್ಮೆಗೆ ಹತ್ರ
ಮರನ ಹತ್ತಿಬುಡ್ತ್.

ಹೊತಾರೆ ಕೋಳಿ ಕೂಗುತ್ತಿದ್ದಂಗೇ ಎದ್ದ್ ಬಂದ ಅ
ಪಾಚು ಹೈದ ಹಾಸಿಗೆಲಿ ಇಲ್ಲದಿರುದರ್ನ ಕಂಡ್ ಗಾಬರಿ ಆತ್.
ಕೋವಿ ತಕಂಡ್ ಹೋದ ಹೈದ ಇನ್ನೂ ಬಾತ್ಲೆ. ಒಮ್ಮೆ ಹ
ನೋಡಿಕಬನ್ನಿತ ಹೇಳ್ಕನ ಪಾಚುನ ಅಪ್ಪ. ಅಂವ ಕಡವೆನೆ
ಹಂದಿನೋ ಯಾವ್ದಾದರ್ ದೊಡ್ಡ ಜಾತಿ ಹೋಡ್ದಿರ್ದುನೇ. ಕತ್ತ
ಹೊತ್ತ್‌ಕಂಬಾಕೆ ಬೊತ್ತದೆ ಬೆಳಗಾಗಲಿತ ಪಾರಕಾದ್‌ಕಂಡ್ ಅ
ಕುದ್ದಿರ್‌ದು. ನೀನ್ ಮಸಾಲೆ ಕಡ್ದ್ ಮೊಡ್ಗ್. ಅಷ್ಟೊತ್ತಿಗೆ
ಮಂಜ ಬಂದೆತ್ತಿದೆ. ಪುರ್ಸೊತ್ತಿಲ್ಲದ ಕೆಲ್ಸ ಇರುವ ಸಮಯಲಿ ಇ
ಬೇಟೆದ್ ಹುಚ್ಚು. ಇವೆಲ್ಲ ಬದ್ಕ್ ಮಾಡ್‌ಕೆ ಇರೊವಾ? ತ ಗ
ಕಂಡೇ ಹಟ್ಟಿಗೆ ಹೋಗಿ ಎತ್ತ್‌ಗಳ ಹೊಡ್ಕಂಡ್ ಗದ್ದೆಗೆ ಹೋ

ಬೊಳಿಬುಟ್ಟ ಮೇಲೇ ಪಾಚುಗೆ ಗೊತ್ತಾದ್ ರಾತ್ರಿ
ಹತ್ತಿದ್ ಮುಳ್ಳು ಕಕ್ಕಡೆ ಮರ ತೇಳ್ದು. ರಾತ್ರಿಯೆಲ್ಲ ಹೆದ್ರಿಕೆಲಿ ಅ
ಮೈ ಮರಗಟ್ಟಿಹೋದಂಗೆ ಆಗಿತ್ತ್. ಹಂಗಾಗಿ ಎಂತದೂ ಗೊತ್ತಾ
ಈಗ ನೋಡ್ರೆ ಮೈಕೈ ಎಲ್ಲ ಮುಳ್ಳು ಚುಚ್ಚಿ ರಕ್ತಸೋರಿ ಹೆಪ್ಪುಗಟ್ಟಿ
ರಾತ್ರಿ ಹೆಂಗೋ ಹತ್ತಿಬುಡ್ತ್. ಆದರೆ ಈಗ ಅಲ್ಲಿಂದ ಇಳಿಯಕೆ ವ
ಆಗುವಂಗಿಲ್ಲೆ. ಹತ್ರಲಿದ್ದ ನೇರಳ ಮರದ ಕೊಂಬೆ ಇಂವ ಕುದ್ದ ವ
ತಾಗುವಂಗೇ ಇತ್ತ್. ಅದರ್ನ ಹಿಡ್ದ್ ಅತ್ತ ದಾಬಿಬುಟ್ಟು ಅಲ್ಲಿ
ಅಡಿಗೆ ಇಳಿಯುವ ಉಪಾಯ ಮಾಡ್ತ್. ಎಡೆಬುಡದಂಗೆ ಕುರ್ಕಿ
ಗಿಡಗ ಬೆಳ್ದಿದ್ದರ್‌ಂದ ಕೊಡಿಂದ ನೋಡ್ರೆ ನೆಲ ಕಾಂಬತಿತ್ಲೆ. ಹಂ
ಹುಲಿ ಇನ್ನೂ ಅಲ್ಲೇ ಉಟ್ಟಾ, ಇಲ್ಯಾತೇಳ್ದೂ ಗೊತ್ತಾತ್ಲೆ. ಕೋ
ನಿತ್ತ್‌ಕಂಡೇ ನಾಲ್ಕೈದ್ ಸಲ ಚೊಕೂಡ್ಸಿತ್ ಕೊಂಬೆನ ಹಿ
ಜೋರಾಗಿ ಕುಲುಗಿಸಿ ಸದ್ದ್ ಮಾಡ್ತ್. ಅಡಿಲಿ ಎಂತ ಸದ
ಕೇಳದರ್‌ಂದ ಹುಲಿ ಇರ್ಕಿಲ್ಲೆತ ಆತ್. ಅಂತೂ ಹೆದ್ರಿಕಂಡೇ ಮ
ಮರಂದ ಇಳ್ದ್‌ಬುಟ್ಟು ಅಡಿಲಿ ಬಿದ್ದಿದ್ದ ಲೈಟ್ ಮತ್ತೆ ಕೋ
ಎತ್ತಿಕಂಡ್ ಹಿಂದಕೆ ತಿರ್ಗಿ ತಿರ್ಗಿ ನೋಡಿಕಂಡ್ ನೋಡಿಕಂಡ್ ಮನೆ
ಓಡಿಬಾತ್.

ಚಾಂಗನ ಸಿ. ಪೂವಯ್ಯ, ಮೊಣ್ಣಂಗೇ

ಗೌಡ ಮಹಿಳಾ ಒಕ್ಕೂಟದ ಪ್ರಬಂಧ ಸ್ಪರ್ಧೆಯಲ್ಲಿ ತೃತೀಯ ಬಹುಮಾನ ಪಡೆದ ಲೇಖನ : ಗೌಡ ಸಂಸ್ಕೃತಿ : ಅಂದು, ಇಂದು, ಮುಂದೆ.



ನಾಟೋಳನ ದೇವಯ್ಯ ಮಾದಯ್ಯ
ಬಾಳುಗೋಡು, ಗುಡ್ಡೆ ಹೊಸೂರು

ಅರೆಭಾಷೆ ಗೌಡರ ಸಂಸ್ಕೃತಿಯು ಪತನದ ಅಂಚಿನಲ್ಲಿದೆಯೇ? ಎಂಬ ಚಿಕ್ಕ ಪ್ರಶ್ನೆ ಎಲ್ಲರಲ್ಲೂ ಇದೆ. ಆದರೆ ಇದನ್ನು ಹೊರಗೆಡಹಲು ಯಾರೂ ತಯಾರಾಗಿಲ್ಲ. ನಾಗರೀಕಥೆ ಮುಂದುವರಿದಾಗ ಸಂಸ್ಕೃತಿಯನ್ನು ಕಡೆಗಣಿಸುವುದು ಆಯಾ ಜನಾಂಗದ ಏಳಿಗೆಗೆ ಯೋಗ್ಯವಲ್ಲ. ಗೌಡಸಂಸ್ಕೃತಿಯು ಈಗಿನ ಮಟ್ಟಕ್ಕೆ ಜನಾಂಗದ ಯುವಪೀಳಿಗೆಗಳು ಹಾಗೂ ಶ್ರೀಮಂತ ಗೌಡರೇ ಕಾರಣ ಎಂದರೂ ಅತಿಶಯೋಕ್ತಿ ಆಗಲಿಕ್ಕಿಲ್ಲ.

ಅಂದು ಸಂಸ್ಕೃತಿ ಹೇಗಿತ್ತು - ಇಂದು ಹೇಗಾಗಿದೆ - ಮುಂದೆ ಏನಾಗಬಹುದು. ಇದಕ್ಕೆ ಯಾರು ಹೊಣೆ. ವ್ಯಕ್ತಿಗಳೋ? ಜನಾಂಗವೋ? ಯುವಕರೋ? ಯುವತಿಯರೋ? ಹಲವು ಹತ್ತು ವರ್ಷಗಳ ಹಿಂದಿನ ಸಂಸ್ಕೃತಿಯನ್ನು ಇಂದಿನ ಬುದ್ಧಿವಂತ ಜನಾಂಗದ ವಯಸ್ಕರನ್ನು ವಿಚಾರಿಸಿದರೆ ಹೇಗಿತ್ತು ಎಂಬುದನ್ನು ತಿಳಿಯಬಹುದು. ಅಂದಿನ ದಿನಗಳಲ್ಲಿ ಐನ್ ಮನೆಯಲ್ಲಿ ಇರುವ ಹಿರಿಯ ಪಟ್ಟೇದಾರ ಎಂದು ಯಾರನ್ನು ನಾವು ಹೇಳುತ್ತೇವೆಯೋ ಅವರೇ ಪ್ರತಿಯೊಂದಕ್ಕೂ ರೂವಾರಿ. ಹಾಗೇ ಆತನ ಪತ್ನಿಯೇ ಪ್ರತಿಯೊಂದು ಸಮಾರಂಭಗಳಲ್ಲಿ ಮುಖ್ಯ ಪಾತ್ರ ನಿರ್ವಹಿಸುತ್ತಿದ್ದಳು. ಉದಾ : ಹುತ್ತರಿ ಹಬ್ಬದಲ್ಲಿ ಪಟ್ಟೇದಾರ ಮನೆಯವರಿಗೆ ನಿರ್ವಹಿಸಿದ ಕೆಲಸಗಳನ್ನು ಎಲ್ಲರೂ ಚಾಚೂ ತಪ್ಪದೆ ನಡೆಸುತ್ತಿದ್ದರಂತೆ. ಪಟ್ಟೇದಾರನೇ ತಾನೇ ಅಥವಾ ತನ್ನ ಅಪ್ಪಣೆ ಮೇರೆ ಬೇರೆ ಯಾರಾದರೂ ಕದಿರುಗುತ್ತಿ ಹೊತ್ತು ಕಂಚಿಮಿಯನ್ನು ಮುಂದಿಟ್ಟು ಕದಿರು ಕೊಯ್ದು ಮನೆಗೆ ತಂದು ದೇವರಿಗೆ ಕದಿರುಕಟ್ಟಿ ಮನೆಸರ್ವರೂ ಅನ್ಯೋನ್ಯ ರೀತಿ ಕೈಕಾಲು ಹಿಡಿದು ಆಶೀರ್ವಾದಗಳನ್ನು ಪಡೆದು ಒಟ್ಟಿಗೆ ಸಹ ಭೋಜನ ಮಾಡುತ್ತಿದ್ದರಂತೆ. ಆದರೆ ಇಂದು ಏನಾಗಿದೆ. ನಾಗರೀಕಥೆಯಿಂದಲೋ, ಜನಸಂಖ್ಯಾ ಸ್ಫೋಟದಿಂದಲೋ, ಇಲ್ಲ ಸಂಸಾರದಲ್ಲಿನ ಶ್ರೀಮಂತ ಬಡವರಿಂದಲೋ ವಿಭಿನ್ನವಾಗಿದೆ. ಐನ್ ಮನೆಯಲ್ಲಿ ಗುಂಪುಗಾರಿಕೆ ಮಾಡಿ ಎರಡು ಮೂರು ಭಾಗಗಳು ಸೇರಿಕೊಂಡು ಕದಿರುಕೊಯ್ದು ಅವರಿಷ್ಟಕ್ಕೇ ಭೋಜನ ಇತ್ಯಾದಿ ಮಾಡುತ್ತಾರೆ. ಹೀಗೆ ಮುಂದುವರಿದರೆ ಮುಂದೊಂದು ದಿನ ಈ ಸಂಪ್ರದಾಯ ಮರೆತೇ ಹೋದೀತೇನೋ.

ಕೊಡಗು ಗೌಡ ಸಂಸ್ಕೃತಿಯು ವಿವಾಹ ಸಂದರ್ಭಗಳಲ್ಲಿ ಸಂಸ್ಕೃತಿ ವಿರೋಧ ಚಟುವಟಿಕೆಯಲ್ಲಿ ಸಾಗಿದೆ. ಇದನ್ನು **ಸರಿ** ಪಡಿಸುವವರಾರು? ಓದುವುದು ಶಾಸ್ತ್ರ, ಹಾಕುವುದು ಗಾಳ ಈ **ರೀತಿ** ಆಗಿದೆ ಇಂದಿನ ಮದುವೆ (ವಿವಾಹ) ಸಂಸ್ಕೃತಿ. ಏಕೆ ಹೀಗಾಯ್ತು. ಯಾರಿಂದ ಹೀಗಾಯ್ತು. ಇದಕ್ಕೆ ಉತ್ತರ ಕಂಡುಕೊಳ್ಳುವುದು ಕಷ್ಟವಾದೀತು. ಆದರೂ ಬುದ್ಧಿ ಜೀವಿಗಳಾದ ಜನಾಂಗದ ಹಿರಿಯರಲ್ಲಿ ವಿಚಾರವಿನಿಮಯ ಮಾಡಿಕೊಂಡರೆ ಇದಕ್ಕೆ ಉತ್ತರ ಹಾಗೂ ಪರಿಹಾರ ಸಿಗಬಹುದು. ಅಂದು ವಿವಾಹದ ವಿಚಾರದಲ್ಲಿ ವಿವಾಹ ನಡೆಸುವ ಮನೆಯ ಯಜಮಾನ ಯಾರಿಗೆ ಅಧಿಕಾರ ಕೊಟ್ಟಿರುತ್ತಾರೋ ಇಂದು ನಾವೇನು ಮುಖ್ಯಸ್ಥ ಎಂದು ಕರೆಯುತ್ತೇವೋ ಅವನದ್ದೇ ಪ್ರತಿಯೊಂದು ಚಟುವಟಿಕೆಗಳಲ್ಲಿ ಮುಖ್ಯ ಪಾತ್ರ. ಅವನ ಹೇಳಿಕೆಯೇ ಅಂದು ಗೌರವ. ಇಂದಿನ ಮದುವೆ ಸಂಸ್ಕೃತಿ ಹೇಗಾಗಿದೆ ಎಂದರೆ ನುರಿತ ಆಚಾರ ವಿಚಾರ ತಿಳಿದ ಸಂಪ್ರದಾಯಸ್ಥರಿಗೆ ಹೇಸಿಕೆ ತರುವಂತಾಗಿದೆ.

ವಿಳ್ಯಶಾಸ್ತ್ರ, ಲಗ್ನಪತ್ರಿಕೆ ಆಗುವ ದಿನದಂದು ವಿವಾಹ ಆಗುವ ಹುಡುಗಿ ಇರಲೇಬೇಕು. ನೆಲ್ಲಕ್ಕಿ ದೀಪದ ಅಡಿಯಲ್ಲಿ ಸೀರೆ ಉಟ್ಟು ನಿಂತು ವಿಳ್ಯಶಾಸ್ತ್ರದ ವೀಳ್ಯವನ್ನು ಇಟ್ಟು ಸೇರಿದವರಿಂದ ಆಶೀರ್ವಾದ ಪಡೆಯುವ ಪದ್ಧತಿ ಇತ್ತು. ಆದರೆ ಇಂದು ಹುಡುಗಿ ಇಲ್ಲದೆಯೂ ಈ ಪದ್ಧತಿ ಆಚರಿಸುತ್ತಿದ್ದಾರೆ. ಈಗೀಗ ಹೋಟೆಲುಗಳಲ್ಲಿ ಸಮಾಜಗಳಲ್ಲಿ ವಿಳ್ಯ ಶಾಸ್ತ್ರ ನಡೆಯುವ ಕಾರಣದಿಂದ ಈ ರೀತಿ ಆಗುತ್ತಿರಬಹುದೆ? ವಿವಾಹ ಆಗುವ ಹುಡುಗ ವಿಳ್ಯ ಶಾಸ್ತ್ರಕ್ಕೆ ಹೋಗುವುದು ಅಂದು ನಿಷಿದ್ಧ. ಆದರೆ ಇಂದು ಯಾರ ಅಡ್ಡಿ ಇಲ್ಲದೇ ಹೋಗಬಹುದಾಗಿದೆ.

ಮದುವೆ ಚಪ್ಪರ ಸಮಾರಂಭಗಳಲ್ಲಿ ಸಂಸ್ಕೃತಿ, ಸಂಪ್ರದಾಯಕ್ಕಿಂತ ಮದ್ಯಪಾನಕ್ಕೆ ವಿಶೇಷತೆ ಕೊಟ್ಟಿದ್ದಾರೆ. ಯಾವ ಮದುವೆ ಚಪ್ಪರದಲ್ಲಿ ಹೆಚ್ಚು ಶೀಷೆಗಳು ಖಾಲಿಯಾಗಿದೆಯೋ ಅದು ತುಂಬಾ ಗ್ರ್ಯಾಂಡ್ ಸಮಾರಂಭ. ನಂತರ ಶಾಸ್ತ್ರಗಳು ಹೇಗಿದ್ದರೂ ಆಗ ಬಹುದು. ಇದು ಹೆಚ್ಚಾಗಿ ಕಂಡುಬರುವುದು ಸಮಾಜದಲ್ಲಿ ಜರುಗುವ ಮದುವೆ ಹಾಗೂ ಛತ್ರಗಳಲ್ಲಿ ನಡೆಯುವ ಮದುವೆಗಳಲ್ಲಿ ಎಂದರೆ ತಪ್ಪಾಗಲಾರದು.

ಎಣ್ಣೆ ಅರಸಿನ ಶಾಸ್ತ್ರದಲ್ಲಿ ಮುತ್ತೈದೆ ಮಹಿಳೆಯರು ತಲೆಗೆ ವಸ್ತ್ರಕಟ್ಟಿ ಶಾಸ್ತ್ರ ಮಾಡುವ ಪದ್ಧತಿ ಇತ್ತು. ಆದರೆ ಅದು ಇಂದು ಕ್ಷೀಣಿಸುತ್ತಾ ಬಂದಿದೆ. ನೆಲಕ್ಕಿ ದೀಪದಡಿಯಲ್ಲಿ ಹಾಗೂ ಸೀತಾವಳಿ ಚಪ್ಪರದ ಮೇಲ್‌ಕಟ್ಟು ಅಡಿಯಲ್ಲಿ ಈ ಶಾಸ್ತ್ರ ನಡೆಯುತ್ತದೆ. ಅದು ಇಂದು ಕೇವಲ ಒಂದೇ ಸ್ಥಳದಲ್ಲಿ ಕೆಲವು ಮದುವೆಗಳಲ್ಲಿ ನಡೆದಿದೆ. ಇದೂ ಸರಿಯೇ? ಸಂಸ್ಕೃತಿ ವಿರೋಧವಾದ ಇನ್ನೊಂದು ವಿಷಯ ಚಪ್ಪರದ ಮೇಲ್‌ಕಟ್ಟು ಅಡಿಯಲ್ಲಿ ಪಾದರಕ್ಷೆಗಳನ್ನು ಹಾಕಿಕೊಂಡು

ಓಡಾಡುವುದು. ಇತರರ ಮದುವೆಗಳಲ್ಲಿ ಉದಾ. ಕೊಡಗರ ಮದುವೆಯಲ್ಲಿ ಬಾಳೆ ಬೇಂಗುವುದು, ಮುಕ್ಕಾಲಿನಲ್ಲೇ ಕುಳಿತು ಅಕ್ಷತೆಕಾಳು ಹಾಕಿಸಿಕೊಳ್ಳುವುದು ಮಹಿಳೆಯರು ತಲೆವಸ್ತ್ರ ಕಟ್ಟಿಯೇ ಗಿಂಡಿ ಹಾಲು ಕುಡಿಸುವುದು ಇಂದೂ ಶ್ರೀಮಂತ ಬಡವ ಎಂಬ ಭೇದವಿಲ್ಲದೆ ನಡೆದುಕೊಂಡು ಬಂದಿದೆ. ಇದು ಅವರ ಸಂಸ್ಕೃತಿ ತಾನೆ.

ಧಾರಾ ಮುಹೂರ್ತ ಇನ್ನೂ ವಿಚಿತ್ರ. ಧಾರಾ ಮುಹೂರ್ತಕ್ಕೆ ಮುಂಚಿತವಾಗಿ ನಡೆಯುವ ಶಾಸ್ತ್ರಗಳಾದ ನೆಂಟರ ಮರ್ಯಾದಿ ಮದುಮಗನಿಗೆ ಹಾಲು ತುಪ್ಪ ಕುಡಿಸುವುದು (ಮದು ಮಜಿನ ನೇರ) ದೇವಸಭೆಯಲ್ಲಿ ವೀಳ್ಯ ಹಾಗೂ ಬಣ್ಣ ಬಂಗಾರ ವಿಲೇವಾರಿ ಎಲ್ಲಾ ವಿಚಿತ್ರ ರೀತಿಯಲ್ಲಿ ನಡೆಯುತ್ತಿದೆ. ಬಣ್ಣ ಬಂಗಾರದಲ್ಲಿ ಬಣ್ಣ ಇಲ್ಲದೆಯೇ (ಎಂದರೆ ಇದಕ್ಕೂ ಮುಂಚಿತವಾಗಿ ಹೆಣ್ಣಿನ ಕಡೆಯವರು ಇದನ್ನು ಪಡೆದುಕೊಂಡು ಮದುಮಗಳಿಗೆ ಸಿಂಗರಿಸಿ ಆಗಿರುತ್ತದೆ) ನೆಪ ಮಾತ್ರಕ್ಕೆ ದೇವಸಭೆಯಲ್ಲಿ ಇದನ್ನು ಉಚ್ಚರಿಸುತ್ತಾರೆ. ಇದು ಸಂಸ್ಕೃತಿಗೆ ಸರಿಯಾದದ್ದೋ? ಇಲ್ಲ ವಿರೋಧವಾದದ್ದೋ?

ತೆರವಿನ ಹಣದ ಬಗ್ಗೆ - ದೇವಸಭೆಯಲ್ಲಿ ಕುಳಿತ 3×3 ಮುಖ್ಯಸ್ಥರ ಮಾತಿಗೆ ಯಾವ ಬೆಲೆಯೂ ಇಲ್ಲ. ಹೊರಗೆ ಕುಳಿತ ತಲೆಹೋಕ ಪಾನಮತ್ತ ಯುವಕರು ಮುಖ್ಯಸ್ಥನಿಗೆ ಹೇಳುವ ಮಾತುಗಳಂತೂ ತುಂಬಾ ಕೆಟ್ಟರೀತಿಯಲ್ಲಿ ಇರುತ್ತದೆ. ಇಲ್ಲಿ ತಿಳಿದುಕೊಳ್ಳಬೇಕಾದ ಒಂದು ವಿಷಯ ಎಲ್ಲಾ ಸಂಸ್ಕೃತಿ ಸಂಪ್ರದಾಯಗಳನ್ನು ತಿಳಿದ ವ್ಯಕ್ತಿ ಮಾತ್ರ ದಿಬ್ಬಣದ ಮುಖ್ಯಸ್ಥನಾಗಿ ಹೋಗುತ್ತಾನೆ.

ಜನರ ಮುಂದೆ ಅವನನ್ನು ಅವಹೇಳನ ಮಾಡುವುದು ಸಂಸ್ಕೃತಿಯ ಅವಹೇಳನ ಮಾಡಿದಂತಲ್ಲವೆ?

ಅಕ್ಕಿ ಮುಹೂರ್ತದಲ್ಲಿ ಕುಳಿತ ಮದುಮಕ್ಕಳು ಪಾದರಕ್ಷೆ ತೊಟ್ಟಿರುವುದು ಹಾಗೂ ಅಕ್ಷತೆಕಾಳು ಹಾಕಿ ಆಶೀರ್ವದಿಸುವವರೂ ಪಾದರಕ್ಷೆಗಳನ್ನು ಹಾಕಿಕೊಂಡು ಆಶೀರ್ವದಿಸುವುದು ಇಂದು ಕಂಡು ಬರುತ್ತದೆ. ಇದು ನಿಜಕ್ಕೂ ಬೇಸರದ ಸಂಗತಿ.

ತುಪ್ಪ ತೆಗೆದುಕೊಂಡು ಬರುವಂತಹ ಪದ್ಧತಿ ಇಂದಿನ ದಿನಗಳಲ್ಲಿ ಮದುವೆಯಂದೇ ನಡೆಯುತ್ತದೆ. ಬಹುಶಃ ಇದು ಜನರ ಸೌಕರ್ಯಕ್ಕಾಗಿ ಆಗಿರಬಹುದು. ಆದರೂ ಸಂಸ್ಕೃತಿ ವಿರೋಧ ತಾನೆ?

ಶವ ಸಂಸ್ಕಾರ ಸುಮಾರಾಗಿ ಗೌಡರುಗಳಲ್ಲಿ ಗೌಡ ಸಂಸ್ಕೃತಿಯಂತೆ ನಡೆಯುತ್ತಿದೆ. ಇದರಲ್ಲಿ ಬಡವ, ಬಲ್ಲಿದ ಎಂಬ ಅಂಶ ಕಾಣುವುದಿಲ್ಲ. ಆದರು ಶುದ್ಧದ ದಿನ ಸತ್ತ ವ್ಯಕ್ತಿಯ ನೆನಪಾಗಿ ಸಂತಾಪ ಸೂಚಕವಾಗಿ ಮನೆಯವರು, ಹತ್ತಿರದ ಬಂಧುಗಳ ಮೀಸೆ, ತಲೆಕೂದಲು ಬೋಳಿಸುವ ಸಂಸ್ಕೃತಿ ಕಾಣೆಯಾಗುತ್ತಾ ಇದೆ. ಮಹಿಳೆಯರಲ್ಲಿ ಗಂಡ ಸತ್ತ ನಂತರ ಹೆಂಡತಿಯಾದವಳು ಬಿಳಿಸೀರೆ ಉಡುವ ಸಂಪ್ರದಾಯವೂ ಬಹು ಕಡಿಮೆಯಾಗಿದೆ.

ನಮ್ಮ ಕೊಡಗು ಗೌಡ ಸಂಸ್ಕೃತಿಯು ಸಂಸ್ಕೃತ ರೀತಿಯಲ್ಲೇ ಉಳಿಸಿ ಬೆಳೆಸಬೇಕಾದರೆ ಕೆಲವೊಂದು ವಿಷಯಗಳನ್ನು ಹೇಳಬಹುದು.

೧. ಮದುವೆ ಸಮಾರಂಭಗಳಲ್ಲಿ ಅದರಲ್ಲೂ ಸಮಾಜಗಳಲ್ಲಿ ನಡೆಯುವ ಮದುವೆಗಳಲ್ಲಿ ಮದ್ಯಪಾನವನ್ನು ನಿಷೇಧ ಮಾಡಬೇಕು.

೨. ಮದುವೆ ಸಮಾರಂಭದಲ್ಲಿ ಗಂಡಸರು (ಮದು ಆದವರು) ಯಾವುದಾದರೊಂದು ಸಮವಸ್ತ್ರವನ ಹೆಂಗಸರು (ಮದುವೆ ಆದವರು) ಸಂಪ್ರದಾಯ ಸೀರೆಯನ್ನೇ ತೊಡಬೇಕು.

೩. ಮುಖ್ಯಸ್ಥನನ್ನು ಮತ್ತು ದೇವಸಭೆಯಲ್ಲಿನ 3× ಮುಖ್ಯಸ್ಥರನ್ನು ಗೌರವದಿಂದ ಕಾಣಬೇಕು, ಇತರರಿ ಚರ್ಚಿಸಲು ಅವಕಾಶ ಕೊಡದಿರುವುದು.

೪. ಧಾರಾಮಂಟಪ ಹಾಗೂ ಸೀತಾವಳಿ ಚಪ್ಪರದ ಮೇಲ ಕಟ್ಟು ಇವೆರಡಕ್ಕೂ ವಿಶೇಷತೆಯನ್ನು ಕೊಡುವುದು.

೫. ಸಂಸ್ಕೃತಿ ಹಾಗೂ ಸಂಪ್ರದಾಯಕ್ಕೆ ಯಾವುದೇ ಭಿನ್ನ ತಾರದೇ ಇರುವಂತೆ ನೋಡಿಕೊಳ್ಳುವುದು.

೬. ಶ್ರೀಮಂತರ ಮದುವೆ, ಬಡವರ ಮದುವೆಯಲ್ಲಿ ಸಂಸ್ಕೃತಿಯನ್ನು ಕಾಪಾಡಿಕೊಂಡು ಬರುವುದು.

೭. ಸಂಸ್ಕೃತಿ, ಸಂಪ್ರದಾಯಗಳನ್ನು ಕಲಿಯುವ ವಿದ್ಯಾವಂತ ಯುವಕ ಯುವತಿಯರಿಗೆ ಸಮಾಜದ ಮುಖಾಂತರ ತಿಳುವಳಿಕೆ ಕೊಡುವುದು

೮. ಸಮಾಜದಲ್ಲಿ ಸಾಮೂಹಿಕ ವಿವಾಹಕ್ಕೆ ಆಸ್ಪದ ಮಾಡಿ ಕೊಡುವುದು, ಹಾಗೂ ಪ್ರೋತ್ಸಾಹಿಸುವುದು ಮುಖ್ಯಾಂಶ.

ಇನ್ನೂ ಅನೇಕ ಸೂಚನೆಗಳನ್ನು ಸೂಚಿಸಬಹುದು. ಇದು ಯಾರಿಂದ ಸಾಧ್ಯವಾಗಬಹುದು ಇದು ಮುಖ್ಯವಲ್ಲವೆ? ಇದನ್ನು ಕೆಳಗಿನ ರೀತಿ ಮಾಡಲು ಸಾಧ್ಯವೆ?

ಮೇಲಿನ ಸೂಚನೆ ಹಾಗೂ ವಿಷಯಗಳನ್ನು ಅನುಷ್ಠಾನಕ್ಕೆ ತರಲು ಎಲ್ಲಾ ಗೌಡ ಸಮಾಜದ ಅಧ್ಯಕ್ಷರು ಕಾರ್ಯಕಾರಿ ಮಂಡಳಿ ಸದಸ್ಯರು, ಗೌಡ ಮಹಿಳಾ ಒಕ್ಕೂಟಗಳ ಅಧ್ಯಕ್ಷಣಿ ಹಾಗೂ ಸದಸ್ಯರು, ಗೌಡ ಸಾಂಸ್ಕೃತಿಕ ಸಮಿತಿಯವರು, ಗೌಡ ಅಕಾಡೆಮಿಗೆ ಸಂಬಂಧ ಪಟ್ಟವರು, ಸಂಸ್ಕೃತಿ ಬಗ್ಗೆ ಕಾಳಜಿ ಇರುವ ಹಿರಿಯ ಬುದ್ಧಿವಂತರು ಹಾಗೂ ನುರಿತ ಗೌಡ ಪತ್ರಿಕೋದ್ಯಮಿಗಳು ಇದೂ ಅಲ್ಲದೆ ಗೌಡ ವಿದ್ಯಾಸಂಘದ ಪದಾಧಿಕಾರಿಗಳು ಒಟ್ಟಾಗಿ ಸಹಕರಿಸಿ ಕಲೆತು ಮಾತನಾಡಿದರೆ ಸಾಧ್ಯವಾಗಬಹುದು.

ಇದು ಆಗದಿದ್ದರೆ ಮುಂದೆ ಕೊಡಗು ಗೌಡರ ಸಂಸ್ಕೃತಿ ಪ್ರಶ್ನಾ ರೀತಿಯಲ್ಲೇ ಉಳಿಯಬಹುದೆ?

ಸೇನೆ ನೇಮಕಾತಿಗೆ ನೂಕುನುಗ್ಗಲು ಗುಂಡಿಗೆ ಬಲಿ

ಜೈಪುರದಲ್ಲಿ ನಡೆದ ಸೇನಾ ನೇಮಕಾತಿ ಸಂದರ್ಭದಲ್ಲಿ ಹಿಂಸಾಚಾರಕ್ಕೆ ತಿರುಗಿದ ಯುವಕರನ್ನು ನಿಯಂತ್ರಿಸಲು ಪೊಲೀಸರು ಭರತ್‌ಪುರದಲ್ಲಿ ನಡೆಸಿದ ಗೋಲಿಬಾರ್‌ನಲ್ಲಿ ಮೂವರು ಮೃತಪಟ್ಟು ಇತರೆ ಐವತ್ತು ಮಂದಿ ಗಾಯಗೊಂಡಿದ್ದಾರೆ.

ಭಾರತೀಯ ಸೇನೆಯಲ್ಲಿ ನೇಮಕಾತಿ ಬಯಸಿ ಸೇರಿದ್ದ ಐವತ್ತು ಸಾವಿರ ಯುವಕರು ಹಿಂಸಾಚಾರಕ್ಕೆ ತಿರುಗಿ ಗಲಾಟೆ ಆರಂಭಿಸಿದ್ದರು. ಪರಿಸ್ಥಿತಿ ಕೈ ಮೀರುತ್ತಿದ್ದುದ್ದನ್ನು ಗಮನಿಸಿದ ಪೊಲೀಸರು ಗೋಲಿಬಾರ್ ನೆಡೆಸದೆ ವಿಧಿಯಿರಲಿಲ್ಲ.

ಕರಿಚಿನ್ನ -ಧಾರಾವಾಹಿ-29

ಮೂಲಕಥೆ : ಅಶ್ವಥಿ ಅರವಿಂದ್

[ಅರೆಭಾಷೆಗೆ] : ಎಂ. ಇ. ಮಹಮ್ಮದ್

ಇಲ್ಲಿಗೆಮುಟ್ಟ........

"ಹುಟ್ಟಿದವು ಎಂದಾದರೊಂದು ದಿನ ಸಾಯಕು, ಗಾಳಿಮರ ಸೋಮಯ್ಯನು ನಾನ್ ಒಂದೇ ಥರಾ. ನನ್ನ ಮಂಜ ಸತ್ತರೆ ಅವ್ನ ಮಗಳು ಸತ್ತೊತು ತ ದೇವಯ್ಯ ಹೇಳ್ದ. ಇದೊಂದ್ ದುರಾದೃಷ್ಟದ ಸಂಗತಿ ಲಾಯಾರಾಗಿ ನಾನ್ ನ್ಯಾಯ ಮರಿಯಕೆ ಬೊತ್ತಲ್ಲತ ರತೀಶ ಹೇಳ್ದೆ. ನೀನ್ ನ್ಯಾಯ ಅನ್ಯಾಯ ನಂಗೆ ಕಲ್ಸ್‌ಕೆ ಬಾದು ಬ್ಯಾಡಂತೇಳಿ ಚೆಕ್ ಬುಕ್‌ನ ತೆಗ್ದ್ ಎಷ್ಟ್ ಹಣ ಬೇಕು ಅಷ್ಟ್ ಬರ್ಕ. ನೀಲೂನ ಹೆಣನ ಸಾಗ್ಸಿ ಕಾಣದಂಗೆ ಮಾಡ್. ರತೀಶ ಮುಖ ಬಾಡ್ಸಿಕಂಡ್ ಕುದ್ದದೆ. ಕರಾಟೆ ಕಾಳ ರತೀಶಂಗೆ ಧೈರ್ಯ ಕೊಟ್ಟತ್"

ಸೋಮಯ್ಯ, ಎಚ್ಚರಾಗಿ ಮಗಳ್ನ ಕರ್‌ದದೆ. ನೀಲೂ ಎಲ್ಲೂ ಕಾಂಬಲೆ, ಎಲ್ಲಾ ಕಡೆ ಹುಡ್ಕಿದೆ, ಚಂಗುಮಣಿ ಮತ್ತೆ ಫ್ಯಾಕ್ಟ್ ಮಾದಯ್ಯ ಸ್ಟೇಷನ್‌ಲಿ ತಪ್ಪು ಒಪ್ಪಿಕಂಡ್ ಒಳಗಡತ "ಜೀವನ್ ಅಪ್ಪಂಗೆ ಫೋನ್ ಮಾಡ್ದೆ. ತಪ್ಪು ಮಾಡದವರ್ನ ಯಾಕೆ ನೀನ್ ಪೋಲಿಸ್‌ಗೆ ಕೊಟ್ಟದ್‌ತ ಕೇಳ್ದೆ. ನಿನ್ನ ಓದ್ಸಿ ಎಂಥಾ ಪ್ರಯೋಜನ ಆತ್, ಪೇಪರ್ ನೋಡ್, ಯಾರ್ ಪೋಲಿಸ್‌ಗೆ ಹಿಡ್ದ್ ಕೊಟ್ಟದ್‌ತ ದೇವಯ್ಯ ರಿಸೀವರ್‌ನ ಕುಕ್ಕಿತ್."

ಮುಂದೆ ನೀವ್ ಓದಕು

"ಈ ಬೋರ್ ಗುಡ್ಡೆದ್ ನೊಣಗಳ್‌ನ ಕರ್ಕಂಡ್ ಬಂದ್ರೆ ಹೆದ್ರ್‌ವವ ನಾನಲ್ಲ" ದೇವಯ್ಯ ತನ್ನ ಎದೆಗೆ ಹೊಡ್ಕಂಡ್ ಹಲ್ಲ್ ಕಚ್ಕಂಡ್ ಹೇಳ್ತ್.

"ನಿನ್ನ ಹೆದ್ರಿಸಿಕೆ ನಾನ್ ಬಂದ್‌ದಲ್ಲ ಡ್ಯಾಡಿ, ತಪ್ಪು ಮಾಡದ ಮಾದಯ್ಯನ ಬಚಾವ್ ಮಾಡಿಕೆ ಬಂದೋಳೆ."

"ಥೂ..... ನಾಲಾಯಕ್, ಮಾದಯ್ಯ ತಪ್ಪ್ ಮಾಡ್‌ಲೇತ ಹೇಳಿಕೆ ಆ ಮರ್ಡರ್ ನಡಿಯಕಾಕನ ನೀನ್ ನೋಡ್ತಾ ನಿಂತ್‌ಕಂಡ್‌ದ್ದ" ಆರೋಪಿ ಯಾರ್‌ಂತನಿಂಗೆ ಗೊತ್ತಾ?"

"ನಂಗೆ ಗೊತ್ತುಟ್ಟು ಡ್ಯಾಡಿ, ಫ್ಯಾಕ್ಟ್ ಮಾದಯ್ಯ ಅಂತ ನೀಚ ಕೆಲ್ಸ ಮಾಡಂವ ಅಲ್ಲತ"

"ಏ ಬೊಡ್ಡೀ ಮಂಜ, ನನ್ನ ದುಡ್ಡ್‌ಂದ ತಿಂತಾ ಒಳಾ. ನೀನ್ ನನ್ನ ತೀರ್ಮಾನನ ಪ್ರಶ್ನಿಸುದೇನ್ ಬೇಡ. ಮಂಜ ಅಡ್ಡ ಬಂದ್ ಬುಡ್‌ತ್ತೇಂತ ಹೇಳಿಕಂಡ್ ತಲೆ ತಗ್ಗಿಸಿ ನಡಿಯಂವ ನಾನ್ ಅಲ್ಲ ಈ ದೇವಯ್ಯತ ತಿಳ್ಕ. ನೆಟ್ಟ್ ನೀರ್ ಹಾಕಿ ಸಾಂಕಿದ ಮರ ಆದ್ರು ಸರಿ, ಅದ್ರಿಂದ ಉಪದ್ರ ಆದ್ರೆ ಕಡ್‌ದ್ ಬೀಳ್ಸಿಕೆ ಹಿಂದೆ ನಿಲ್ಲಂವ ಅಲ್ಲ ಈ ದೇವಯ್ಯ. ನೋಡ್ ನಿಂಗೇನೆ ಹೇಳ್ತಾ ಒಳೆ, ಮರ್ಯಾದಿಯಾಗಿ ಈ ರಂಜನ್‌ದ್ ಕೇಸ್‌ಲಿ ತಲೆ ಹಾಕದೆ ವಾಪಾಸ್ ಹೋಗು, ಇಲ್ಲದೆ ಹೋದ್ರೆ ನಾನ್ ನಿನ್ನ ಡ್ಯಾಡಿನೂ ಅಲ್ಲ. ನೀನ್ ನನ್ನ ಮಂಜನೂ ಅಲ್ಲ ಉಷಾರ್"......?

ದೇವಯ್ಯ ಸಿಟ್ಟ್‌ದ ಬಾಡೇಲಿ ಹಾರ್ಯಾಡ್ತ್... ಅಂವ ದಡ್ ಬಡಾಂತ ಮೆಟ್ಲ್ ಹತ್ತ್‌ಕಂಡ್ ಹೋತ್.

ಮುತ್ತಕ್ಕಿ ಎದೆಗೆ ಕೈ ಒತ್ತಿ ಹಿಡ್‌ಕಂಡ್ ಬಾತ್.

"ಅಯ್ಯೋ, ನನ್ನ ಚಿನ್ನಾ ನೀನ್ ಡ್ಯಾಡಿ ಯೊಟ್ಟಿಗೆ ವಾದ ಮಾಡಿಕೆ ಇಳಿಬ್ಯಾಡ ಕಂದಾ, ಮತ್ತೆ ನಾನಿಲ್ಲಿ ನರಕಯಾತನೆ ಅನುಭವಿಸಿಕೆ ಬಂದದೆ. ನೀನ್ ಸಧ್ಯಕ್ಕೆ ಈ ಮನೆಗೆ ಬಾದು ಬ್ಯಾಡಪ್ಪ. ಹಾಸ್ಟೆಲ್‌ಲೇ ಇದ್ದ್‌ಬುಡ್. ನಾನ್ ನಿನ್ನನ್ನ ಅಲ್ಲೆ ಬಂದ್ ನೋಡ್ತಾ ಇದ್ದನೆ."

ಹತ್ತ್ ತಿಂಗ ಹೊತ್ತ್, ಹೆತ್ತ್ ಸಾಂಕಿದ ಮಮ್ಮಿನ ಮಾತಿಗೆ ಏನ್ ಹೇಳೊಕೂಂತಲೇ ಅವಂಗೆ ಗೊತ್ತಾತ್‌ಲೆ. ಅಂವ ತನ್ನ ಮಮ್ಮಿದ್ ಮೊಕನೇ ನೋಡ್ಕಂಡ್ ನಿಂತ್ ಕಂಡತ್.

ವಾಪಸ್ ಹೋಗಿ ಬುಡು ಜೀವನ್, ಡ್ಯಾಡಿ ಜೊತೆ ವಾದಕ್ಕೆ ಇಳಿಬ್ಯಾಡಾಂತ ಮಮ್ಮಿ ಮತ್ತೆ ಮತ್ತೆ ಹೇಳ್ದಂಗೆ ಕೇಳ್‌ಸ್ತ್ ಜೀವನ್‌ಗೆ.

ಅವಂಗೆ ದುಃಖ ಉಕ್ಕಿಬಾತ್. ಅಂವ ಸೀದಾ ನಾಡ್‌ಕೊಲ್ಲಿ ಮಾದಪ್ಪನ ಮನೆಗೆ ಹೋತ್.

ಮೀರ ಮನೆ ಮುಂದೆ ಕುದ್ದ್‌ಕಂಡ್ ಯಾವುದೋ ಪುಸ್ತಕ ಓದ್ತಾ ಇತ್ತ್. ಜೀವನ್‌ನ ಕಂಡ್ ಅವುಳು ಪುಸ್ತಕನ ಮೊಡಿಚಿ ಬುಟ್ಟ್ ಎದ್ದತ್.

"ಒಂದ್ ವಾರ ಬುಟ್ಟ್ ಬನ್ನಂತ ಹೇಳಿ ಇದೇನ್ ಇಷ್ಟ್ ಬೇಗ ಬಂದೋಳಲ್ಲ? ಏನಾತ್ ನಿಂಗೆ? ಯಾಕೆ ಒಂದ್ ಥರಾ ಒಳಲ್ಲ"

"ಜೀವನ್‌ನ ಮುಖ ಬಹಳ ಬ್ಯಾಜರಂಡ ಕೂಡಿತ್ತ್"

"ಯಾಕೆ ಜೀವನ್ ಉಷಾರಿಲ್ಲೆನ?"

"ತಲೆ ತಿರ್ಗಿದಂಗಾದೆ"

"ಬಾ ಒಂದ್ ಗಳಿಗೆ ಮಲ್ಕ"

ಅವನ್ನ ಒಳಗೆ ಕರ್ಕಂಡ್ ಹೋದ ಮೀರ ಹಾಸಿಗೆ ಮೇಲೆ ಮಲಗಿಕೆ ಹೇಳ್ತ್. ಜೀವನ್ ದೊಪ್ಪಂತ ಮಲಗಿತ್.

"ಮೀರಾ.... ನಂಗೆ ಈ ಬದ್‌ಕ್ ಬೇಡ, ಡ್ಯಾಡಿದ್ ಹಣಾನು ಬೇಡ, ಈ ಬಾಳ್‌ಲಿ ಒಳ್ಳೆದ್ ಮಾಡಿಕೆ ಸಾಧ್ಯ ಇಲ್ಲೆ ಮೀರಾ"

"ಯಾಕೆ ಜೀವನ್ ಡ್ಯಾಡಿ ಜೋರ್ ಮಾಡ್ತ?" ಅಂತ ಮೀರ ಜೀವನ್‌ಗೆ ಧೈರ್ಯ ಹೇಳ್ತ್.......

"ಆ ಫ್ಯಾಕ್ಟ್ ಮಾದಯ್ಯ ಒಬ್ಬ ಒಳ್ಳ ಮನ್ಸ ಆಗಿತ್ತ್. ಮತ್ತೆ ಅವನ ಯಾಕೆ ಪೋಲಿಸ್‌ಗೆ ಕೊಟ್ಟದ್?"

ದೇವಯ್ಯನ ಹೆಣ್ಣ್‌ಮುತ್ತಕ್ಕಿ ಕೇಳ್ತ್

"ಕೇಸ್‌ದ್ ವಿಷ್ಯ ಬುಟ್ಟ್ ಬ್ಯಾರೆ ಏನಾದ್ರ್ ಇದ್ರೆ ಹೇಳ್ತ"

ದೇವಯ್ಯ ಹೆಣ್ಣ್‌ನ ಜೋರ್ ಮಾಡ್ತ್!

"ನಂಗೆ ಬೇರೆ ಏನು ಹೇಳಿಕೆ ಇಲ್ಲೆ. ಇಂದ್ ನಮ್ಮ ಮನೆಗೆ ಕೆಲವು ಜನ ಬಂದಿದ್ದೊ. ಮಾದಯ್ಯನ ಸುಮ್ಮೆ ಪೋಲಿಸ್‌ಗೆ ಕೊಟ್ಟ್‌ದ್‌ತ ಅವು ಹೇಳ್ದೊ. ಇಡೀ ಊರವು ಒಂದಾಗೋಲೊ. ಅವನನ್ನೊಮ್ಮೆ ಬುಡ್ಸಿ. ಇನ್ನೊಂದು ವಿಷ್ಯಾ ಆ ಗಾಳಿಮರ ಸೋಮಯ್ಯನ ಮಗಳ್ನ ನೀವು ಎಲ್ಲೋ ಅಡ್‌ಗಿಸಿವಳ್ರಿಗಡ ಹಂಗೇಂತ ಜನ ಮಾತಾಡ್ತಿದ್ದೊ. ಸೋಮಯ್ಯ ಬೋರ್‌ಗುಡ್ಡೆಗಾಗಿ ಮರ್ಲ್‌ಕಂಡ್ ಮಗಳ್ನ ಹುಡ್ಕಿಕಂಡ್ ಹೋಗಿತ್ತ್‌ಗಡ. ಆ ದೇವರ್ನ ಗ್ಯಾನ ಮಾಡಿ ನೀವು ಆ ಗೂಡೆನ ಮತ್ತೆ ಫ್ಯಾಕ್ಟ್ ಮಾದಯ್ಯನ ಸುಮ್ಮೆ ಅವರ ಪಾಡಿಗೆ ಬುಟ್ಟ್‌ಬುಡಿ. ಫ್ಯಾಕ್ಟ್

ಮಾದಯ್ಯನ ಪೊಲಿಸ್ ಅರೆಸ್ಟ್ ಮಾಡಿಟ್ಟೊತ ಗೌರ ಇಲ್ಲಿ ಮೊರ್‌ಡಿಕೆ ಸುರ್ ಮಾಡಿಟ್ಟು. ಅವಳ್ನ ಹೆಂಗೆ ಸಮಾಧಾನ ಮಾಡ್‌ದೂಂತನೇ ನಂಗೆ ಗೊತ್ತಾದುಲೇ."

"ಅವಳಿಗೆ ಹೇಳ್, ಮಾದಯ್ಯ ಸ್ಟೇಷನ್‌ದ ಬಂದಂಗೆ ಅವನೊಟ್ಟಿಗೆ ನಿನ್ನ ಎರಡನೆ ಮೊದ್ವೆ ಮಾಡ್ಸಿನೇಂತ. ಹಿಂದೆ ಅವಿಬ್ರೂ ಒಟ್ಟಿಗೆ ಸೇರಿರ್‌ಕ್ಕೂ ಸಾಕ್"

"ಯಾಕೆ ಹಿಂಗೆಲ್ಲ ಬಾಯಿಗೆ ಬಂದ ಹಂಗೆ ಹೇಳ್ತಾಒಳರಿ. ನಿಮ್ಮ ಮಾತ್‌ನ ಆ ದೇವುರ್ ಕೂಡ ಮೆಚ್ಚಿಕ್ಕಿಲ್ಲೆ"

"ತನ್ನ ಗಂಡನ ಚಾಕ್‌ಲಿ ಚುಚ್ಚಿ ಕೊಂದಂವ ಅರೆಸ್ಟ್ ಆಗಿ ಇರ್‌ಕನ ಅವುಳು ಯಾಕೆ ಕಣ್ಣೀರ್ ಹಾಕಕು?

ದೇವಯ್ಯ ಕೇಳ್ತ್.

ಇತ್ತ ಮುತ್ತಕ್ಕಿ ಮೆಲ್ಲಂಗೆ ಗಂಡಂಗೆ ಹೇಳ್ತ್. "ಅವನ ಒಳ್ಳೆತನನ ಗೇನ ಮಾಡಿ ಆಗಿರ್ದು."

"ಒಳ್ಳತನ ಗಡ, ಒಳ್ಳತನ, ಒತ್ತ ಬೇಡದಿದ್ರೆ ಮರ್ಯಾದಿಯಾಗಿ ನನ್ನ ಕಣ್ಣ ಮುಂದೆಂದ ಹೋರ್ಟ್ ಹೋಗು"

ದೇವಯ್ಯ ತನ್ನ ಹೆಣ್ಣಿಗೆ ಒದಿಯಕೇತ ಕಾಲ್ ಎತ್ತ್‌ಕಾಕನ ಮುತ್ತಕ್ಕಿ ಒಳಗೆ ಹೋತ್.

"ಅಯ್ಯೋ ವೆಂಕಟ್ರಮಣಾ.... ನನ್ನ ಹಣೆಬರನೆ ಹಿಂಗೆ ಆತಲ್ಲ. ಒಂದ್ ಹಿಡಿ ಅನ್ನ ಸರಿಯಾಗಿ ತಿಂಬಕ್ಕೆ ಯೋಗ ಇಲ್ಲದಾಗಿ ಹೋತಲ್ಲ.

ಮುತ್ತಕ್ಕಿ ಮೊರ್ದ್‌ಕೆ ಸುರ್ ಮಾಡ್ತ್.

ಅಷ್ಟ್‌ರ್ಲಿ ಜೀವನ್ ವಾಪಾಸ್ ಬಾತ್.

"ಏನ್‌ಸೆ..... ಮಾದಯ್ಯನ ಜಾಮೀನ್‌ಲಿ ಬುಡ್ಸಿಒಳ? ಅವನ ಒಮ್ಮೆ ಕರ್ಕಂಡ್ ಬಂದ್ ನಿನ್ನ ಅತ್ತಿಗೆಗೆ ತೋರ್ಸ್. ಇಲ್ಲದೆ ಹೋದ್ರೆ ಅವುಳು ಮೊರ್ಟ್ ಸತ್ತೋಕೆ ಸಾಕ್..."

"ನೋಡ್ ಡ್ಯಾಡಿ ನಿನ್ನ ಈ ತರದ ಮಾತೆಲ್ಲ ನಂಗೆ ಒಂದ್ ಚೂರ್ ಕೂಡ ಹಿಡ್ಸ್‌ದುಲೆ. ಇಂದ್ ಪೌರ ಸಮಿತಿಯವು ನನ್ನ ಕಾಂಬಕೆ ಬಂದಿದ್ದೊ. ಅಣ್ಣನ ಮರ್ಡರ್‌ಕೇಸ್‌ಲಿ ನೀನು ಪೊಲಿಸ್‌ನವು ಸೇರ್ಕಂಡ್ ಏನೋ ಮಾಡ್ತಾ ಒಳ್ರೀತ ಹೇಳ್ದೊ. ನಂಗಂತೂ ಬಾರಿ ಬೇಜಾರ್ ಆಗ್ತಾ ಉಟ್ಟು."

"ಬೇಜಾರ ಆದ್ರೆ ಇಲ್ಲಿಂದ ಇಳ್‌ದ್ ನಡಿ ಹೋಗ್ರಾ. ಯಾರೂ ಸಹಾಯ ಮಾಡಿಕೆ ಇಲ್ಲದ ಸ್ಥಿತಿಲಿ ಒಂದು ಪೈಸಾನು ಕೈಲಿ ಇಲ್ದೆ ಈ ಬೋರ್‌ಗುಡ್ಡೆಗೆ ಬಂದಂವ ನಾನ್ ಅಂದ್. ಎಷ್ಟ್ ಜನ ನಂಗೆ ಮೋಸ ಮಾಡ್‌ತ್ತ್‌ಲೆ? ಎಷ್ಟ್ ಜನ ನನ್ನ ಪೊಲಿಸ್‌ಗೆ ಕೊಟ್ಟತ್ತ್‌ಲೆ? ಆಗ ಅಡ್‌ಗಿ ಕುದ್ದ್ ಎಲ್ಲಿಗೆಲ್ಲ ನಾನ್ ಹೋಗಿದ್ದೆ, ಎಕ್ಸೈಸ್ ಪೊಲೀಸ್‌ಗ, ಫಾರೆಸ್ಟ್ ಗಾರ್ಡ್‌ಗೆಲ್ಲ ಹೆದ್ರಿಕಂಡ್ ನಾನ್ ಕಳ್‌ದ ದಿನಗ ನಂಗೆ ಮಾತ್ರ ಗೊತ್ತ್? ಈ ಕಥೆಯಲ್ಲ ನಿಂಗೆ ಹೆಂಗೆ ಗೊತ್ತಾಕು? ಮೀಸೆ ಹುಟ್ಟಿದಂಗೆ ನಾನ್ ನಿನ್ನ ಮಮ್ಮಿನ ಮೊದ್ವೆ ಮಾಡ್ಕ್ ಕಣ್‌ತ್ತಿಲೆ. ಲಾಯ್ಕಾಗಿ ದುಡ್‌ದ್ ರಕ್ತನ ನೀರ್ ಮಾಡಿ, ಬೆವರ್ ಸುರ್ಸಿ ಹಣ ಮಾಡ್ದ ಮೇಲೆ ಮೊದ್ವೆ ಮಾಡ್ಕಂಡೆ, ಗೊತ್ತಾತ?"

ನಾಡ್ ಕೊಲ್ಲಿ ಮಾದಪ್ಪನ ಮನೆಂದ ಹೋಕಾಕನ ಅವನ ಸುಸ್ತೆಲ್ಲಾ ಬುಟ್ಟೊಗಿತ್ತ್. ಅವನ ಮನಸ್ಸಿಗೆ ಒಂದ್ ಥರಾ ಕುಸಿ ಆಗಿತ್ತ್. ಅಲ್ಲದೆ ಏನೋ ಒಂದ್ ತರದ ಧೈರ್ಯ ಕೂಡ ಸಿಕ್ಕಿತ್ತ್.

ತನ್ನ ಪ್ರೀತಿಯ ಮೀರನ ಉಪಚಾರ, ಅವಳ ಸ್ಪರ್ಶ ಅವಂಗೆ ಕುಸಿ ಕೊಟ್ಟಿತ್, ಈಗ ಜೀವನ್‌ಗೆ ಒಂದು ಹೊಸ ಧೈರ್ಯ ಬಂದಿತ್ತ್. ತನ್ನ ಡ್ಯಾಡಿ ಜೊತೆ ಅಂವ ಮಾಡುವ ಅನ್ಯಾಯದ ವಿರುದ್ಧ ಹೋರಾಡೊಕೂಂತ ಅವಂಗೆ ಅನಿಸದೆ ಇತ್ತ್‌ಲ್ಲೆ. ಇಲ್ಯ್ ಹೆಂಗಾರ್ ಮಾಡಿ ಫ್ಯಾಕ್ಟ್ ಮಾದಯ್ಯನ ಜಾಮಿನ್‌ಲಿ ಬುಡ್ಸೊಕು."

"ನೀನ್ ಬಹಳ ಎಚ್ಚರ್‌ಂದ ಇರೋಕು ಜೀವನ್, ನಿನ್ನ ಡ್ಯಾಡಿನ ನಂಬಿಕೆ ಆಲೆ. ಶತ್ರೂಂತ ಗೊತ್ತಾದ್ರೆ ಸ್ವಂತ ಮಂಜನ ಕೊಲ್ಲಿಕೆ ಹಿಂದೆ ನಿಲ್ಲವು ಅಲ್ಲ ಆ ಮನ್ಸ!"

"ಅದ್ ನಂಗೆ ಲಾಯ್ಕಾಗಿ ಗೊತ್ತುಟು ಮೀರಾ"

ಜೀವನ್ ಸೀದಾ ಅಡ್ವೋಕೆಟ್ ಪ್ರಭಾಕರನ ಮನೆಗೆ ಹೋತ್. ಪ್ರಭಾಕರ ಊರ್‌ಲಿ ದೊಡ್ಡ ಲೀಡಿಂಗ್ ಲಾಯರ್, ದೊಡ್ಡ ಸಾಹುಕಾರ ಕೂಡ. ಬೋರ್‌ಗುಡ್ಡೆ ದೇವಯ್ಯನ ಹಣಕಾಸ್‌ಗೆ ಆಸೆ ಪಡಂವ ಅಲ್ಲ.

ಅಂವ ಅಡ್ವೋಕೇಟ್ ಜತೆ ಎಲ್ಲ ವಿಷ್ಯನೆ ಮಾತಾಡ್ತ್

"ಸ್ವಂತ ಅಪ್ಪನ ವಿರುದ್ಧ ಹೋರಾಡ್‌ಕನ ನೀನ್ ಸೊಲ್ಪ ಎಚ್ಚರಂದ ಗ್ಯಾನ ಮಾಡಿ ಇಳಿಯದು ಒಳ್ಳದು ಜೀವನ್" ಪ್ರಭಾಕರ್ ಹೇಳ್ತ್.

"ಈ ವಿಷಯಲಿ ನಾನ್ ನ್ಯಾಯದ ಪರ ಒಳೆ ಸಾರ್. ತಪ್ಪು ಮಾಡದವರ್ನ ರಕ್ಷಿಸೊಕು" "ಫ್ಯಾಕ್ಟ್ ಮಾದಯ್ಯನ ಜಾಮೀನ್‌ಲಿ ಬುಡ್ಸುದು ಕಷ್ಟದ ಕೆಲ್ಸ ಅಲ್ಲ. ಆ ಕೊಲೆ ನಡ್‌ದ ದಿನ ಅಂವ ಎಲ್ಲಿತ್ತ್‌ತ ಮೊದಲ್ ತಿಳ್‌ಕಣಕು. ಅಂವ ಕೊಲೆಗೆ ಸಪೋರ್ಟ್ ಮಡ್‌ತ್ತೆಲ್ಲೆಂತ ಆದ್ರೆ ಅವನ ಬುಡ್‌ಗಡೆ ಮಾಡಿಕೆ ಕಷ್ಟ ಏನೂ ಇಲ್ಲೆ."

ಮೊದ್‌ಲ್ ಆ ಮಾದಯ್ಯನ ಜಾಮೀನ್‌ಲಿ ಬುಡ್ಸೊಕು ಸಾರ್.

ಲಾಯರ್ ಪ್ರಭಾಕರ್ ಫ್ಯಾಕ್ಟ್ ಮಾದಯ್ಯನ ಬುಡ್ಸಿಕೇಂತ ಸರ್ಕಲ್ ಇನ್ಸ್‌ಪೆಕ್ಟರ್‌ನ ಕಾಂಬಕೆ ಹೋತ್.


(ಮುಂದ್‌ವರ್ದದೆ)

ನಮ್ಮೂರ ಸೊಬಗ್

ಭಾಗಮಂಡಲ ಎಂಬ ನಮ್ಮ ಊರ್
ಕಾವೇರಿ ಹೊಳೆಂದ ಇದರ ಜೋರ್
ಸುತ್ತ ಮುತ್ತ ನೊಡ್ರೆ ಹಚ್ಚಹಸ್‌ರ್
ಮಳೆಗಾಲ ಬಾತ್ ಅಂದರೆ ಭಾರಿ ಕೆಸ್‌ರ್
ಲಾಯಿಕಾದ ಹೆಸ್‌ರ್ ಈ ಊರ್‌ಗೆ
ಪ್ರಕೃತಿ ದತ್ತವಾದ ಕೊಡ್‌ಗೆ
ಹರ್‍ದದೆ ಕಾವೇಲೆ ಮೆಲ್ಲೆ ಮೆಲ್ಲಗೆ
ದುಡ್ದ್‌ವೆ ಜನ ಅವರವರ ಪಾಡಿಗೆ
ಲಾಯಿಕಾದ ಈ ನಮ್ಮ ಊರ್
ಎತ್ತ ನೋಡ್ರು ಬರೀ ಹಸರ್
ಬ್ಯಾಸಗೆ ಬಾತ್ ಅಂದರೆ ಸೆಕೆ ಜೋರ್
ಇದೇ ಕೊಡ್‌ಗ್‌ನ ಬೆಡಗಿನ ಊರ್
ಮುಂದೆ ನೋಡ್ರೆ ತಲಕಾವೇರಿ ಗುಡ್ಡೆ
ಹಿಂದೆ ನೋಡ್ರೆ ತಾವೂರು ಗುಡ್ಡೆ
ಎಡಕ್ಕೆ ನೋಡ್ರೆ ಸಂಗಮ ಕಾಡ್
ಬಲಕ್ಕೆ ನೋಡ್ರೆ ದೇವಸ್ಥಾನ
ಇದೇ ನೋಡಿ ನಮ್ಮೂರ ಸೊಬಗ್

ಮುಕ್ಕಾಟಿ ಗಿರಿಶ್
ಕುಂದಚೇರಿ ಗ್ರಾಮ, ಚೆಟ್ಟಿಮಾನಿ

ಅಗಸ್ಟ್ ತಿಂಗಳ 3ನೇ ತಾರೀಖ್ ಆಟಿ 18 ಆಗಿದ್ದದೆ. ಅಂದ್ ಮದ್ದುಗುಳ್ ಪಾಯಸ ಮಾಡುವ ಸಂಭ್ರಮದ ದಿನ.



ದಿ|| ಪಟ್ಟಡ ನಂಜುಂಡ
ಜನನ : 20-3-1913
ಮರಣ : 4-8-1997

2ನೇ ವರ್ಷದ ಪುಣ್ಯಸ್ಮರಣೆ

(ಅಂದು ಬೆಟ್ಟಗೇರಿಯಲ್ಲಿ "ಪಟ್ಟಡ ಸ್ಕೂಲ್" ಪಟ್ಟಡ ಬಿದ್ದಪ್ಪನವರು ಕಟ್ಟಿಸಿದ್ದು **1911**ನೇ ಇಸವಿ ಯಲ್ಲಿ. ಇಂದು ಹಿರಿಯ ಪ್ರಾಥಮಿಕ ಶಾಲೆಯಾಗಿ ಮಾರ್ಪಾಡಾಗಿದೆ. ಇವರ ಮಗ)

ನಿಮಗೆ ನಿಮ್ಮ ತಂದೆಯವರು, ನಮಗಳಿಗೆ ನೀವು ಹಾಕಿ ಕೊಟ್ಟ ಮಾರ್ಗದರ್ಶನ ನಮಗೆ ದಾರಿದೀಪವಾಗಿದೆ. ನಿಮ್ಮ ನೆನಪು ಸದಾ ಇರುವುದಲ್ಲದೆ ನಿಮ್ಮ ದಿವ್ಯಾತ್ಮಕ್ಕೆ ಚಿರಶಾಂತಿಯನ್ನು ಕುಲದೇವುರು ನೀಡಲಿ ಎಂದು ನಾವು ಸದಾ ಹಾರೈಸುತ್ತಿರುವೆವು.

ಪತ್ನಿ, ಮಕ್ಕಳು, ಸೊಸೆಯಂದಿರು,
ಅಳಿಯಂದಿರು ಮತ್ತು ಮೊಮ್ಮಕ್ಕ'

ವಾರ್ಷಿಕ ಪುಣ್ಯಸ್ಮರಣೆ



ಜನನ : 16-9-1942
ಮರಣ : 14-8-1998

ಮಿಲಿಟರಿ ಸೇರಿದ್ದು : 20-6-1961
ನಿವೃತ್ತಿ : 1-5-1977

ದಿII ಪಾಣತ್ತಲೆ ಗಣಪತಿ ಸೋಮಪ್ಪ

ನೀವು ನಮ್ಮನ್ನಗಲಿ ಇಂದಿಗೆ ಒಂದು ವರ್ಷ ಸಂದಿದೆಯಾದರೂ ಸದಾ ನಿಮ್ಮ ಸವಿನೆನಪು ನಮ್ಮೆಲ್ಲರ ಮನದಲ್ಲಿ ಅಚ್ಚಳಿಯದೆ ಉಳಿದಿದೆ. ಸದಾ ಪ್ರತಿಬಿಂಬಿಸುತ್ತಿರುವ ನಿಮ್ಮ ಸವಿನೆನಪುಗಳೊಂದಿಗೆ ಪ್ರತಿಧ್ವನಿಸುತ್ತಿರುವ ನಿಮ್ಮ ಹಿತ ನುಡಿಗಳು ನಮ್ಮ ಬದುಕಿನಲ್ಲಿ, ಅರಿವಾದಗಲೆಲ್ಲಾ ಕಣ್ಣಂಚಿನಲ್ಲಿ ಮಿಂಚಿ ಹರಿಯುವ ಈ ಕಂಬನಿ ನಿಮ್ಮ ಅಗಲಿಕೆಯ ನೋವನ್ನು ನಿವಾರಿಸುವುದೆ? ಅಲ್ಲದೆ ನೀವು ನಮ್ಮೆಲ್ಲರನ್ನೂ ಆಶೀರ್ವದಿಸುವದರೊಂದಿಗೆ ನಿಮ್ಮ ಆತ್ಮಕ್ಕೆ ಭಗವಂತನು ಚಿರಶಾಂತಿಯನ್ನು ಕರುಣಿಸಲಿ ಎಂದು ಪ್ರಾರ್ಥಿಸುತ್ತೇವೆ.

ಹುಟ್ಟಿದ್ದು ಚೆಟ್ಟಿಮಾನಿ, ಸಿಂಗತ್ತೂರು ಗ್ರಾಮದ ಶಾಲೆಯಲ್ಲಿ ಓದಿ, ಮಡಿಕೇರಿಯಲ್ಲಿ ಪಿ.ಯು.ಸಿ. ಮುಗಿಸಿ, 1961ರಲ್ಲಿ ಮಿಲಿಟರಿ ಸೇರಿ ಹದಿನಾರು ವರ್ಷ ಸರ್ವಿಸ್ ಮಾಡಿ, ಮೈಕೋ ಸಂಸ್ಥೆಯಲ್ಲಿ 1979ಕ್ಕೆ ಕೆಲಸಕ್ಕೆ ಸೇರಿರುತ್ತಾರೆ. ಸೇವೆಯಲ್ಲಿರುವಾಗಲೇ ದೈವಾಧೀನರಾದರು.

ಸಿದ್ದಾಪುರ ಕರಡಿಗೋಡು ಗ್ರಾಮದ ಲೇಟ್ ಮಿತ್ತೂರು ಸೋಮಯ್ಯನವರ ಪ್ರಥಮ ಪುತ್ರಿ ಕಮಲಾಕ್ಷಿಯವರನ್ನು ವಿವಾಹವಾಗಿದ್ದು ಇವರಿಗೆ ಮೂರು ಮಕ್ಕಳು, ಎರಡು ಹೆಣ್ಣು ಹಾಗೂ ಒಂದು ಗಂಡು ಇದ್ದಾರೆ. ಚೈನಾ, ಬಾಂಗ್ಲಾದೇಶ್ ಮತ್ತು ಪಾಕಿಸ್ತಾನ್ ಯುದ್ಧದಲ್ಲಿ ಪಾಲ್ಗೊಂಡಿರುತ್ತಾರೆ.

ಪತ್ನಿ ಕಮಲಾಕ್ಷಿ
ಮಕ್ಕಳು ಕವಿತ, ಸವಿತ, ರೋಶನ್
ಅಳಿಯ ಹರೀಶ್ ಹಾಗೂ ಬಂಧು ಬಳಗದವರು.

ನಿಮ್ಮ ಆತ್ಮಕ್ಕೆ ಸದಾ ಶಾಂತಿಯನ್ನು ಕರುಣಿಸಲಿ ಎಂದು ಭಗವಂತನನ್ನು ಪ್ರಾರ್ಥಿಸುತ್ತಿರುವ ನಿಮ್ಮ ಮನೆಯುವರು.
ಪತ್ನಿ, ಮಕ್ಕಳು, ಅಳಿಯ ಹಾಗೂ ಕಾವೇರಿನಾಡು ಬಳಗದವರು ಮತ್ತು ಕೊಡಗು ಸಂಗಾತಿ ಸಂಸ್ಥೆಯವರು.

Kodagu Sangathi Kannada Fortnightly Edited, Published, Printed & Owned by Pattada P. Sheelamani, No. 35, Savitha Nilaya, I Cross, 4th Block, **Jayalaxmipuram, Mysore - 12.** And **SANGATHI** Office ✆ **: 0821/516771.** And Printed at Sri Guru Raghavendra Printers, 489, Devamba Agrahara, K. R. Mohalla, Mysore - 24. ✆ : 0821/431792.